ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 18 ಬುಧವಾರ 2025

ಸಂಪುಟ: 46 | ಸಂಚಿಕೆ: 62 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಉನ್ನತ ಶಿಕ್ಷಣದಲ್ಲಿ ಪರಿಸರ ಪಠ್ಯಕ್ರಮ

● ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ಪರಿಸರ ಶುದ್ಧವಿದ್ದರಷ್ಟೇ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಾಧ್ಯ ● ಜನಸಂಖ್ಯೆ ಹೆಚ್ಚಳವೂ ಪರಿಸರ ನಾಶಕ್ಕೆ ಕಾರಣ



ಬೆಂಗಳೂರಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಬೆಂಗಳೂರು, ಜೂ.17(ಕೆಎಂಶಿ)– ಉನ್ನತ ಶಿಕ್ಷಣದಲ್ಲಿ ಪರಿಸರ ವಿಷಯವನ್ನು ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿ, ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಬಗೆಗಿನ ಜ್ಞಾನ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅತ್ಯಂತ ಅವಶ್ಯಕವಾಗಿದೆ.

ಮಾಲಿನ್ಯ ಕೊನೆಗಾಣಿಸುವುದು ಕಷ್ಟದ ಕೆಲಸವಾದರೂ ಮಾಡಲೇಬೇಕಿದೆ, ಪರಿಸರ ಶುದ್ಧವಾಗಿದ್ದರೆ ಜನರ ಆರೋಗ್ಯ, ಪ್ರಕೃತಿ ಉಳಿಸಿಕೊಳ್ಳಲು ಸಾಧ್ಯ, ಪ್ರಕೃತಿ ಮನುಷ್ಯನ ಆಸೆಗಳನ್ನು ಈಡೇರಿಸುತ್ತದೆ. ದುರಾಸೆಗಳನ್ನಲ್ಲ ಎಂಬುದಾಗಿ ಮಹಾತ್ಮ ಗಾಂಧಿ ಹೇಳಿದ್ದರು. ದುರಾಸೆಯಿಂದ ಪ್ರಕೃತಿ ನಾಶ ಮಾಡಿದರೆ ನಮ್ಮನ್ನು ನಾವೇ ನಾಶ ಮಾಡಿಕೊಂಡಂತೆ, ಕರ್ನಾಟಕದಲ್ಲಿನ ಪಶ್ಚಿಮ ಘಟ್ಟ, ವೈವಿಧ್ಯಮಯ ಕಾಡು, ನದಿಗಳು, ಜೀವ ಸಂಪತ್ತನ್ನು ಕಾಪಾಡಬೇಕು.

ಪರಿಸರ ಕಾಪಾಡಿದರೆ ಅದು ನಮ್ಮನ್ನು ಕಾಪಾಡುತ್ತದೆ, ಇಂದು ಬೋಧಿಸಲಾದ ಪ್ರತಿಜ್ಞಾ ವಿಧಿಯನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಬೆಂಗಳೂರು ಒಂದರಲ್ಲೇ ದಿನವೊಂದಕ್ಕೆ 900 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತದೆ. ರಾಜಧಾನಿ 1.50 ಕೋಟಿ ಜನಸಂಖ್ಯೆ ಹೊಂದಿದೆ. ಜನಸಂಖ್ಯೆ ಬೆಳೆದಂತೆ ಪರಿಸರ ಹಾನಿ ಹೆಚ್ಚುತ್ತಿದೆ. ವಿಶ್ವದ ಜನಸಂಖ್ಯೆಯಲ್ಲಿ ಭಾರತ ಒಂದನೇ ಸ್ಥಾನದಲ್ಲಿದೆ. ಜನಸಂಖ್ಯೆ ನಿಯಂತ್ರಣ ಜೊತೆಗೆ ಪರಿಸರ ಕುರಿತ ಜ್ಞಾನವನ್ನೂ ಬೆಳೆಸಿಕೊಳ್ಳಬೇಕಿದೆ. ರಾಸಾಯನಿಕ ಗೊಬ್ಬರಗಳನ್ನು ಯಥೇಚ್ಛವಾಗಿ ಬಳಸಿ ಮಣ್ಣಿನ ಫಲವತ್ತತೆ ಕಡಿಮೆಯಾಗಿದೆ, ಹೀಗೇ ಮುಂದುವರೆದರೆ ಮುಂದೊಂದು ದಿನ ಕರ್ನಾಟಕ ಮರುಭೂಮಿಯಾಗಲಿದ್ದು, ಈಗಲೇ ಎಚ್ಚರ ವಹಿಸಿ, ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕಿದೆ ಎಂದರು.

ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಮರುಬಳಕೆ ಘಟಕದಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಪ್ಲಾಸ್ಟಿಕ್‌ಗೆ ಪರ್ಯಾಯ ವ್ಯವಸ್ಥೆ ಕಂಡುಕೊಳ್ಳಬೇಕು, ಗಿಡ–ಮರಗಳನ್ನು ನೆಟ್ಟು ಬೆಳೆಸೋಣ, ಪುನರ್ಬಳಕೆ ಮತ್ತು ಮರುಬಳಕೆ ಪ್ರೋತ್ಸಾಹಿಸಿ, ಏಕ ಬಳಕೆ ಪ್ಲಾಸ್ಟಿಕ್ ನಿಲ್ಲಿಸೋಣ.

ಸಾರ್ವಜನಿಕ ಸಾರಿಗೆ ಉಪಯೋಗಿಸೋಣ, ಹತ್ತಿರದ ಸ್ಥಳಗಳಿಗೆ ನಡೆದು ಹೋಗುವ ಅಥವಾ ಸೈಕಲ್ ಬಳಕೆ ಮಾಡೋಣ, ಹನಿ–ಹನಿ ನೀರನ್ನು ಸಂಗ್ರಹಿಸಿ ಬಳಸಿಕೊಳ್ಳೋಣ, ನೀರು ಪೋಲು ಮಾಡದೇ ಜವಾಬ್ದಾರಿಯುತವಾಗಿ ಬಳಸೋಣ, ಸಾಧ್ಯವಾದ ಮಟ್ಟಿಗೆ ಪ್ರತಿಯೊಬ್ಬರೂ ■6ನೇ ಪುಟಕ್ಕೆ

ವಂಚಕಿ ಐಶ್ವರ್ಯಗೌಡ ಪ್ರಕರಣ ಮಾಜಿ ಸಂಸದ ಡಿ.ಕೆ.ಸುರೇಶ್‌ಗೆ ಇಡಿ ಸಮನ್ಸ್

ಬೆಂಗಳೂರು, ಜೂ.17(ಕೆಎಂಶಿ)– ವಂಚಕಿ ಐಶ್ವರ್ಯಗೌಡ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ, ಮಾಜಿ ಸಂಸದ ಡಿ.ಕೆ.ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇಡಿ) ನೋಟಿಸ್ ನೀಡಿದೆ.



ಡಿ.ಕೆ.ಸುರೇಶ್

ಚಿನ್ನಾಭರಣ ಅಂಗಡಿ ಮಾಲೀಕರಿಗೆ ಕೋಟ್ಯಾಂತರ ರೂ. ವಂಚನೆ ವೇಳೆ ಸುರೇಶ್ ಹೆಸರನ್ನು ಬಳಸಿದ್ದ ಆರೋಪ ಐಶ್ವರ್ಯಗೌಡ ಮೇಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸರು ತನಿಖೆ ನಡೆಸಿ, ಐಶ್ವರ್ಯಗೌಡ ಅವರನ್ನು ಬಂಧಿಸಿದ್ದರು.

ಕೋಟ್ಯಾಂತರ ರೂ. ಚಿನ್ನಾಭರಣ ವ್ಯವಹಾರಕ್ಕೆ ಸಂಬಂಧಿಸಿದಂತೆ ಇ.ಡಿ. ತನಿಖೆ ನಡೆಸುತ್ತಿದ್ದು, ಐಶ್ವರ್ಯ ನೀಡಿದ ಸುಳಿವು ಮತ್ತು ದಾಖಲೆ ಆಧರಿಸಿ ಸುರೇಶ್ ವಿಚಾರಣೆಗೆ ನೋಟಿಸ್ ನೀಡಿದೆ. ಜೂನ್ 19ರಂದು ವಿಚಾರಣೆಗೆ ಬರುವಂತೆ ಸಮನ್ಸ್ ಜಾರಿ ಮಾಡಿದ್ದು, ಸುರೇಶ್ ಅಂದು ತಮಗೆ ಪೂರ್ವ ನಿಗದಿತ ಕಾರ್ಯಕ್ರಮ ಇರುವುದರಿಂದ ಜೂನ್ 23ರಂದು ಹಾಜರಾಗುವುದಾಗಿ ಪತ್ರ ಬರೆದಿದ್ದಾರೆ.

ಯಾವುದೇ ಸಂಬಂಧವಿಲ್ಲ: ಈ ಮಧ್ಯೆ, ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಸುರೇಶ್, ತಮಗೂ ಐಶ್ವರ್ಯಗೌಡ ಚಿನ್ನಾಭರಣ ವಂಚನೆ ಪ್ರಕರಣಕ್ಕೂ ■6ನೇ ಪುಟಕ್ಕೆ

ಐಶ್ವರ್ಯಗೆ ಜಾಮೀನು

ಚಿನ್ನ ವಂಚನೆಗೆ ಸಂಬಂಧಿಸಿದ ಪಿಎಂಎಲ್‌ಎ ಪ್ರಕರಣದಲ್ಲಿ ಐಶ್ವರ್ಯಗೌಡ ಅವರಿಗೆ ಬೆಂಗಳೂರಿನ 1ನೇ ಸಿಸಿಎಚ್ ನ್ಯಾಯಾಲಯ ಮಂಗಳವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.



ಜಾಮೀನು ಕೋರಿ ಐಶ್ವರ್ಯಗೌಡ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಬೆಂಗಳೂರಿನ 1ನೇ ಸಿಸಿಎಚ್ ನ್ಯಾಯಾಲಯ, ಇಂದು ಷರತ್ತುಬದ್ಧ ಜಾಮೀನು ನೀಡಿದೆ. 5 ಲಕ್ಷ ರೂಪಾಯಿ ಬಾಂಡ್, ಇಬ್ಬರ ಶೂರಿಟಿ ನೀಡಬೇಕು. ವಿಳಾಸ ಬದಲಾವಣೆ ಮಾಡಬಾರದು ಮತ್ತು ಬೆಂಗಳೂರು ಬಿಟ್ಟು ಹೋಗಬಾರದು ಎಂದು ಕೋರ್ಟ್ ಆರೋಪಿಗೆ ಷರತ್ತು ವಿಧಿಸಿದೆ. ■6ನೇ ಪುಟಕ್ಕೆ

ಕೊಡಗಿನಾದ್ಯಂತ ಭಾರಿ ಮಳೆ; ಹಲವೆಡೆ ಸಂಚಾರ ಬಂದ್

■ಕಾವೇರಿಯಲ್ಲಿ ಪ್ರವಾಹ ಹಾವಳಿ ■ಹಾರಂಗಿಯಿಂದ 18 ಸಾವಿರ ಕ್ಯೂಸೆಕ್ ನೀರು ಬಿಡುಗಡೆ



ಮಡಿಕೇರಿ, ಜೂ.17– ಕೊಡಗಿನಾದ್ಯಂತ ಭಾರಿ ಮಳೆ ಸುರಿಯುತ್ತಿದ್ದು, ಜನ ಜೀವನ ಅಸ್ತವ್ಯಸ್ತವಾಗಿದೆ. ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಕೆಲವು ಭಾಗಗಳಲ್ಲಿ ಸಂಚಾರ ಬಂದ್ ಆಗಿದೆ.

ತಾಲೂಕಿನ ಚೇರಂಬಾಣೆ ಗ್ರಾಮ ಪಂಚಾಯತಿ ವ್ಯಾಪ್ತಿಯ ದೋಣಿ ಕಾಡು ಎಂಬಲ್ಲಿ ಕಾವೇರಿ ನದಿ ಪ್ರವಾಹದಿಂದಾಗಿ ರಸ್ತೆ ಸಂಪರ್ಕ ಕಡಿತವಾಗಿದೆ. ಸ್ಥಳೀಯರ ಅನುಕೂಲಕ್ಕಾಗಿ ದೋಣಿ ವ್ಯವಸ್ಥೆ ಮಾಡಲಾಗಿದೆ. ಸ್ಥಳಕ್ಕೆ ತಹಶೀಲ್ದಾರ್ ಪ್ರವೀಣ್ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ಹೊಳೆಕೆರೆ ರಸ್ತೆ ಕಾವೇರಿ ನದಿ ಪ್ರವಾಹದಿಂದ ಮುಳುಗಡೆಯಾಗಿದೆ. ಕಂದಾಯ ಪರಿವೀಕ್ಷಕರು ಸ್ಥಳ ಪರಿಶೀಲನೆ ನಡೆಸಿ, ಅಪಾಯದ ಸ್ಥಳಗಳಿಗೆ ತೆರಳದಂತೆ ಹಾಗೂ ಪ್ರವಾಹ ಉಂಟಾಗುವ ಭಾಗದ ಜನರು ಕಾಳಜಿ ಕೇಂದ್ರಕ್ಕೆ ತೆರಳಲು ಸೂಚಿಸಿದ್ದಾರೆ.

ನಾಪೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆರಿಯಪರಂಬು ಕಲ್ಲುಮೊಟ್ಟೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನದಿ ಪ್ರವಾಹದಿಂದ ಕಡಿತಗೊಂಡಿದೆ. ಈ ರಸ್ತೆಯಲ್ಲಿ ಕಿರು ಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಗ್ರಾಮಸ್ಥರಿಗೆ ಸಂಚರಿಸಲು ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿತ್ತು. ಆದರೆ ವಿಪರೀತ ಮಳೆ ಸುರಿದ ಪರಿಣಾಮ ತಾತ್ಕಾಲಿಕ ರಸ್ತೆಯ ಮೇಲೆ ಕಾವೇರಿ ನದಿ ಪ್ರವಾಹ ಬಂದಿದ್ದು ಸಂಚಾರ ಸ್ಥಗಿತಗೊಂಡಿದೆ. ಗ್ರಾಮಸ್ಥರು ಪಟ್ಟಣದಿಂದ ಕೊಡವ ಸಮಾಜ ಮಾರ್ಗವಾಗಿ ಕಕ್ಕುಂದ ಕಾಡು ವೆಂಕಟೇಶ್ವರ ದೇವಾಲಯ ರಸ್ತೆಯ ಮೂಲಕ ಸಂಚರಿಸುತ್ತಿದ್ದಾರೆ.

ಪ್ರವಾಹದಲ್ಲಿ 'ಸಂಗಮ': ತಲಕಾವೇರಿ, ಭಾಗಮಂಡಲ, ಕೋರಂಗಾಲ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಭಾಗ ಮಂಡಲ ತ್ರಿವೇಣಿ ಸಂಗಮ ಪ್ರವಾಹದಲ್ಲಿ ಸಂಪೂರ್ಣ ಮುಳುಗಿದೆ. ಸಂಗಮದ ಬಳಿ ಇರುವ ಉದ್ಯಾನವನ ಕಾವೇರಿ ನದಿ ನೀರಿನಲ್ಲಿ ಮುಳುಗಡೆಯಾಗಿದ್ದು, ಇದೇ ರೀತಿ ಮಳೆ ಸುರಿದಲ್ಲಿ ಭಗಂಡೇಶ್ವರ ದೇವಾಲಯದ ಆವರಣಕ್ಕೆ ಕಾವೇರಿ ನದಿ ನೀರು ನುಗ್ಗುವ ಎಲ್ಲಾ ಸಾಧ್ಯತೆಗಳಿವೆ. ಇನ್ನು ರಸ್ತೆ ಬದಿಯಲ್ಲಿದ್ದ ಅಂಗಡಿಗಳಿಗೆ ನದಿ ನೀರು ನುಗ್ಗಿದ್ದು, ಮಾಲೀಕರು ಅಂಗಡಿಗಳನ್ನು ತೆರವುಗೊಳಿಸಿದ್ದಾರೆ.

ಮಳೆಯಿಂದ ಮನೆ ಹಾನಿ: ನಾಪೋಕ್ಲು ವ್ಯಾಪ್ತಿಯ ಕಕ್ಕಬ್ಬೆ ಗ್ರಾಮ ಪಂಚಾಯಿತಿಯ ಕುಂಜಿಲ ಗ್ರಾಮದ ಕೆ.ಎಂ.ಮರಿಯಮ್ಮ ಎಂಬುವರ ವಾಸದ ಮನೆಯ ■6ನೇ ಪುಟಕ್ಕೆ

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ದುರಂತ

ಸರ್ಕಾರದ ವೈಫಲ್ಯ ಖಂಡಿಸಿ ಬಿಜೆಪಿ ಪ್ರತಿಭಟನೆ

● 11 ಮಂದಿ ಅಮಾಯಕರ ಸಾವಿನ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ, ಗೃಹ ಸಚಿವರ ರಾಜೀನಾಮೆಗೆ ಆಗ್ರಹ ● ಸಿಎಂ ಮನೆ ಮುತ್ತಿಗೆಗೆ ಯತ್ನ: ಬಿಜೆಪಿ ಹಲವು ನಾಯಕರು ಪೊಲೀಸ್ ವಶಕ್ಕೆ



ಬೆಂಗಳೂರು ಕಾಲ್ತುಳಿತ ದುರಂತದ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ ನಡೆಸಿತು.

ಬೆಂಗಳೂರು, ಜೂ.17(ಕೆಎಂಶಿ)– ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಗೆಲುವಿನ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತಕ್ಕೆ ಸರ್ಕಾರದ ವೈಫಲ್ಯವೇ ಕಾರಣವಾಗಿದ್ದು, ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ಇಂದು ಬೃಹತ್ ಪ್ರತಿಭಟನೆ ನಡೆಸಿತು.

ರಾಜೀನಾಮೆಗೆ ಒತ್ತಾಯಿಸಿ ಫ್ರೀಡಂಪಾರ್ಕ್‌ನಿಂದ ಮೆರವಣಿಗೆಯಲ್ಲಿ ತೆರಳಿ ಮುಖ್ಯಮಂತ್ರಿ ಮನೆ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಮಂಡಲದ ಪ್ರತಿಪಕ್ಷ ನಾಯಕರಾದ ಆರ್.ಅಶೋಕ್ ಹಾಗೂ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಪಕ್ಷದ ಸಂಸದರು ಮತ್ತು ಶಾಸಕರನ್ನು ಪೊಲೀಸರು ವಶಕ್ಕೆ ಪಡೆದರು. ಇದಕ್ಕೂ ಮುನ್ನ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ನಾಯಕರು, ಕಾಂಗ್ರೆಸ್ ಸರ್ಕಾರ ತನ್ನ ಪ್ರಚಾರದ ತೆವಲಿಗೆ ಸರಿಯಾದ ವ್ಯವಸ್ಥೆ ಮಾಡದೆ, ಆತುರಾತುರವಾಗಿ ಕಾರ್ಯಕ್ರಮ ಆಯೋಜಿಸಿ ಅಮಾಯಕರ ಬಲಿ ತೆಗೆದುಕೊಂಡಿತು ಎಂದು ದೂರಿದರು.

ಪ್ರಕರಣದಲ್ಲಿ 11 ಮಂದಿ ಕ್ರೀಡಾಭಿಮಾನಿಗಳು ಸಾವಿಗೀಡಾಗಿ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡರು, ಇದರ ನೈತಿಕ ಹೊಣೆ ಹೊತ್ತು ಸಿಎಂ, ಡಿಸಿಎಂ, ಗೃಹ ಸಚಿವರು ರಾಜೀನಾಮೆ ನೀಡಬೇಕು. ವಿಧಾನಸೌಧದ ಮುಂದೆ ಆರ್‌ಸಿಬಿ ತಂಡವನ್ನು ನೋಡಲು ■6ನೇ ಪುಟಕ್ಕೆ

ಹೆಣಗಳ ಮೇಲೆ ರಾಜಕೀಯ ಬಿಜೆಪಿಗೆ ಹೊಸದಲ್ಲ...

ಬೆಂಗಳೂರು, ಜೂ.17(ಕೆಎಂಶಿ)– ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ರಾಜೀನಾಮೆ ಕೇಳುವ ಮೊದಲು ಇಂತಹ ಅವಘಡಗಳು ನಡೆದ ಸಂದರ್ಭದಲ್ಲಿ ರಾಜೀನಾಮೆ ನೀಡಿದ ಬಿಜೆಪಿ ನಾಯಕರ ಪಟ್ಟಿ ಬಿಡುಗಡೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.



ಈ ಸಂಬಂಧ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಾಲ್ತುಳಿತ ಒಂದು ಅವಘಡ, ಜವಾಬ್ದಾರಿಯುತ ಸರ್ಕಾರವಾಗಿ ಘಟನೆ ಹೊಣೆ ಹೊತ್ತು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೇರಿದಂತೆ ಹಿರಿಯ ಅಧಿಕಾರಿಗಳ ಅಮಾನತು ಮಾಡಿದ್ದೇವೆ. ರಾಜ್ಯ ಗುಪ್ತಚರ ಇಲಾಖೆ ಮುಖ್ಯಸ್ಥರ ವರ್ಗಾವಣೆ ಮಾಡಿದ್ದೇವೆ. ನನ್ನ ರಾಜಕೀಯ ಕಾರ್ಯದರ್ಶಿಯನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದೇನೆ ■6ನೇ ಪುಟಕ್ಕೆ

ಮೈಸೂರಲ್ಲಿ ಬಿಜೆಪಿ ಭಾರಿ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದ ಮುಂಭಾಗ ಮೈಸೂರು ನಗರ ಬಿಜೆಪಿ ವತಿಯಿಂದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಸಂಭ್ರಮೋತ್ಸವದ ವೇಳೆ ನಡೆದ ಕಾಲ್ತುಳಿತ ದುರಂತ ಪ್ರಕರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ,ಉಪ ಮುಖ್ಯಮಂತ್ರಿ ಹಾಗೂ ಗೃಹಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.17(ಜಿಎ)– ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಸಂಭ್ರಮೋತ್ಸವದ ವೇಳೆ ನಡೆದ ಕಾಲ್ತುಳಿತ ದುರಂತ ಪ್ರಕರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ,ಉಪ ಮುಖ್ಯಮಂತ್ರಿ ಹಾಗೂ ಗೃಹಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಮೈಸೂರು ನಗರ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಕಾರ್ಯಕರ್ತರು 'ಬೇಕೆ ಬೇಕು ನ್ಯಾಯ ಬೇಕು', 'ಎಲ್ಲಿಯ ತನಕ ಹೋರಾಟ ಸಿಎಂ ರಾಜೀನಾಮೆ ನೀಡುವ ತನಕ ಹೋರಾಟ', '11 ಮಂದಿ ಅಮಾಯಕರ ಸಾವಿಗೆ ಕಾರಣವಾದ ಸರ್ಕಾರಕ್ಕೆ ಧಿಕ್ಕಾರ', 'ತುಘಲಕ್ ಆಡಳಿತ ನಡೆಸುತ್ತಿರುವ ಡಿ.ಕೆ.ಶಿವಕುಮಾರ್‌ಗೆ ಧಿಕ್ಕಾರ', ಬಿಜೆಪಿಯ ಹೋರಾಟಕ್ಕೆ ಜಯವಾಗಲಿ ಹೀಗೆ ವಿವಿಧ ಘೋಷಣೆಗಳನ್ನು ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾಧ್ಯಮಗಳೊಂದಿಗೆ ಮಾತನಾಡಿ, ಬೆಂಗಳೂರು ನಗರದಲ್ಲಿ ನಡೆದ ಆರ್‌ಸಿಬಿ ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಪೊಲೀಸರ ಅನುಮತಿ ಇಲ್ಲದಿದ್ದರೂ ಪ್ರಚಾರಕ್ಕಾಗಿ ಸಿದ್ದರಾಮಯ್ಯ–ಡಿ.ಕೆ. ಶಿವಕುಮಾರ್ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಕಾರ್ಯಕ್ರಮ ಆಯೋಜನೆ ಮಾಡಿದ್ದರಿಂದಾಗಿ ಅಮಾಯಕ ಅಭಿಮಾನಿಗಳ ಸಾವು ಸಂಭವಿಸಲು ಕಾರಣವಾಯಿತು ಎಂದು ದೂರಿದರು.

ಆಯುಕ್ತರು ಬಲಿಪಶು: ಮೆರವಣಿಗೆ ಹಾಗೂ ಎರಡು ಕಡೆಗಳಲ್ಲಿ ವಿಜಯೋತ್ಸವ ಆಚರಣೆ ಮಾಡುವುದು ಬೇಡ ಎಂದು ಪೊಲೀಸರು ವರದಿ ನೀಡಿದ್ದರು. ಇದನ್ನು ಲೆಕ್ಕಿಸದೆ ಕಾರ್ಯಕ್ರಮ ಆಯೋಜನೆ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ■6ನೇ ಪುಟಕ್ಕೆ

ಮಹಾರಾಜ ಪ್ರೌಢಶಾಲೆಗೆ ಕಾಯಕಲ್ಪ; ಹಳೆ ವಿದ್ಯಾರ್ಥಿಗಳ ಸಂಘ ಸಂಕಲ್ಪ



ಮೈಸೂರಿನ ಮಹಾರಾಜ ಪ್ರೌಢಶಾಲೆಯ ಗ್ರಂಥಾಲಯದಲ್ಲಿ ಮಂಗಳವಾರ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್ (ಮಧ್ಯ ಕುಳಿತಿರುವರು) ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

> "ಖಾಸಗಿ ಶಾಲೆಗಳ ಪ್ರಭಾವದ ಹಿನ್ನೆಲೆಯಲ್ಲಿ ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆ ಕಡಿಮೆ ಇದೆ. ಅಲ್ಲದೆ ಸರ್ಕಾರಿ ಶಾಲೆ ಎಂಬ ತಾತ್ಸಾರ ಮನೋಭಾವದ ಕಾರಣ ಪೋಷಕರು, ಮಕ್ಕಳನ್ನು ಈ ಶಾಲೆಗೆ ಹೆಚ್ಚಾಗಿ ಸೇರಿಸುತ್ತಿಲ್ಲ. ಈ ಹಿನ್ನೆಲೆ ಹಳೆ ವಿದ್ಯಾರ್ಥಿಗಳಾದ ನಾವು ಕಲಿತ ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಈ ಶಾಲೆಗೆ ಕಾಯಕಲ್ಪ ನೀಡಲು ವಿಶಿಷ್ಟ ಕಾರ್ಯಕ್ರಮ ರೂಪಿಸಿದ್ದೇವೆ. **–ಶ್ರೀಧರರಾಜ ಅರಸ್**

- ಸಂಘದ ಅಧ್ಯಕ್ಷ ಶ್ರೀಧರರಾಜ ಅರಸ್ ಮಾಹಿತಿ
- 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ
- ಉಚಿತ ಪಠ್ಯಪುಸ್ತಕ ವಿತರಣೆ ಮಾಡಲು ನಿರ್ಧಾರ
- ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಬಹುಮಾನ
- ಶಾಲೆಯ ಗತವೈಭವ ಮರುಕಳಿಸಲು ನಿರ್ಣಯ

ಮೈಸೂರು, ಜೂ.17(ಬಿಎಲ್‌ಯು)– ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಮಹಾರಾಜ ಪ್ರೌಢಶಾಲೆಗೆ ಕಾಯಕಲ್ಪ ನೀಡಿ, ಅದರ ವೈಭವ ಮರುಕಳಿಸುವಂತೆ ಮಾಡಲು ಹಳೆ ವಿದ್ಯಾರ್ಥಿಗಳ ಸಂಘ ಹಲವು ವಿಶಿಷ್ಟ ಕಾರ್ಯಕ್ರಮ ರೂಪಿಸಿದೆ ಎಂದು ಸಂಘದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್ ಇಂದಿಲ್ಲಿ ತಿಳಿಸಿದರು.

ಶಾಲೆಯ ಗ್ರಂಥಾಲಯದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1833ರಲ್ಲಿ ರಾಜಾಸ್ ಫ್ರೀ ಸ್ಕೂಲ್ ಆಗಿ ಆರಂಭಗೊಂಡ ಇದು, ನಂತರ ಮಹಾರಾಜ ಪ್ರೌಢಶಾಲೆಯಾಗಿ ಮರು ನಾಮಕರಣಗೊಂಡಿತು. ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್, ಆರ್.ಕೆ.ನಾರಾಯಣ್ ಸೇರಿದಂತೆ ಹಲವು ಗಣ್ಯರು ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳಾಗಿದ್ದಾರೆ.

ಶಾಲೆ ಮುಗಿದ ನಂತರ ಸಂಜೆ 4.30 ಗಂಟೆಗೆ 10 ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ಉಚಿತವಾಗಿ ನಡೆಸುತ್ತೇವೆ. ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪಠ್ಯ ಪುಸ್ತಕಗಳನ್ನು ಕೂಡ ಉಚಿತವಾಗಿ ನೀಡುತ್ತೇವೆ. ಸಂಜೆ ನಂತರ ಪಾಠ ಕೇಳುವ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಉತ್ಸಾಹ ಹೆಚ್ಚಿಸಲು ಕಾಫಿ, ಟೀ, ಬಿಸ್ಕೆಟ್ ನೀಡುತ್ತೇವೆ ಎಂದು ಹೇಳಿದರು.

ಇಲ್ಲಿನ ಮಕ್ಕಳು ಓದಿನಲ್ಲಿ ಹಿಂದೆ ಇದ್ದಾರೆ. ಆದರೆ ನಾವು ವಿಶೇಷ ತರಗತಿ ನಡೆಸುವಾಗ ಯಾವ ಮಕ್ಕಳನ್ನು ಕೀಳರಿಮೆಯಿಂದ ನೋಡದೆ ಗುಣಮಟ್ಟದ ಶಿಕ್ಷಣ ನೀಡುತ್ತೇವೆ ಎಂದರು.

ಪ್ರಾಥಮಿಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಬಿ.ಕೆ.ಬಸವರಾಜು, ನಿವೃತ್ತ ಶಿಕ್ಷಕ ದೇವಿ ಪ್ರಸಾದ್ ಸೇರಿದಂತೆ ಹಲವರು ಸ್ವಯಂಪ್ರೇರಣೆಯಿಂದ ವಿಶೇಷ ತರಗತಿ ನಡೆಸಲು ಮುಂದೆ ಬಂದಿದ್ದಾರೆ ಎಂದರು.

ಈ ಮೂಲಕ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ದಿನವಾದ ಜುಲೈ 14ರಂದು ಬಹುಮಾನ ನೀಡಿ ಉತ್ತೇಜಿಸುತ್ತೇವೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಸಂಘದ ಸದಸ್ಯರೂ ಆದ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್‌ನ ನಿವೃತ್ತ ನಿರ್ದೇಶಕ ಪ್ರೊ.ಸಿ.ಜಿ.ವೆಂಕಟೇಶ್‌ಮೂರ್ತಿ ಮಾತನಾಡಿ, ಈ ಶಾಲೆಯ ಗತವೈಭವ ಹಾಗೂ ಪ್ರಬುದ್ಧತೆ ಮರುಕಳಿಸಲು ಶಾಲೆಯ ಅಭಿಮಾನಿಗಳಾದ ನಾವು ಪಾಠ ಮಾಡುತ್ತೇವೆ ಎಂದು ಹೇಳಿದರು.

ಈ ಶಾಲೆಯ ದಾಖಲಾತಿ ಹೆಚ್ಚಿಸಿ ಗುಣಾತ್ಮಕ ಬದಲಾವಣೆ ತರಲು ನಮ್ಮ ಜೊತೆ ಪೋಷಕರು ಕೂಡ ಕೈಜೋಡಿಸಬೇಕು. ಉತ್ತಮ ಫಲಿತಾಂಶ ತರಲು ನಾವು ಸಿದ್ಧರಿದ್ದು, ಪೋಷಕರು ಹೆಚ್ಚು ಮಕ್ಕಳನ್ನು ಈ ಶಾಲೆಗೆ ದಾಖಲಿಸಬೇಕು ಎಂದು ಆಗ್ರಹಿಸಿದರು.

ಸಂಘದ ಮತ್ತೊಬ್ಬ ಸದಸ್ಯರೂ, ಶಾಲೆಯ ನಿವೃತ್ತ ಪ್ರಾಂಶುಪಾಲ ಸಿ.ಎ.ಶ್ರೀಧರ್ ಮಾತನಾಡಿ, ಮಹಾರಾಜ ಪ್ರೌಢಶಾಲೆ ಮೈಸೂರು ವಿಶ್ವವಿದ್ಯಾನಿಲಯದ ತಾಯಿ ಬೇರು ಇದ್ದಂತೆ. ಆದರೆ ಖಾಸಗಿ ಶಾಲೆಗಳ ಪೈಪೋಟಿಯ ಕಾರಣ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಶಾಲೆಗೆ ಮಕ್ಕಳನ್ನು ಸೇರಿಸುತ್ತಿಲ್ಲ. ಒಂದು ಕಾಲದಲ್ಲಿ ಈ ಶಾಲೆಯ ತರಗತಿಯಲ್ಲಿ ಕೂರಲು ಸ್ಥಳಾವಕಾಶವಿಲ್ಲದ ಪರಿಸ್ಥಿತಿ ಇತ್ತು. ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಸೇರಿದಂತೆ ಬಹಳಷ್ಟು ಮಂದಿ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ. ಆದರೆ ಇಂದು ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುವ ಹಿನ್ನೆಲೆ ನಾವೆಲ್ಲಾ ಸೇರಿ ಇದಕ್ಕೆ ಕಾಯಕಲ್ಪ ನೀಡಲು ಉದ್ದೇಶಿಸಿದ್ದೇವೆ ಎಂದು ಹೇಳಿದರು.

ಮಹಾರಾಜ ಪ್ರೌಢಶಾಲೆಯ ಹಾಲಿ ಉಪಪ್ರಾಂಶುಪಾಲ ಡಾ.ಮಹೇಶ್ ಕೂಡ ಮಾತನಾಡಿ, ಈ ಶಾಲೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮೀಡಿಯಂ ತರಗತಿಗಳಿವೆ. ಪ್ರಸ್ತುತ 8ರಿಂದ 10ನೇ ತರಗತಿವರೆಗೆ 80 ವಿದ್ಯಾರ್ಥಿಗಳ ದಾಖಲಾತಿ ಇದೆ ಎಂದರು.

ಬೇರೆ ಯಾವ ಶಾಲೆಯಲ್ಲೂ ಸೀಟ್ ಸಿಗದ ಮಕ್ಕಳು ಇಲ್ಲಿ ಬಂದು ದಾಖಲಾಗುತ್ತಾರೆ. ಓದಿನಲ್ಲಿ ಹಿಂದೆ ಇರುವ ಇಲ್ಲಿನ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುತ್ತೇವೆ. ಇಲ್ಲಿ ದಾಖಲಾದ ನಂತರ ನಾವು ನೀಡುವ ಗುಣಮಟ್ಟದ ಶಿಕ್ಷಣದಿಂದ ಮಕ್ಕಳು ಒಳ್ಳೆಯ ಫಲಿತಾಂಶ ಪಡೆಯುತ್ತಿದ್ದಾರೆ ಎಂದು ಹೇಳಿದರು. ಹಳೆ ವಿದ್ಯಾರ್ಥಿಗಳ ಸಂಘದ ಖಜಾಂಚಿ ರಂಗಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶೇಷಾದ್ರಿಪುರಂ ಪದವಿ ಕಾಲೇಜಿನಿಂದ ಸ್ವಚ್ಛತಾ ಕಾರ್ಯ



ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ವತಿಯಿಂದ ನಡೆದ ಸ್ವಚ್ಛತಾ ಕಾರ್ಯ.

ಮೈಸೂರು, ಜೂ. 17– ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು, ಆಂತರಿಕ ಗುಣಮಟ್ಟ ಭರವಸೆ ಕೋಶ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಎನ್‌ಸಿಸಿ ಘಟಕ, ಇಕೋ ಕ್ಲಬ್ ಘಟಕ, ಚೇತನ ಹಿರಿಯ ವಿದ್ಯಾರ್ಥಿಗಳ ಸಂಘ ಹಾಗೂ ಕಾನ್ಫಿಡೆರೇಶನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ ಮತ್ತು ಮೈಸೂರು ಮಹಾನಗರಪಾಲಿಕೆ ಸಹಯೋಗದೊಂದಿಗೆ ಪರಿಸರ ದಿನಾಚರಣೆ ಪ್ರಯುಕ್ತ ನಮ್ಮ ಮೈಸೂರು ಸ್ವಚ್ಛ ಮೈಸೂರು ಘೋಷವಾಕ್ಯದ ಅಡಿಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಿತು. ಸ್ವಚ್ಛತಾ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರವನ್ನು ಮಾಡುವ ಉದ್ದೇಶದಿಂದ ಮೈಸೂರು ನಗರದ ಹೆಬ್ಬಾಳು ರಿಂಗ್ ರಸ್ತೆಯ ಆಸು ಪಾಸಿನಲ್ಲಿ ಇದ್ದಂತಹ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸುವುದರ ಮೂಲಕ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲಾಗಿತ್ತು. ಸ್ವಚ್ಛತಾ ಕಾರ್ಯಕ್ರಮ ಮುಗಿದ ನಂತರ ಮಹಾರಾಜ ಕಾಲೇಜಿನ ಕ್ರೀಡಾಂಗಣಕ್ಕೆ ತೆರಳಿ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಪ್ಲಾಸ್ಟಿಕ್ ಬಳಕೆ ತ್ಯಜಿಸುವುದಾಗಿ ನೀಡಿದ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮಾಧಿಕಾರಿ ಗುರುಮೂರ್ತಿ ಭಟ್, ಎನ್‌ಸಿಸಿ ಘಟಕದ ಅಧಿಕಾರಿ ಲೆಫ್ಟಿನೆಟ್ ಕುಮಾರ್, ಇಕೋ ಕ್ಲಬ್ ಘಟಕ ಸಂಯೋಜನಾಧಿಕಾರಿ ಪ್ರೊ.ಸೋನಿಯಾ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ನಾಗೇಂದ್ರ, ಪ್ರೊ.ಸಿದ್ದಪ್ಪ, ಎನ್‌ಎಸ್‌ಎಸ್ ಶಿಬಿರಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು, ಇಕೋ ಕ್ಲಬ್ ಘಟಕದ ವಿದ್ಯಾರ್ಥಿಗಳು, ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಗ್ನಿವೀರರಿಗೆ ಸೈನಿಕ ಅಕಾಡೆಮಿಯಿಂದ ಅಭಿನಂದನೆ



ಭಾರತೀಯ ಸೇನೆಯ ತರಬೇತಿ ಮುಗಿಸಿ, ಸೇನಾಸಮವಸ್ತ್ರದಲ್ಲಿ ತವರಿಗೆ ಮರಳಿರುವ ಅಗ್ನಿವೀರರಿಗೆ ಮೈಸೂರು ಬೆಳವಾಡಿಯ ಸೈನಿಕ ಅಕಾಡೆಮಿಯಲ್ಲಿ ಅದ್ದೂರಿಯಾಗಿ ಅಭಿನಂದಿಸಲಾಯಿತು. ಕೊಡಗಿನ ವೀರ ಮಂಜುನಾಥ್ ಟಿ.ವಿ. ಮತ್ತು ಕೋಲಾರದ ನವೀನಕುಮಾರ ಸೈನಿಕ ಅಕಾಡೆಮಿಯಲ್ಲೇ ತರಬೇತಿ ಪಡೆದಿದ್ದರು. ಈ ಸಂದರ್ಭದಲ್ಲಿ ಮಾಜಿ ಕಮಾಂಡೋ ಮತ್ತು ಸೈನಿಕ ಅಕಾಡೆಮಿ ಸಂಸ್ಥಾಪಕ ಶ್ರೀಧರ ಸಿ.ಎಂ., ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಪೈಲ್ವಾನ್ ರವಿ, ರೇವಣ್ಣ, ಕುಮಾರ, ಸಹ ಸಂಸ್ಥಾಪಕಿ ಅನಿತಾ ಶ್ರೀಧರ, ಅಧ್ಯಾಪಕರಾದ ರವಿ, ಸುನಿತಾ, ನಮ್ರತಾ, ವರ್ಷ, ಶ್ರೀಲಕ್ಷ್ಮಿ, ಚೇತನ್ ಹಿತೈಷಿಗಳಾದ ಮಾಜಿ ಸೈನಿಕ ಶಶಿಕಿರಣ್, ಯೋಧ ಹರೀಶ್ ಇತರರು ಉಪಸ್ಥಿತರಿದ್ದರು.

ಜವಾಹರ ನವೋದಯ ವಿದ್ಯಾಲಯ 6ನೇ ತರಗತಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.17–ಜವಾಹರ ನವೋದಯ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕಾಗಿ 6ನೇ ತರಗತಿಗಾಗಿ ಪ್ರವೇಶ ಪರೀಕ್ಷೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. 2026–27ನೇ ಶೈಕ್ಷಣಿಕ ವರ್ಷಕ್ಕಾಗಿ 6ನೇ ತರಗತಿಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು 2025–26ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಸರ್ಕಾರಿ, ಅನುದಾನಿತ, ಸರ್ಕಾರದ ಅನುಮತಿ, ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ಅಧ್ಯಯನ ಮಾಡುತ್ತಿರಬೇಕು. 01–05–2014 ರಿಂದ 31–07–2016 ರೊಳಗೆ ಜನಿಸಿರಬೇಕು ಮತ್ತು ಮೈಸೂರು ಜಿಲ್ಲೆಯ ನಿವಾಸಿಯಾಗಿರಬೇಕು. ಆನ್‌ಲೈನ್ ಮೂಲಕ ಅರ್ಜಿಗಳನ್ನು www.navodaya.gov.in ಸಲ್ಲಿಸಬಹುದು. 5ನೇ ತರಗತಿಯಲ್ಲಿ ಅಧ್ಯಯನ ಮಾಡಿರುವ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದ ಪ್ರಮಾಣ ಪತ್ರ, ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ, ಪಾಲಕ ಅಥವಾ ಪೋಷಕರ ಸಹಿ, ವಿದ್ಯಾರ್ಥಿಯ ಸಹಿ, ಮೈಸೂರು ಜಿಲ್ಲೆಯ ವಾಸಸ್ಥಳದ ಆಧಾರ್ ಸಂಖ್ಯೆ ಹೊಂದಿರಬೇಕು. ಅರ್ಜಿ ಸಲ್ಲಿಸಲು ಜುಲೈ 29 ಕೊನೆಯ ದಿನಾಂಕವಾಗಿದ್ದು, ಪರೀಕ್ಷೆಯನ್ನು ಡಿಸೆಂಬರ್ 13 ರಂದು ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ www.navodaya.gov.in ಹಾಗೂ ದೂ. ಸಂ: 0821–2970040 ಅನ್ನು ಸಂಪರ್ಕಿಸಬಹುದು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಕೆಟ್‌ನಲ್ಲಿ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಸಾಧನೆ



ಬೆಂಗಳೂರಿನಲ್ಲಿ ನಡೆದ ರೋಟರಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಸೀಸನ್ 1ರಲ್ಲಿ ರೋಟರಿ ಜಿಲ್ಲೆ–3181ರಿಂದ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಗೆಲುವು ಸಾಧಿಸಿದೆ.

ಮೈಸೂರು, ಜೂ.17– ಬೆಂಗಳೂರಿನಲ್ಲಿ ನಡೆದ ರೋಟರಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಸೀಸನ್ 1ರಲ್ಲಿ ರೋಟರಿ ಜಿಲ್ಲೆ–3181 ರಿಂದ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ತಂಡ ಅಭೂತಪೂರ್ವ ಗೆಲುವು ಸಾಧಿಸಿದೆ.

ಕ್ಲಬ್ ಅಧ್ಯಕ್ಷರಾದ ರೊ.ರಾಜೇಶ್.ಆರ್ ಸಾರಥ್ಯದಲ್ಲಿ ಪಂದ್ಯಾವಳಿಯಲ್ಲಿ ಭಾಗವಹಿಸಿದ ಕ್ಲಬ್‌ನ ಕ್ರಿಕೆಟ್ ಆಟಗಾರರು ಆಡಿದ 5 ಪಂದ್ಯಗಳಲ್ಲೂ ಗೆಲುವು ಸಾಧಿಸಿ ರೋಟರಿ ಹೆರಿಟೇಜ್ ಕ್ಲಬ್‌ನ ಹಿರಿಮೆ ಮತ್ತು ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3181ರ ಗೌರವವನ್ನು ಎತ್ತಿ ಹಿಡಿದಿದ್ದಾರೆ.

ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ತಂಡದ ಆಟಗಾರರು ಪ್ರಶಂಸೆಗೊಳಗಾದರು. ಕ್ಲಬ್‌ನ ಆಟಗಾರರಾದ ರೊ.ನವೀನ್ (ತಂಡದ ನಾಯಕರು) ನೇತೃತ್ವದಲ್ಲಿ ತಂಡ ಸ್ಪರ್ಧೆಗಿಳಿದಿತ್ತು.

ತಂಡದಲ್ಲಿ ರೊ.ವಿನಯ್, ರೊ.ಬಾಲಸುಬ್ರಹ್ಮಣ್ಯ, ರೊ.ಪೃಥ್ವಿರಾಜ್, ರೊ.ಪ್ರೀತವ್, ರೊ.ಸುನೀಲ್, ರೊ.ಅಶೋಕ, ರೊ.ಮಹೇಶ್ ಚಂದನ್, ರೊ.ಮಧು, ರೊ.ರಮೇಶ್ ಗೌಡ ಹಾಗೂ ಇವರ ಮಗ ಆನೆಟ್ ನಿಶ್ಚಯ್ ಗೌಡ ಮತ್ತು ರೋಟರಿ ಕ್ಲಬ್ ಆಫ್ ಹೆರಿಟೇಜ್‌ನ ಅಧ್ಯಕ್ಷ ರೊ.ರಾಜೇಶ್ ಪಾಲ್ಗೊಂಡಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಸಹಕರಿಸಿದ ಸದಸ್ಯರಾದ ರೊ.ರಾಜು.ಎಂ.ಎಸ್, ರೊ.ಗಣೇಶ್ ಭಟ್, ರೊ.ರಾಘವೇಂದ್ರ ಆಚಾರ್, ಈ ಸಾಲಿನ ಕ್ಲಬ್‌ನ ಕಾರ್ಯದರ್ಶಿಗೌರವ್ ಜಿ. ಶರ್ಮ ಅವರನ್ನು ಅಭಿನಂದಿಸಲಾಯಿತು.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು, ಜೂ. 17–ಕರ್ನಾಟಕ ರಾಜ್ಯ ಸವಿತಾ ನಾದಬ್ರಹ್ಮ ಸಂಗೀತ ಕಲಾ ಸಂಘ, ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಮೈಸೂರು ರೇಸ್ ಕ್ಲಬ್



ಚಾರಿಟೆಬಲ್ ಕಣ್ಣಿನ ಆಸ್ಪತ್ರೆ, ರೋಟರಿ ಪಂಚಶೀಲ, ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ ಸಹಯೋಗದಲ್ಲಿ ಜೂ. 23ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ತೊಣಚಿಕೊಪ್ಪಲು, ಟಿ.ಕೆ. ಲೇಔಟ್‌ನಲ್ಲಿರುವ ಕರ್ನಾಟಕ ರಾಜ್ಯ ಸವಿತಾ ನಾದ ಬ್ರಹ್ಮ ಸಂಗೀತ ಕಲಾ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ. ನೇತ್ರ ತಜ್ಞ ವೈದ್ಯರು ಕಣ್ಣಿನ ಪರೀಕ್ಷೆ ಮಾಡಿ ಪೊರೆಯುಳ್ಳ ರೋಗಿಗಳನ್ನು ಅದೇ ದಿವಸ ಮೈಸೂರಿನಲ್ಲಿರುವ ಎಂಆರ್‌ಸಿ ಕಣ್ಣಿನ ಆಸ್ಪತ್ರೆಗೆ ಕರೆತಂದು ಮರುದಿನ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡುವರು. ಮಾಹಿತಿಗೆ 99006 65517.

ಸರ್ಕಾರಿ ಯೋಜನೆಗಳ ಜಾಗೃತಿ ಅಭಿಯಾನ ಇಂದು

ಮೈಸೂರು, ಜೂ. 17– ಮೈಸೂರು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ) ಮತ್ತು ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ ಸಂಯುಕ್ತಾಶ್ರಯದಲ್ಲಿ ಜೂ.18ರಂದು ಬೆಳಗ್ಗೆ 11.30 ಗಂಟೆಗೆ ಶಾಂತಿನಗರದ ಮೇವಾ ಎಜುಕೇಷನಲ್ ಟ್ರಸ್ಟ್ ವಠಾರದಲ್ಲಿ ಸರ್ಕಾರಿ ಯೋಜನೆಗಳ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾರ್ಮಿಕ ಇಲಾಖೆ ಸಹಾಯಕ ಕಾರ್ಮಿಕ ಆಯುಕ್ತರಾದ ವೀಣಾ ಎಸ್.ಆರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಎನ್.ಟಿ., ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ರೇವಣ್ಣ ಭಾಗಹಿಸಲಿದ್ದಾರೆ. ಆರ್‌ಎಲ್‌ಎಚ್‌ಪಿ ಸಂಸ್ಥೆ ಕಾರ್ಯದರ್ಶಿ ಪ್ರೊ. ಜೋಸ್ ವಿ.ಕೆ., ನಿರ್ದೇಶಕರಾದ ಶ್ರೀಮತಿ ಸರಸ್ವತಿ ಉಪಸ್ಥಿತರಿರುವರು.

ಇಂದು ರಕ್ತದಾನ ಶಿಬಿರ

ಮೈಸೂರು,ಜೂ.17–ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೂ.18ರ ಬೆಳಗ್ಗೆ 11.30ಕ್ಕೆ ಕುವೆಂಪುನಗರದ ಎಂ ಬ್ಲಾಕ್, ಮಲೆ ಮಹದೇಶ್ವರ ಸಂಸ್ಥೆ ಮುಂಭಾಗ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ.



ಮುಖ್ಯ ಅತಿಥಿಗಳಾಗಿ ವೈದ್ಯ ಡಾ.ಎಸ್.ಪಿ.ಯೋಗಣ್ಣ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಮಾಜ ಸೇವಕಿ ಖುಷಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 7204784874 ಸಂಪರ್ಕಿಸಬಹುದು.

ನೇಕಾರರ ಜನಸಂಖ್ಯೆ ದಾಖಲೀಕರಣ ಅವೈಜ್ಞಾನಿಕ: ಮುಖಂಡರ ಬೇಸರ


ಮೈಸೂರು, ಜೂ.17(ಜಿಎ)–ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಜಾತಿ ಗಣತಿ ವರದಿಯನ್ನು ನೇಕಾರ ಸಮುದಾಯ ಸ್ವಾಗತಿಸುತ್ತದೆ. ಆದರೆ, ನೇಕಾರ ಸಮುದಾಯದ ಜನಸಂಖ್ಯೆ ದಾಖಲೀಕರಣ ಅವೈಜ್ಞಾನಿಕವಾಗಿದೆ ಎಂದು ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ನೇಕಾರ ಸಮುದಾಯದ ಸುಮಾರು 45ರಿಂದ 50 ಲಕ್ಷ ಜನಸಂಖ್ಯೆ ಇದೆ. ಆದರೆ ಜಾತಿಗಣತಿ ವರದಿಯಲ್ಲಿ ಇದನ್ನು ಕೇವಲ 9 ಲಕ್ಷ ತೋರಿಸಿರುವುದು ಸರಿಯಲ್ಲ. ಇದರಿಂದ ನೇಕಾರರ ಸಮುದಾಯಕ್ಕೆ ಹಿನ್ನಡೆಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಹೀಗಾಗಿ ಒಕ್ಕೂಟವೇ ಸಮುದಾಯದ ನಿಖರ ಜನಸಂಖ್ಯೆ ಪಡೆಯಲು ಒಂದು ಆ್ಯಪ್ ಸಿದ್ಧಪಡಿಸಿದ್ದು, ಪ್ರತಿ ಹಳ್ಳಿಗೂ ಭೇಟಿ ನೀಡಿ ಸಮುದಾಯದ ಸದಸ್ಯರ ಸಂಖ್ಯೆ ನಮೂದಿಸಲಾಗುವುದು ಇದೇ ವೇಳೆ ಜಾತಿಗಣತಿಗೆ ಮನೆ ಮನೆಗೆ ಬರುವ ಅಧಿಕಾರಿಗಳಿಗೆ ಸಮುದಾಯದವರು ಪಂಗಡದ ಜೊತೆಗೆ ನೇಕಾರ ಎಂದೇ ನಮೂದಿಸುವಂತೆ ಸೋಮಶೇಖರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ದಿನೇಶ್, ಮುಖಂಡರಾದ ಆರ್.ಮೂರ್ತಿ, ಜಗದೀಶ್, ಮಂಜುಳಾ ಶ್ರೀನಿವಾಸ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ನಂಜನಗೂಡು, ಜೂ.17– ತಾಲೂಕಿನ ಇಮ್ಮಾವುಹುಂಡಿ ಗ್ರಾಮದ ನಿವಾಸಿ ಸಿದ್ದಶೆಟ್ಟಿ(75) ಅವರು ಕಾಣೆಯಾಗಿರುವ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಇವರು ಜೂನ್ 9ರಂದು ಮನೆಯಿಂದ ಹೊರಹೋದವರು ಈವರೆಗೂ ವಾಪಸ್ಸಾಗಿಲ್ಲ. ಎಲ್ಲಾ ಕಡೆ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಸಿದ್ದಶೆಟ್ಟಿ ಅವರ ಪುತ್ರ ಪೊಲೀಸರಿಗೆ ದೂರು ನೀಡಿದ್ದಾರೆ. ಸಿದ್ದಶೆಟ್ಟಿ ಅವರ ಬೆನ್ನಿನ ಹಿಂದೆ ಗಂಟಿನ ಗುರುತು ಇದೆ ಎಂದು ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ಪೊಲೀಸ್ ಠಾಣೆ(08221–226259)ಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಚನ್ನಬಸವಾಚಾರ್ ನಿಧನ



ಹೆಚ್.ಡಿ.ಕೋಟೆ, ಜೂ.17– ತಾಲೂಕಿನ ಅಂತರಸಂತೆ ಗ್ರಾಮದ ವಿಶ್ವಕರ್ಮ ಸಮಾಜದ ಮುಖಂಡ ಚನ್ನಬಸವಚಾರ್(84) ಅವರು ಭಾನುವಾರ ನಿಧನರಾದರು. ಇವರು ಪತ್ನಿ, ಪುತ್ರಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.06.2025 ಬುಧವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಶಿಬಿರ, ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವಿಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಿನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡು ಬರುವ ಹಸಿವಾಗದೆ ಇರುವುದು, ಅಜೀರ್ಣ, ಹೊಟ್ಟೆನೋವು, ಜಂತುಹುಳುವಿನ ಬಾಧೆ, ರುಮಟೈಡ್ ಆರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಉತ್ತಮ ನಿದ್ರೆ ಅಭ್ಯಾಸ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಶಬರಿಮಲ ಶ್ರೀ ಅಯ್ಯಪ್ಪ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಾಲಯ):** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಸಂಜೆ 5.30ರಿಂದ ಗಣಪತಿ ಹೋಮ, ಶ್ರೀ ಗುರುವಾಯೂರಪ್ಪನಿಗೆ ಉದಯಾಸ್ತಮಾನ ಪೂಜೆ, ನವಗಂ, ಪಂಚಗವ್ಯಂ ಹಾಗೂ ಉಚ್ಚ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 5.30ಕ್ಕೆ ದೀಪಾರಾಧನೆ, ವಾದ್ಯಗಳೊಂದಿಗೆ ವಿಶೇಷ ಪೂಜೆ, ಅತ್ತಾಳ ಪೂಜಾ, ಸ್ಥಳ: ದೇವಾಲಯದ ಸನ್ನಿಧಿ, ಚಾಮುಂಡಿಬೆಟ್ಟದ ಪಾದ.

■ **ಕನ್ನಡಾಂಬೆ ರಕ್ಷಣಾ ವೇದಿಕೆ :** ಬಸವ ಜಯಂತಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಪೌರಕಾರ್ಮಿಕರಿಗೆ ಉಚಿತ ಬಟ್ಟೆ ವಿತರಣೆ, ಪೌರಕಾರ್ಮಿಕರ ಜೊತೆ ಸಹಪಂಕ್ತಿ ಭೋಜನ, ಸಾನ್ನಿಧ್ಯ : ಶ್ರೀ ಶಿವಬಸವ ಸ್ವಾಮೀಜಿ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಉಪಸ್ಥಿತರು : ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್. ಶ್ರೀನಿವಾಸನ್, ವೇದಿಕೆ ಅಧ್ಯಕ್ಷ ಬಿ.ಬಿ. ರಾಜಶೇಖರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬಿಜೆಪಿ ಮುಖಂಡ ಕವೀಶ್‌ಗೌಡ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಜಿಲ್ಲಾ ಪಂಚಾಯತಿ ಸದಸ್ಯ ರಾಕೇಶ್ ಪಾಪಣ್ಣ, ವರುಣ ಮಹೇಶ್, ಕೆ.ಕೆ. ಲಕ್ಷ್ಮೀಶ್, ಎಸ್. ವಿ, ಡಾ. ಪಿ. ಶಿವರಾಜ್, ಚಂದ್ರಶೇಖರ್, ಸುರೇಶ್‌ಕುಮಾರ್, ಸುರೇಶ್, ಪ್ರಶಾಂತ್, ಸ್ಥಳ: ಸರಸ್ವತಿ ಕನ್ವೆನ್ಷನ್ ಹಾಲ್, ಹೂಟಗಳ್ಳಿ, ಬೆಳಗ್ಗೆ 11ಕ್ಕೆ.

■ **ಮಲೆ ಮಹದೇಶ್ವರ ಸೇವಾ ಸಂಸ್ಥೆ :** ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಖ್ಯಾತ ವೈದ್ಯ ಡಾ. ಎಸ್.ಪಿ. ಯೋಗಣ್ಣ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಮಾಜ ಸೇವಕಿ ಖುಷಿ, ಸ್ಥಳ: ಕುವೆಂಪುನಗರದ ಎಂ ಬ್ಲಾಕ್, ಮಲೆ ಮಹದೇಶ್ವರ ಸಂಸ್ಥೆ ಮುಂಭಾಗ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜೈ ಹಿಂದ್–ದೇಶ ರಕ್ಷಣೆಯ ವೀರರಿಗೆ ಬಾನುಲಿ ನಮನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಟಿ. ಉದಯಕಿರಣ್, ಸಿ.ವಿಶ್ವನಾಥ್ ಹಾಗೂ ಎಂ. ಡಿ. ಸುಮತಿ ಮುರಾರಿ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಎಸ್. ಸುನೀತಾ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು– ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ ಯೋಗ ಶಿಕ್ಷಕರಾದ ಶರತ್ ಜೋಯಿಸ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ್ ಹೆಗಡೆ, 8.50 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ –ಶಿವಕುಮಾರ್ ಶರ್ಮ–ಸಂತೂರ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಶಂಕರ್ ಶಾನುಭೋಗ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ದಿಂಡಿಗಲ್ ಎಸ್.ಪಿ. ನಟರಾಜನ್–ಕೊಳಲು ವಾದನ, 4.00 ಮಹಿಳಾ ರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಸ್ಮಿತಾ ಚಿಪ್ಳೂಣ್ ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕೃಷಿ ಶಿಕ್ಷಣದ ಮಹತ್ವ ಕುರಿತು ಸಂವಾದ, ಭಾಗವಹಿಸುತ್ತಾರೆ–ಮಂಡ್ಯದ ವಿ.ಸಿ. ಫಾರಂ ಕೃಷಿ ಮಹಾವಿದ್ಯಾಲಯದ ಡೀನ್ ಡಾ. ಪಿ.ಎಸ್. ಫಾತಿಮಾ ಹಾಗೂ ಬಿ.ಎಸ್.ಸಿ. ಕೃಷಿ ವಿದ್ಯಾರ್ಥಿಗಳಾದ ರೇವಂತ್ ರೆಡ್ಡಿ ಮತ್ತು ಬಿಂದುಶ್ರೀ, ಪ್ರಸ್ತುತಿ: ಎನ್. ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಎ.ಸುಂದರೇಶ್ವರನ್ ಮತ್ತು ಎಂ.ಎ. ಕೃಷ್ಣಸ್ವಾಮಿ–ದ್ವಂದ್ವ ವೈಯೋಲಿನ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ವಿಶೇಷ ಕಾರ್ಯಕ್ರಮ – ವಿಕಸಿತ ಭಾರತದ ಅಮೃತಕಾಲ ಸೇವೆ,ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ ಹನ್ನೊಂದು ವರ್ಷಗಳು, 10.00 ಹಳ್ಳಿ ಹಾಡು, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಹಾಸನ, ಉಡುಪಿ, ದ.ಕನ್ನಡ ಸೇರಿ ಹಲವು ಜಿಲ್ಲಾಧಿಕಾರಿಗಳ ವರ್ಗಾವಣೆ

ಬೆಂಗಳೂರು: ಮಹತ್ವದ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರವು ಮಂಗಳವಾರ 16 ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಿದೆ. ಇದರಲ್ಲಿ ಐವರು ಜಿಲ್ಲಾಧಿಕಾರಿಗಳು ಸೇರಿದ್ದಾರೆ.

ಉಡುಪಿ ಜಿಲ್ಲಾಧಿಕಾರಿಯಾಗಿದ್ದ ವಿದ್ಯಾಕುಮಾರಿ ಅವರನ್ನು ವರ್ಗಾವಣೆ ಮಾಡಿದ್ದು, ಇದುವರೆಗೆ ಇ- ಆಡಳಿತ ನಿರ್ದೇಶಕರಾಗಿದ್ದ ಸ್ವರೂಪ ಟಿ.ಕೆ ಅವರನ್ನು ಉಡುಪಿ ಡಿಸಿ ಆಗಿ ನೇಮಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿದ್ದ ಮುಲ್ಲೈ ಮುಗಿಲನ್ ಅವರನ್ನು ವರ್ಗಾವಣೆ ಮಾಡಿದ್ದು, ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯಕ್ತರಾಗಿದ್ದ ದರ್ಶನ್ ಎಚ್.ವಿ ಅವರನ್ನು ದ.ಕನ್ನಡ ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ. ಮುಲ್ಲೈ ಮುಗಿಲನ್ ಅವರನ್ನು ನೋಂದಣಿ ಮತ್ತು ಮುದ್ರಾಂಕದ ಐಜಿಯಾಗಿ ನೇಮಿಸಲಾಗಿದೆ.

ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಅವರನ್ನು ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಕಾರ್ಯದರ್ಶಿಯಾಗಿ ವರ್ಗಾಯಿಸಿದ್ದು, ಪ್ರಭಾರ ಹುದ್ದೆಯಲ್ಲಿದ್ದ ಡಾ.ಆರ್. ವಿಶಾಲ್ ಅವರನ್ನು ಬಿಡುಗಡೆಗೊಳಿಸಲಾಗಿದೆ.

ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅವರನ್ನು ಸಮಗ್ರ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕಿಯಾಗಿ ವರ್ಗಾಯಿಸಿದ್ದು, ಡಾ.ಕೆ.ವಿ. ತ್ರಿಲೋಕ್ ಚಂದ್ರ ಅವರನ್ನು ಹೆಚ್ಚುವರಿ ಹೊಣೆಗಾರಿಕೆಯಿಂದ ಬಿಡುಗಡೆ ಮಾಡಿದೆ. ಜತೆಗೆ ಬೆಂಗಳೂರು ನಗರ ಜಿಪಂ ಸಿಇಒ ಕೆ.ಎಸ್. ಲತಾಕುಮಾರಿ ಅವರನ್ನು ಹಾಸನ ಜಿಲ್ಲಾಧಿಕಾರಿಯಾಗಿ ವರ್ಗಾಯಿಸಿದೆ

ನೌಕರರ ವರ್ಗಾವಣೆ ಅವಧಿ ಜೂನ್ 30ರವರೆಗೆ ವಿಸ್ತರಣೆ

ಬೆಂಗಳೂರು: ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ (ಡಿಪಿಎ ಆರ್) ಇಲಾಖೆ ಆದೇಶ ಹೊರಡಿಸಿದೆ.

ವರ್ಗಾವಣೆಗೆ ಮೇ 12ರಿಂದ ಜೂನ್ 14ರವರೆಗೆ ಅವಕಾಶ ನೀಡಿ ಈ ಹಿಂದೆ ಡಿಪಿಎಆರ್ ಆದೇಶ ಹೊರಡಿಸಿತ್ತು. ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ನೌಕರರನ್ನು ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ.6ರಷ್ಟನ್ನು ಮೀರದಂತೆ ವರ್ಗಾವಣೆಗೆ ಅವಕಾಶ ನೀಡಲಾಗಿದೆ. 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಯ ಸಚಿವರಿಗೆ ಹಾಗೂ 'ಸಿ' ಮತ್ತು 'ಡಿ' ವೃಂದದ ನೌಕರರಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ನೀಡಲಾಗಿದೆ.

ಒಂದು ಸ್ಥಳದಲ್ಲಿ ಎರಡು ವರ್ಷ ಕರ್ತವ್ಯದ ಅವಧಿ ಪೂರ್ಣಗೊಳಿಸಿದ ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು, ನಾಲ್ಕು ವರ್ಷ ಪೂರ್ಣಗೊಳಿಸಿದ 'ಸಿ' ವೃಂದದ ಹಾಗೂ ಏಳು ವರ್ಷ ಪೂರ್ಣಗೊಳಿಸಿದ 'ಡಿ' ವೃಂದದ ನೌಕರರು ವರ್ಗಾವಣೆಗೆ ಅರ್ಹರು. 'ಎ' ಮತ್ತು 'ಬಿ' ವೃಂದ ಅಧಿಕಾರಿಗಳ ವರ್ಗಾವಣೆ ಪ್ರಸ್ತಾವವನ್ನು ಆಡಳಿತ ಇಲಾಖೆಯ ಮೂಲಕವೇ ಸಚಿವರಿಗೆ ಸಲ್ಲಿಸಬೇಕು ಎಂದು ವರ್ಗಾವಣೆ ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ

ತೆರಿಗೆ ಪಾವತಿಸದ ಐದು ಐಷರಾಮಿ ಕಾರು ವಶಕ್ಕೆ ಪಡೆದ ಮೈಸೂರು ಆರ್‌ಟಿಓ

● ಸುಮಾರು 4 ಕೋಟಿ ರೂ. ಬಾಕಿ ತೆರಿಗೆ ವಸೂಲಿಗೆ ಕ್ರಮ ● 1.78 ಕೋಟಿ ಪಾವತಿಸಿಕೊಂಡು 2 ಕಾರುಗಳ ಬಿಡುಗಡೆ





ಮೈಸೂರು ಪಶ್ಚಿಮ ಆರ್‌ಟಿಓ ಕಚೇರಿ ಆವರಣದಲ್ಲಿ ನಿಲ್ಲಿಸಲಾಗಿರುವ ಐಷರಾಮಿ ಕಾರುಗಳು.

ಮೈಸೂರು, ಜೂ.17(ಆರ್‌ಕೆ)– ಸೂಕ್ತ ಸಮಯಕ್ಕೆ ತೆರಿಗೆ ಪಾವತಿಸದೇ ಸಂಚರಿಸುತ್ತಿದ್ದ ಐದು ಐಷರಾಮಿ ಕಾರುಗಳನ್ನು ಮೈಸೂರಿನ ಆರ್‌ಟಿಓ (ಪಶ್ಚಿಮ) ಕಚೇರಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

2 ಮರ್ಸಿಡಿಸ್ ಬೆನ್ಜ್, 1 ಆಡಿ ಕ್ಯೂ 4, 1 ಪೋರ್ಷೆ ಹಾಗೂ 1 ರೋಲ್ಸ್–ರಾಯ್ಸ್– ಒಟ್ಟು 4 ಕೋಟಿ ರೂ. ತೆರಿಗೆ ಪಾವತಿಸದೇ ಮೈಸೂರಲ್ಲಿ ಸಂಚರಿಸುತ್ತಿದ್ದವು. ಬೆಂಗಳೂರು ಸಾರಿಗೆ ಇಲಾಖೆ ಉನ್ನತಾಧಿಕಾರಿಗಳ ಮಾರ್ಗದರ್ಶನದಂತೆ ಕಾರ್ಯಾಚರಣೆ ನಡೆಸಿದ ಮೈಸೂರಿನ ಪೂರ್ವ ಮತ್ತು ಪಶ್ಚಿಮ ಆರ್‌ಟಿಓ ಕಚೇರಿಗಳ ವಿಶೇಷ ತಂಡ, ಭಾನುವಾರ ಐದು ಕಾರುಗಳನ್ನು ವಶಕ್ಕೆ ಪಡೆದು ಪಶ್ಚಿಮ ಆರ್‌ಟಿಓ ಕಚೇರಿ ಆವರಣದಲ್ಲಿ ತಂದು ನಿಲ್ಲಿಸಿದ್ದರು.

ಕಳೆದ ನಾಲ್ಕೈದು ದಿನಗಳಿಂದ ತೀವ್ರ ನಿಗಾ ವಹಿಸಿದ್ದ ತಂಡವು ಮಾಲೀಕರ ಖಾಯಂ ವಿಳಾಸ ಪತ್ತೆ ಹಚ್ಚಿ ಕಾರ್ಯಾಚರಣೆ ನಡೆಸಿ ಮಾಲೀಕರಿಂದ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಆರ್‌ಟಿಓ (ಪಶ್ಚಿಮ) ಸಿ.ಎಸ್. ರಾಮಚಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಐದೂ ಐಷರಾಮಿ ಕಾರುಗಳ ಮಾಲೀಕರೂ ಮೈಸೂರು ನಿವಾಸಿಗಳಾಗಿದ್ದು, ತಮ್ಮ ಕಾರುಗಳನ್ನು ಪುದುಚೇರಿಯಲ್ಲಿ ನೋಂದಾಯಿಸಿದ್ದಾರೆ. ಇದು ಕೇಂದ್ರಾಡಳಿತ ಪ್ರದೇಶವಾದ್ದರಿಂದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅಲ್ಲಿ ತೆರಿಗೆ ಅತೀ ಕಡಿಮೆ ಇದೆ. ಹಾಗಾಗಿ ಅವರು ಮೈಸೂರಿನವರಾದರೂ, ಅಲ್ಲಿಯೇ ತಮ್ಮ ತಮ್ಮ ಕಾರುಗಳನ್ನು ನೋಂದಣಿ ಮಾಡಿಸಿದ್ದಾರೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಸಾರಿಗೆ ಇಲಾಖೆಯು ರಸ್ತೆಗಿಳಿದ ಹೊಸ ಕಾರುಗಳಿಗೆ ಶೇ.28 ಜಿಎಸ್‌ಟಿ ಮತ್ತು ಶೇ.22 ಕನ್ವಿಯನ್ಸ್ ಚಾರ್ಜ್ ವಿಧಿಸುವ ಜೊತೆಗೆ ಶೇ.18 ರಸ್ತೆ ತೆರಿಗೆ ಮತ್ತು ಶೇ.11 ಸೆಸ್ ಸೇರಿ ಕಾರು ನೋಂದಣಿಯಾಗುವಾಗ ಒಟ್ಟು 20 ಲಕ್ಷ ರೂ.ಗಿಂತ ಅಧಿಕ ತೆರಿಗೆ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ದುಬಾರಿ ರಸ್ತೆ ತೆರಿಗೆ, ಸೆಸ್ ಪಾವತಿಸುವುದರಿಂದ ತಪ್ಪಿಸಿಕೊಳ್ಳಲು ಬಹುತೇಕ ಮಂದಿ ಪುದುಚೇರಿಯಲ್ಲಿ ತಮ್ಮ ವಾಹನಗಳನ್ನು ನೋಂದಣಿ ಮಾಡಿಸುತ್ತಾರೆ. ಈ ರೀತಿ ಒಂದು ರಾಜ್ಯದಲ್ಲಿ ನೋಂದಣಿಯಾದ ವಾಹನವನ್ನು ಬೇರೆ ರಾಜ್ಯದಲ್ಲಿ 11 ತಿಂಗಳವರೆಗೆ ಮಾತ್ರ ಸಂಚರಿಸಲು ಅವಕಾಶವಿದೆ. ನಂತರ ಆ ರಾಜ್ಯದ ಸಾರಿಗೆ ಇಲಾಖೆ ಮಾರ್ಗಸೂಚಿಯನುಸಾರ ತೆರಿಗೆ ಪಾವತಿಸಿ ಮರು ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಆದರೆ, ನಾವು ವಶಪಡಿಸಿಕೊಂಡ ಐದೂ ಕಾರುಗಳು ಹಲವು ತಿಂಗಳಿಂದ ಸ್ಥಳೀಯ ಆರ್‌ಟಿಓ ಅಡಿ ನೋಂದಣಿ ಆಗದೇ, ತೆರಿಗೆಯನ್ನು ಪಾವತಿಸದೇ ಸಂಚರಿಸುತ್ತಿದ್ದವು. 1.78 ಕೋಟಿ ರೂ. ತೆರಿಗೆ ಪಾವತಿಸಿಕೊಂಡು ಮರ್ಸಿಡಿಸ್ ಬೆನ್ಜ್ ಮತ್ತು ರೋಲ್ಸ್–ರಾಯ್ಸ್ ಕಾರನ್ನು ನಿನ್ನೆ (ಸೋಮವಾರ) ಮಾಲೀಕರಿಗೆ ಒಪ್ಪಿಸಿದ್ದೇವೆ ಎಂದು ತಿಳಿಸಿದರು.

ಉಳಿದ ಮೂರರ ಪೈಕಿ ತೆರಿಗೆ ಪಾವತಿಸುವುದಾಗಿ ಭರವಸೆ ನೀಡಿದ ಮೇರೆಗೆ ಪೋರ್ಷೆ ಮತ್ತು ಆಡಿ ಕ್ಯೂ–4 ಕಾರುಗಳನ್ನು ಮಾಲೀಕರಿಗೆ ನೀಡಿದ್ದೇವೆ. ಮತ್ತೊಂದು ಮರ್ಸಿಡಿಸ್ ಬೆನ್ಜ್ ಕಾರಿನ ನೋಂದಣಿ ಬಗ್ಗೆ ಅನುಮಾನವಿರುವುದರಿಂದ ಅದನ್ನು ಕಚೇರಿಯಲ್ಲೇ ಇರಿಸಿಕೊಂಡು ಪರಿಶೀಲಿಸುತ್ತಿದ್ದೇವೆ ಎಂದು ರಾಮಚಂದ್ರ ತಿಳಿಸಿದರು.

ಕರ್ನಾಟಕದಲ್ಲಿ 'ಥಗ್ ಲೈಫ್' ಬಿಡುಗಡೆಗೆ ಹಸಿರು ನಿಶಾನೆ

ಸರ್ಕಾರಕ್ಕೆ ಸುಪ್ರೀಂಕೋರ್ಟ್ ತರಾಟೆ



ನವದೆಹಲಿ: ಹಿರಿಯ ನಟ ಕಮಲ್ ಹಾಸನ್ ನಟಿಸಿರುವ ಥಗ್ ಲೈಫ್ ಚಿತ್ರದ ಪ್ರದರ್ಶನಕ್ಕೆ ನ್ಯಾಯಾಂಗೇತರ ನಿಷೇಧ ಹೊರಡಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕರ್ನಾಟಕ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆದಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಉಜ್ವಲ್ ಭುಯಾನ್ ಮತ್ತು ನ್ಯಾಯಮೂರ್ತಿ ಮನಮೋಹನ್ ಅವರನ್ನೊಳಗೊಂಡ ಪೀಠ, ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಬುಧವಾರದೊಳಗೆ ಸರ್ಕಾರ ತನ್ನ ಪ್ರತಿ–ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶಿಸಿತು.

ಗುಂಪು, ಗೂಂಡಾಗಿರಿ ಬೀದಿಗೆ ಬಂದು ಆಕ್ರಮಣ ಮಾಡಲು ಸಾಧ್ಯವಿಲ್ಲ,. ಕಾನೂನಿನ ನಿಯಮ ಮೇಲುಗೈ ಸಾಧಿಸಬೇಕು. ಯಾರಾದರೂ ಒಂದು ವಿಷಯ ಬಗ್ಗೆ ಹೇಳಿಕೆ ನೀಡಿದ್ದರೆ, ಅದನ್ನು ಹೇಳಿಕೆಯ ಮೂಲಕ ಎದುರಿಸಿ. ಯಾರಾದರೂ ಸ್ವಲ್ಪ ಬರೆದಿದ್ದಾರೆ ಎಂದರೆ ಅದನ್ನು ಬರೆಯುವ ಮೂಲಕ ಎದುರಿಸಿ ಎಂದು ನ್ಯಾಯಾಲಯ ಹೇಳಿದೆ.

ಕನ್ನಡ ಪರ ಗುಂಪುಗಳು ನಟ ಕಮಲ್ ಹಾಸನ್ ಭಾಷೆಯ ಕುರಿತು ನೀಡಿದ ಹೇಳಿಕೆಯ ವಿರುದ್ಧ ಪ್ರತಿಭಟನೆ ನಡೆಸಿದ ನಂತರ ಮಣಿರತ್ನಂ ನಿರ್ದೇಶನದ ಚಿತ್ರ ಥಗ್ ಲೈಫ್ ಅನ್ನು ಕರ್ನಾಟಕದಲ್ಲಿ ನಿಷೇಧಿಸಲಾಯಿತು. ಚೆನ್ನೈನಲ್ಲಿ ನಡೆದ ಚಿತ್ರದ ಆಡಿಯೋ ಬಿಡುಗಡೆ ಸಂದರ್ಭದಲ್ಲಿ, ನಟ–ರಾಜಕಾರಣಿ ಕಮಲ್‌ಹಾಸನ್ ಕನ್ನಡ ತಮಿಳು ಭಾಷೆಯಿಂದ ಹುಟ್ಟಿದೆ ಎಂದು ಹೇಳಿಕೆ ನೀಡಿದ್ದರು.

ಕನ್ನಡಪರ ಸಂಘಟನೆಗಳು, ಕನ್ನಡಿಗರು ಪದೇ ಪದೆ ಬೆದರಿಕೆ ಹಾಕುತ್ತಿದ್ದರೂ, ಕಮಲ್‌ಹಾಸನ್ ಕ್ಷಮೆಯಾಚಿಸಲು ನಿರಾಕರಿಸಿದರು. ಇದು ಕನ್ನಡ ಪರ ಗುಂಪುಗಳನ್ನು ಮತ್ತಷ್ಟು ಕೆರಳಿಸಿ ಕಮಲ್ ಹಾಸನ್ ಕ್ಷಮೆಯಾಚಿಸುವವರೆಗೆ ರಾಜ್ಯದಲ್ಲಿ ಚಿತ್ರವನ್ನು ಪ್ರದರ್ಶಿಸುವುದಿಲ್ಲ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (KFCC) ಘೋಷಿಸಿತು.

ಜೂನ್ 5 ರಂದು ಕರ್ನಾಟಕ ಹೊರತುಪಡಿಸಿ ದೇಶಾದ್ಯಂತ ಚಿತ್ರಮಂದಿರಗಳಲ್ಲಿ ಥಗ್ ಲೈಫ್ ಬಿಡುಗಡೆಯಾಯಿತು.

ಸುಪ್ರೀಂಕೋರ್ಟ್ ಹೇಳುವುದೇನು: ಬಿಎಫ್‌ಸಿ ಪ್ರಮಾಣಪತ್ರ ಹೊಂದಿರುವ ಯಾವುದೇ ಚಿತ್ರದ ಪ್ರದರ್ಶನ ಮಾಡುವ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿದೆ ಎಂದು ಒತ್ತಿ ಹೇಳಿದ ನ್ಯಾಯಾಲಯ, ಸಿಬಿಎಫ್‌ಸಿ ಪ್ರಮಾಣಪತ್ರ ಹೊಂದಿರುವ ಯಾವುದೇ ಚಿತ್ರವನ್ನು ಬಿಡುಗಡೆ ಮಾಡಬೇಕು. ರಾಜ್ಯವು ಅದರ ಪ್ರದರ್ಶನವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಕಾನೂನಿನ ನಿಯಮವು ಹೇಳುತ್ತದೆ. ಚಿತ್ರಮಂದಿರಗಳನ್ನು ಸುಡುವ ಬೆದರಿಕೆ ಹಾಕಲು ಸಾಧ್ಯವಿಲ್ಲ ಎಂದಿತು.

ಜನರು ಚಿತ್ರವನ್ನು ನೋಡದಿರಬಹುದು. ಅದು ಬೇರೆ ವಿಷಯ. ಜನರು ಚಿತ್ರವನ್ನು ನೋಡಲೇಬೇಕು ಎಂದು ನಾವು ಯಾವುದೇ ಆದೇಶವನ್ನು ನೀಡುತ್ತಿಲ್ಲ. ಆದರೆ ಚಿತ್ರವನ್ನು ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯ ಹೇಳಿದೆ.

ಹೈಕೋರ್ಟ್ ಅನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂಕೋರ್ಟ್: ಕಮಲ್‌ಹಾಸನ್ ಕ್ಷಮೆಯಾಚಿಸುವಂತೆ ನಿರ್ದೇಶಿಸಿದ ಕರ್ನಾಟಕ ಹೈಕೋರ್ಟ್ ಆದೇಶಕ್ಕೂ ನ್ಯಾಯಾಲಯ ಅಸಮ್ಮತಿ ವ್ಯಕ್ತಪಡಿಸಿದೆ. ಇದು ಹೈಕೋರ್ಟ್‌ನ ಕೆಲಸವಲ್ಲ ಎಂದು ನ್ಯಾಯಮೂರ್ತಿ ಭುಯಾನ್ ಹೇಳಿದರು. ಕರ್ನಾಟಕದ ಜನರು ಕಮಲ್ ಹಾಸನ್ ಹೇಳಿಕೆಯನ್ನು ವಿರೋಧಿಸಬಹುದು, ಆದರೆ ಕೊಲೆ ಬೆದರಿಕೆಗಳನ್ನು ಹಾಕಬಾರದಿತ್ತು ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಪೀಠವು ಸುಪ್ರೀಂಕೋರ್ಟ್‌ಗೆ ವರ್ಗಾಯಿಸಿ ಚಲನಚಿತ್ರಕ್ಕೆ ಸಂಬಂಧಿಸಿದ ಪ್ರಕರಣವು ಹೈಕೋರ್ಟ್‌ನಲ್ಲಿ ಬಾಕಿ ಇದೆ, ಗುರುವಾರ ಹೆಚ್ಚಿನ ವಿಚಾರಣೆ ನಡೆಸೋಣ ಎಂದಿದೆ. ಕರ್ನಾಟಕದಲ್ಲಿ 'ಥಗ್ ಲೈಫ್' ಚಿತ್ರದ ನಿಷೇಧವನ್ನು ಪ್ರಶ್ನಿಸಿ ಎಂ.ಮಹೇಶ್ ರೆಡ್ಡಿ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು.

ಬೆಂಗಳೂರು ಪ್ರತಿಷ್ಠಿತ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಿಂದ ಡಾ.ಹೆಚ್.ವಿ.ನಾಗರಾಜರಾವ್‌ರಿಗೆ ಜು.20ಕ್ಕೆ ಸನ್ಮಾನ



ಮೈಸೂರು, ಜೂ.17(ಎಸ್‌ಬಿಡಿ)– ಹಿರಿಯ ಲೇಖಕರು, 'ಮೈಸೂರು ಮಿತ್ರ' ಅಂಕಣಕಾರರೂ ಆದ ಡಾ.ಹೆಚ್.ವಿ.ನಾಗರಾಜರಾವ್ ಅವರನ್ನು ಬೆಂಗಳೂರಿನ ಪ್ರತಿಷ್ಠಿತ 'ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ' ಗೌರವಿಸಲು ನಿರ್ಧರಿಸಿದೆ.

ಸಂಸ್ಥೆಯ ಡಿವಿಜಿ ಸಭಾಂಗಣದಲ್ಲಿ ಜುಲೈ 20ರಂದು ನಡೆಯಲಿರುವ ಸಮಾರಂಭದಲ್ಲಿ ಡಾ.ಹೆಚ್.ವಿ. ನಾಗರಾಜರಾವ್ ಅವರನ್ನು ಸ್ಮರಣ ಫಲಕ ಹಾಗೂ ಐದು ಲಕ್ಷ ರೂ. ಗೌರವ ಧನದೊಂದಿಗೆ ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಾಡಿನ ಜನತೆ ಜೊತೆಗೆ ಇಲ್ಲಿನ ಸಾಂಸ್ಕೃತಿಕ ಉನ್ನತಿಗಾಗಿ ಪದ್ಮಭೂಷಣ ಡಾ.ಡಿ.ವಿ.ಗುಂಡಪ್ಪ(ಡಿವಿಜಿ)ನವರು ಸ್ಥಾಪಿಸಿ, ಬೆಳೆಸಿದ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯು 79 ವರ್ಷಗಳಿಂದ ಸಾರ್ಥಕ ಸೇವೆಯನ್ನು ಮುಂದುವರೆಸಿಕೊಂಡು ಬಂದಿದೆ. ಹೆಚ್.ವಿ.ನಾಗರಾಜರಾವ್ ಅವರು ಸಂಸ್ಕೃತ ಸಾರಸ್ವತ ಸೇವಕರಾಗಿ, ಸಂಶೋಧಕರಾಗಿ, ಗ್ರಂಥಕರ್ತರಾಗಿ, ಗ್ರಂಥ ಸಂಪಾದಕರಾಗಿ ಹಲವು ದಶಕಗಳ ಸೇವೆಯನ್ನು ಪರಿಗಣಿಸಿ, ಇವರನ್ನು ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸನ್ಮಾನಕ್ಕೆ ಆಯ್ಕೆ ಮಾಡಲಾಗಿದೆ. ಇತ್ತೀಚೆಗೆ ಕಾರ್ಯಕಾರಿ ಸಮಿತಿ ಸದಸ್ಯರಾದ ಬಿ.ಎನ್.ಶಶಿಕಿರಣ ಹಾಗೂ ಶತಾವಧಾನಿ ಡಾ.ರಾ.ಗಣೇಶ್ ಅವರು ಹೆಚ್.ವಿ.ನಾಗರಾಜರಾವ್ ಅವರನ್ನು ಭೇಟಿಯಾಗಿ, ಸಂಸ್ಥೆಯ ಗೌರವ ಸ್ವೀಕರಿಸಲು ಆಹ್ವಾನಿಸಿದ್ದಾರೆ.

ಕೃಷಿ ಇಲಾಖೆ ಅಧಿಕಾರಿಗಳಿಗೆ ಮುಂಬಡ್ತಿ; ಸ್ಥಳ ನಿಯುಕ್ತಿ

ಮೈಸೂರು, ಜೂ.17(ಎಸ್‌ಪಿಎನ್)– ಕೃಷಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರಿಗೆ, ಉಪಕೃಷಿ ನಿರ್ದೇಶಕ ವೃಂದಕ್ಕೆ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 42ರಡಿ 17 ಮಂದಿ ಅಧಿಕಾರಿಗಳಿಗೆ ರಾಜ್ಯದ ವಿವಿಧೆಡೆ ಇರುವ ಹುದ್ದೆಗಳಿಗೆ ಮುಂಬಡ್ತಿ ನೀಡಿ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ಕೃಷಿ ಇಲಾಖೆ (ಸೇವೆಗಳು) ಅಧೀನ ಕಾರ್ಯದರ್ಶಿ ಜೋನ್‌ಪ್ರಕಾಶ್ ರೋಡ್ರಿಗಸ್ ಆದೇಶಿಸಿದ್ದಾರೆ.

ಬಳ್ಳಾರಿಯ ಸಹಾಯಕ ಕೃಷಿ ನಿರ್ದೇಶಕ ಕೆ.ನಾಗರಾಜು(ಉಸ್ತುವಾರಿ ಮತ್ತು ಮೌಲ್ಯಮಾಪನ) ಅವರಿಗೆ ಮೈಸೂರು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಉಪಕೃಷಿ ನಿರ್ದೇಶಕ ಹುದ್ದೆಗೆ, ಮೈಸೂರು ಜಾಗೃತ ಕೋಶ ಜಂಟಿ ನಿರ್ದೇಶಕ ಕೆ.ಮಧುಸೂಧನ್ ಅವರನ್ನು ಬೆಂಗಳೂರು ಕೃಷಿ ಆಯುಕ್ತ ಕಚೇರಿಯ ಅಪರ ಕೃಷಿ ನಿರ್ದೇಶಕರ ಹುದ್ದೆಗೆ, ಮಂಡ್ಯದ ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ ಉಪಕೃಷಿ ನಿರ್ದೇಶಕ ಡಿ.ಟಿ.ಮಂಜುನಾಥ ಅವರನ್ನು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಜಂಟಿ ಕೃಷಿ ನಿರ್ದೇಶಕರ ಹುದ್ದೆಗೆ ಸೇರಿದಂತೆ ಒಟ್ಟು 17 ಮಂದಿ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಈ ಮುಂಬಡ್ತಿ ಆದೇಶವು 2024ನೇ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ:ಅಗ್ರಿ/ಎಜಿಎಸ್/2024, ದಿನಾಂಕ: 27.02.2025ರಂದು ಪ್ರಕಟಿಸಿರುವ ಸಹಾಯಕ ಕೃಷಿ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿಗೆ ಅನುಗುಣವಾಗಿರುತ್ತದೆ. ಈ ಇಲಾಖೆಯ ಮುಂಬಡ್ತಿಯು ಮುಂದಿನ ಯಾವುದೇ ನ್ಯಾಯಾಲಯದ ಆದೇಶ ಅಥವಾ ಸೂಕ್ತ ಪ್ರಾಧಿಕಾರದ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತದೆ.

ಸಮಿತಿಗೆ ಲಭ್ಯವಿದ್ದ ದಾಖಲೆ/ಮಾಹಿತಿಗಳ ಆಧಾರದ ಮೇಲೆ ಮೇಲ್ಕಂಡಂತೆ ತೀರ್ಮಾನವನ್ನು ಕೈಗೊಂಡಿರುತ್ತದೆ. ಇಲಾಖಾ ವಿಚಾರಣೆ ಎದುರಿಸುತ್ತಿರುವ ಅಧಿಕಾರಿಗಳು, ಆರೋಪದಿಂದ ಮುಕ್ತಗೊಂಡ ಸಂದರ್ಭದಲ್ಲಿ ಜೂನಿಯರ್ ಮೋಸ್ಟ್ ಅಧಿಕಾರಿಯನ್ನು ಹಿಂಬಡ್ತಿಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ ಎಂದು ತಿಳಿಸಿದ್ದಾರೆ.

ಮಧ್ಯವರ್ತಿಗಳ ಬಲೆಗೆ ಬೀಳಬೇಡಿ: ಎಂಬಿಬಿಎಸ್ ಆಕಾಂಕ್ಷಿಗಳಿಗೆ ಸಚಿವರ ಕಿವಿಮಾತು



ಬೆಂಗಳೂರು: ವೈದ್ಯರಾಗಬೇಕೆಂಬ ಕನಸು ಹೊತ್ತು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಯಾವುದೇ ಕಾರಣಕ್ಕೂ ಮಧ್ಯವರ್ತಿಗಳ ಮೋಸದ ಬಲೆಗೆ ಬೀಳಬಾರದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರು ಮಂಗಳವಾರ ಹೇಳಿದ್ದಾರೆ.

ವೈದ್ಯಕೀಯ ಸೀಟು ಕೊಡಿಸುವ ಸುಳ್ಳು ಭರವಸೆಗಳೊಂದಿಗೆ ವಿದ್ಯಾರ್ಥಿಗಳು ಅಥವಾ ಪೋಷಕರನ್ನು ದಾರಿ ತಪ್ಪಿಸುತ್ತಿರುವ ಮಧ್ಯವರ್ತಿಗಳನ್ನು ಗುರುತಿಸಿ ಕಾನೂನಿನ ಪ್ರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಎಚ್ಚರಿಸಿದ್ದಾರೆ.

ವೈದ್ಯರಾಗುವ ಕನಸಿನಿಂದಾಗಿ ಕಷ್ಟಪಟ್ಟು ಅಧ್ಯಯನ ಮಾಡಿ ನೀಟ್ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು, ಆತಂಕದಿಂದ ವಂಚಕರ ಬಲೆಗೆ ಬೀಳಬಾರದು ಎಂದು ಸಚಿವರು ಹೇಳಿದ್ದಾರೆ.

ಕೆಲವರು ವೈದ್ಯಕೀಯ ಸೀಟು ಕೊಡಿಸುವ ಸುಳ್ಳು ಭರವಸೆ ನೀಡುತ್ತಿದ್ದಾರೆ. ಅವರು ತಮ್ಮ "ಸಂಪರ್ಕ" ಅಥವಾ "ಪ್ರಭಾವ"ವನ್ನು ಬಳಸಿಕೊಂಡು ಕೆಲವು ಕಾಲೇಜುಗಳಲ್ಲಿ ಪ್ರವೇಶ ಕೊಡಿಸುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಆದರೆ ಹಣ ಪಡೆದು ವಂಚಿಸಿ ಕಣ್ಮರೆಯಾಗುತ್ತಾರೆ ಎಂದು ಸಚಿವರು ಎಚ್ಚರಿಸಿದ್ದಾರೆ.

ಕರ್ನಾಟಕದಲ್ಲಿ ಒಟ್ಟು 1,47,782 ಅಭ್ಯರ್ಥಿಗಳು ನೀಟ್‌ಗೆ ನೋಂದಾಯಿಸಿ ಕೊಂಡಿದ್ದಾರೆ ಮತ್ತು 1,42,369 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಈ ಪೈಕಿ 83,582 ವಿದ್ಯಾರ್ಥಿಗಳು ಇತ್ತೀಚೆಗೆ ಪ್ರಕಟವಾದ ಫಲಿತಾಂಶದಲ್ಲಿ ಅರ್ಹತೆ ಪಡೆದಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಉನ್ನತ ಕಾಲೇಜಿನಲ್ಲಿ ಸೀಟು ಪಡೆಯಲು ಆತುರ ಅಥವಾ ಆತಂಕದಿಂದ ವರ್ತಿಸಬೇಡಿ. ಮಧ್ಯವರ್ತಿಗಳು ನಿಮ್ಮ ಹತಾಶೆಯನ್ನು ಬಳಸಿಕೊಳ್ಳಲು ಕಾಯುತ್ತಿದ್ದಾರೆ. ಜಾಗರೂಕರಾಗಿರಿ ಮತ್ತು ಅವರ ವಂಚನೆಗೆ ಬಲಿಯಾಗಬೇಡಿ ಎಂದು ಸಚಿವರು ಕಿವಿಮಾತು ಹೇಳಿದ್ದಾರೆ. ಎಲ್ಲಾ ಸೀಟು ಹಂಚಿಕೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ಮೂಲಕ ವ್ಯವಸ್ಥಿತ ಮತ್ತು ಪಾರದರ್ಶಕ ರೀತಿಯಲ್ಲಿ ಮಾಡಲಾಗುತ್ತದೆ ಎಂದು ಪಾಟೀಲ್ ಹೇಳಿದರು. ವಿದ್ಯಾರ್ಥಿಗಳು ಮತ್ತು ಪೋಷಕರು ಈ ಅಧಿಕೃತ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ಹೇಳಿದರು.

ರಂಗೇರಿದ ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

ಈವರೆಗೆ 18 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

ಮೈಸೂರು,ಜೂ.17(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ (ಎಂಸಿಡಿಸಿಸಿ ಬ್ಯಾಂಕ್) ಐದು ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಚುನಾವಣಾ ಕಣ ರಂಗೇರಿದೆ. 13 ನಿರ್ದೇಶಕ ಸ್ಥಾನಗಳಿಗೆ ಜೂ.26 ರಂದು ಮತದಾನ ನಡೆಯಲಿದ್ದು, ಮಂಗಳವಾರ ಮೂವರು ನಾಮಪತ್ರ ಸಲ್ಲಿಸಿರುವುದೂ ಸೇರಿದಂತೆ ಒಟ್ಟು 18 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ಮಂಗಳವಾರ ಕ್ಷೇತ್ರ 1ರಿಂದ ಆಯ್ಕೆ ಬಯಸಿ ಇಬ್ಬರು ಹಾಗೂ ಕ್ಷೇತ್ರ 4ರಿಂದ ಆಯ್ಕೆ ಬಯಸಿ ಒಬ್ಬರು ನಾಮಪತ್ರ ಸಲ್ಲಿಸಿದರು. ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದಲ್ಲಿರುವ ಮೈಸೂರು ಉಪವಿಭಾಗಾಧಿಕಾರಿಯವರ ಕಚೇರಿಯಲ್ಲಿ ಚುನಾವಣಾಧಿಕಾರಿಗಳೂ ಆದ ಉಪವಿಭಾಗಾಧಿಕಾರಿ ಆಶಪ್ಪ ಅವರಲ್ಲಿ ಈ ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಕ್ಷೇತ್ರ 1ರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ (ಯಳಂದೂರು ತಾಲೂಕು) ಆಯ್ಕೆಗಾಗಿ ವೈ.ಎಂ.ಜಯರಾಮು (ಡೆಲಿಗೇಟ್ ಆಗಿರುವ ಸಹಕಾರ ಸಂಘದ ಹೆಸರು–ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ) ಹಾಗೂ ಕ್ಷೇತ್ರ 1ರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ (ಕೊಳ್ಳೇಗಾಲ ತಾಲೂಕು ಮತ್ತು ಹನೂರು ತಾಲೂಕು) ಆಯ್ಕೆ ಬಯಸಿ ಬಿ.ಎಸ್.ಮಲ್ಲೇಶ್ (ಡೆಲಿಗೇಟ್ ಆಗಿರುವ ಸಹಕಾರ ಸಂಘದ ಹೆಸರು–ಬಂಡಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ) ಇಂದು ನಾಮಪತ್ರ ಸಲ್ಲಿಸಿದರು.

ಅಂತೆಯೇ ಕ್ಷೇತ್ರ 4ರ ತಾಲೂಕು ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಿಂದ ಆಯ್ಕೆಯಾಗುವ ಒಂದು ನಿರ್ದೇಶಕ ಸ್ಥಾನಕ್ಕೆ ಹೆಚ್.ಜಿ.ಶಿವಶಂಕರ್ (ಡೆಲಿಗೇಟ್ ಆಗಿರುವ ಸಹಕಾರ ಸಂಘದ ಹೆಸರು– ನೆಲಜಲ ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘ, ಪಿರಿಯಾಪಟ್ಟಣ) ಇಂದು ನಾಮಪತ್ರ ಸಲ್ಲಿಸಿದ್ದು, ಈ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ ಮೊದಲಿಗರು ಇವರಾಗಿದ್ದಾರೆ. ಅಲ್ಲಿಗೆ ಕ್ಷೇತ್ರ 1ಕ್ಕೆ 15 ಮಂದಿ, ಕ್ಷೇತ್ರ 2ಕ್ಕೆ ಇಬ್ಬರು ಹಾಗೂ ಕ್ಷೇತ್ರ 4ಕ್ಕೆ ಒಬ್ಬರು ಈವರೆಗೆ ನಾಮಪತ್ರ ಸಲ್ಲಿಸಿದ್ದಾರೆ. ಕ್ಷೇತ್ರ 1ರಲ್ಲಿ ಒಟ್ಟು 11 ನಿರ್ದೇಶಕ ಸ್ಥಾನಗಳು ಹಾಗೂ ಕ್ಷೇತ್ರ 2 ಮತ್ತು ಕ್ಷೇತ್ರ 4ರಲ್ಲಿ ತಲಾ ಒಂದು ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.



ಮೈಸೂರಿನ ನೆಹರು ವೃತ್ತದಲ್ಲಿರುವ ಎಂಸಿಡಿಸಿಸಿ ಬ್ಯಾಂಕ್‌ನ ಕಟ್ಟಡ.

ಬ್ಯಾಂಕಿನ ಬೈಲಾಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಬ್ಯಾಂಕಿನ ಮತ ಕ್ಷೇತ್ರಗಳಾದ 3, 5 ಹಾಗೂ 6ಕ್ಕೆ ಅನ್ವಯವಾಗುವಂತೆ ಮಧ್ಯಂತರ ಆದೇಶ ಇದ್ದು, ವಿಚಾರಣೆ ನಡೆಯುತ್ತಿರುವ ಕಾರಣ ಸದರಿ ಕ್ಷೇತ್ರಗಳ ಒಟ್ಟು ಮೂರು ನಿರ್ದೇಶಕ ಸ್ಥಾನಗಳನ್ನು ಹೊರತುಪಡಿಸಿ, ಕ್ಷೇತ್ರಗಳಾದ 1, 2 ಹಾಗೂ 4ರ ಸಂಬಂಧ ಚುನಾವಣೆ ನಡೆಸಲಾಗುತ್ತಿದೆ.

ಜೂ.26ರಂದು ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರು ಛತ್ರದಲ್ಲಿ ಮತದಾನ ನಡೆಯಲಿದ್ದು, ಅಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಡೆಲಿಗೇಟ್ ಆಗಿರುವ ಸದಸ್ಯರು ಮತದಾನ ಮಾಡಲಿದ್ದಾರೆ. ಮತದಾನದ ಬಳಿಕ ಸದರಿ ಛತ್ರದಲ್ಲೇ ಮತ ಎಣಿಕೆಯ ಪ್ರಕ್ರಿಯೆ ನಡೆಯಲಿದ್ದು, ಫಲಿತಾಂಶ ಹೊರಬೀಳಲು ಅಂದು ರಾತ್ರಿ ಸುಮಾರು 10 ಗಂಟೆಯಾಗಬಹುದು ಎನ್ನಲಾಗುತ್ತಿದೆ.

ಗ್ರಾಮ ಪಂಚಾಯಿತಿ ಚುನಾವಣೆ ಮಾದರಿಯಲ್ಲಿ ಸದರಿ ಬ್ಯಾಂಕಿನ ಚುನಾವಣೆ ಸಹ ಪಕ್ಷ ರಹಿತವಾಗಿ ನಡೆಯಲಿದೆ. ಹಾಗಾಗಿ ಈಗಾಗಲೇ ಕಾಂಗ್ರೆಸ್, ಬಿಜೆಪಿ ಬೆಂಬಲಿತರಾಗಿ ಹಲವು ಮುಖಂಡರು ನಾಮಪತ್ರ ಸಲ್ಲಿಸಿ ಕಣಕ್ಕಿಳಿದಿದ್ದಾರೆ. ಚಾಮರಾಜನಗರ ತಾಲೂಕು ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ವೃಷಭೇಂದ್ರ ಸೋಮವಾರ ನಾಮಪತ್ರ ಸಲ್ಲಿಸಿದ ಪ್ರಮುಖರು.

ಈ ಬಾರಿ ಪರ–ವಿರೋಧದ ಗುಂಪು ಸ್ಪರ್ಧೆಗೆ ಒಲವು ಇಲ್ಲದ ವಾತಾವರಣ ನಿರ್ಮಾಣವಾಗಿದೆ ಎನ್ನಲಾಗುತ್ತಿದೆ. ಹಾಗಾಗಿ ಅಭ್ಯರ್ಥಿಗಳು ವೈಯಕ್ತಿಕ ಪ್ರಚಾರಕ್ಕೆ ಆದ್ಯತೆ ನೀಡಲಿದ್ದಾರೆ ಎಂದು ಹೇಳಲಾಗಿದೆ. ಈ ಬಾರಿ ಹಳಬರು ಮಾತ್ರವಲ್ಲದೆ, ಸಾಕಷ್ಟು ಸಂಖ್ಯೆಯಲ್ಲಿ ಹೊಸಬರು ಕಣಕ್ಕಿಳಿಯುವ ವಾತಾವರಣ ನಿರ್ಮಾಣವಾಗಿದೆ ಎನ್ನಲಾಗಿದೆ. ಆಕಾಂಕ್ಷಿಗಳು ಈಗಾಗಲೇ ಮತದಾರರಾಗಿರುವ ಸಹಕಾರ ಸಂಘಗಳ ಪ್ರತಿನಿಧಿಗಳನ್ನು (ಡೆಲಿಗೇಟ್ಸ್) ಭೇಟಿಯಾಗಿ ತಮ್ಮ ಪರ ಮತದಾನ ಮಾಡುವಂತೆ ಮನವೊಲಿಸುವ ಕಸರತ್ತು ಆರಂಭಿಸಿದ್ದಾರೆ.

ಇಂದು ನಾಮಪತ್ರ ಸಲ್ಲಿಸಲು ಕಡೇ ದಿನ

ಜೂ.18 ನಾಮಪತ್ರ ಸಲ್ಲಿಸಲು ಕಡೆ ದಿನವಾಗಿದ್ದು, ಅಂದು ಘಟಾನುಘಟಿ ನಾಯಕರು ನಾಮಪತ್ರ ಸಲ್ಲಿಸಲಿದ್ದಾರೆ. ಶಾಸಕರಾದ ಜಿ.ಡಿ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಹೆಚ್.ಎಂ.ಗಣೇಶ್ ಪ್ರಸಾದ್, ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡ, ಎಸ್.ಚಂದ್ರಶೇಖರ್, ಮಾಜಿ ನಿರ್ದೇಶಕರಾದ ಅಮಿತ್ ವಿ.ದೇವರಹಟ್ಟಿ, ಬಿ.ಎನ್.ಸದಾನಂದ ಮೊದಲಾದವರು ಕಡೇ ದಿನವಾದ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆನ್ನಲಾಗಿದೆ.

ಜೂ.11ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಅಂದಿನಿಂದ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಮೈಸೂರು ಉಪವಿಭಾಗಾಧಿಕಾರಿಯವರ ಕಚೇರಿಯಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಜೂ.19ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಂತರ ಚುನಾವಣಾಧಿಕಾರಿಗಳು ಸಿಂಧುತ್ವ ಹೊಂದಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಿದ್ದಾರೆ. ಜೂ.20ರಂದು ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಹಿಂಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅನಂತರ ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಜೂ.22ರ ಬೆಳಗ್ಗೆ 11 ಗಂಟೆಯ ನಂತರದಲ್ಲಿ ಚಿಹ್ನೆಯೊಂದಿಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ.

ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಅನರ್ಹ ಫಲಾನುಭವಿಗಳಿಗೆ ಕೊಕ್

ಬೆಂಗಳೂರು: ಬಿಪಿಎಲ್ ಕಾರ್ಡ್ ಬೆನ್ನಲ್ಲೇ ಸರ್ಕಾರ ಈಗ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಅನರ್ಹ ಫಲಾನುಭವಿಗಳಿಗೆ ಕೊಕ್ ನೀಡಲು ಮುಂದಾಗಿದೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಆಯುಕ್ತಾಲಯದಿಂದ ಎಲ್ಲಾ ಜಿಲ್ಲೆಗಳ ಡಿಸಿಗಳಿಗೆ ಪತ್ರ ಬರೆಯಲಾಗಿದೆ. ಅನರ್ಹರನ್ನು ಗುರುತಿಸಲು ಇಲಾಖೆಯಿಂದ ತಹಶೀಲ್ದಾರ್ ನೇತೃತ್ವದ ಟೀಮ್ ರಚನೆ ಮಾಡಲಾಗಿದೆ. ಸಂಯೋಜನೆ ಆ್ಯಪ್ ಮೂಲಕ ಅನರ್ಹರ ಪತ್ತೆ ಪ್ರಕ್ರಿಯೆ ನಡೆಯಲಿದೆ.

ಪ್ರಸ್ತಾವಿತ ಫಲಾನುಭವಿಗಳ ವಿವರಗಳನ್ನು ವಯಸ್ಸು, ಆದಾಯ, ರೇಷನ್ ಕಾರ್ಡ್ ವಿವರ, ಐಟಿ ವಿವರ ಈ ಮಾನದಂಡಗಳನ್ನು ಭೌತಿಕವಾಗಿ ಪರಿಶೀಲಿಸಲು ಸೂಚಿಸಲಾಗಿದೆ. ಕಚೇರಿಯ ಸೂಕ್ತ ನಿರ್ದೇಶನ ಪಾಲಿಸಲು ಸೂಚಿಸಲಾಗಿದೆ. ಈಗಾಗಲೇ 23.19 ಲಕ್ಷ ಅನರ್ಹ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇನ್ನೂ ಇದರ ನಡುವೆಯೇ ನಮ್ಮ ನೆರೆ ರಾಜ್ಯ ತೆಲಂಗಾಣ ಸಿಎಂ ಕೂಡ ರಾಜ್ಯದಲ್ಲಿ ಫಲಾನುಭವಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಹಣಕಾಸಿನ ಸಮಸ್ಯೆ ಎದುರಿಸುತ್ತಿದೆ ಎಂದು ಹೇಳಿದ್ದಾರೆ. ನಿವೃತ್ತ ಸರ್ಕಾರಿ ನೌಕರರಿಗೆ ನಿವೃತ್ತಿ ಸೌಲಭ್ಯ ನೀಡಲು ಕಷ್ಟವಾಗುತ್ತಿದೆ. ಕಾಲೇಜು ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸಾಧ್ಯವಾಗುತ್ತಿಲ್ಲ. ಶಾದಿ ಮುಬಾರಕ್, ಕಲ್ಯಾಣ ಲಕ್ಷ್ಮಿ ಯೋಜನೆ ಅನುಷ್ಠಾನಕ್ಕೂ ತೊಂದರೆಯಾಗಿದೆ ಎಂದು ಹೇಳಿಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಕಾರಕ್ಕೂ... ಅಹಂಕಾರಕ್ಕೂ ಏನು ವ್ಯತ್ಯಾಸ?
ಕಾರ ತಿಂದ್ರೆ ನಾವೇ ನೀರು ಕುಡಿತೀವಿ...! ಅಹಂಕಾರಕ್ಕೆ ಒಂದಲ್ಲ ಒಂದು ದಿನ ನಮ್ಮ ಸುತ್ತಲೂ ಇರುವವರೆ ನೀರು ಕುಡಿಸ್ತಾರೆ...!

ಮೈಸೂರು ಮಿತ್ರ

ಬುಧವಾರ, 18 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಮಸ್ಯೆಯ ಹಿಂದೆ ಪರಿಹಾರ, ದುಃಖದ ಹಿಂದೆ ಸುಖ, ಸವಾಲಿನ ಹಿಂದೆ ಒಂದು ಅವಕಾಶ ಇದ್ದೇ ಇರುತ್ತದೆ. ಕಾಯಬೇಕು ಅಷ್ಟೆ – ಅನಾಮಿಕ

ವೇದ ಸುಳ್ಳಾದರೂ { ಸಹವಾಸದಿಂದ
ಗಾದೆ ಸುಳ್ಳಾಗದು { ಸನ್ಯಾಸಿ ಕೆಟ್ಟ

ನಿಮ್ಮ ಪತ್ರಗಳು

■ ಇಸ್ರೇಲ್– ಇರಾನ್ ಯುದ್ಧ ಶೀಘ್ರ ಕೊನೆಗೊಳ್ಳಲಿ

ಮಾನ್ಯರೆ,

ಇರಾನ್ ಮತ್ತು ಇಸ್ರೇಲ್ ಮಧ್ಯೆ ಪ್ರಾರಂಭವಾಗಿರುವ ಯುದ್ಧ ಭೀಕರ ಸ್ವರೂಪ ಪಡೆದುಕೊಳ್ಳುತ್ತಿದ್ದು ಪಶ್ಚಿಮ ಏಷಿಯಾದಲ್ಲಿ ಉದ್ವಿಗ್ನತೆಗೆ ಕಾರಣವಾಗಿದೆ. ಇರಾನಿನ ರಾಜಧಾನಿ ಟೆಹರಾನ್ ಮತ್ತು ಇತರ ನಗರಗಳ ಮೇಲೆ ಇಸ್ರೇಲ್ ಮಾಡುತ್ತಿರುವ ದಾಳಿ ಆತಂಕಕ್ಕೀಡುಮಾಡಿದೆ.

ಈ ವೈಮಾನಿಕ ಹಾಗೂ ಡ್ರೋನ್ ದಾಳಿಗಳು ವಿಶೇಷವಾಗಿ ಇರಾನಿನ ಅಣು ಸ್ಥಾವರಗಳು, ರಕ್ಷಣಾ ಸ್ಥಾವರಗಳು ಹಾಗೂ ಇರಾನಿನ ಇಸ್ಲಾಂ ನಾಯಕರ ನಿವಾಸಗಳ ಮೇಲೆ ನಡೆಯುತ್ತಿದೆ. ಇರಾನ್ ಮತ್ತು ಇಸ್ರೇಲ್ ನಡುವೆ ದಶಕಗಳಿಂದ ಹೊಗೆಯಾಡುತ್ತಿದ್ದ ವೈರತ್ವ ಈಗ ಮುಗಿಲು ಮುಟ್ಟಿದ್ದು, ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ಇಸ್ರೇಲ್ ಸಣ್ಣ ರಾಷ್ಟ್ರವಾದರೂ ಅತ್ಯಾಧುನಿಕ. ಹಾಗೂ ಸುಸಜ್ಜಿತ ಸೇನೆಯನ್ನು ಒಳಗೊಂಡಿದ್ದು ಪರಮಾಣು ಅಸ್ತ್ರಗಳನ್ನು ಹೊಂದಿದ ಬಲಿಷ್ಟ ರಾಷ್ಟ್ರವಾಗಿದೆ. ಅದೂ ಅಲ್ಲದೇ ಇಡೀ ವಿಶ್ವದಲ್ಲೇ ಗೆರಿಲ್ಲಾ ಯುದ್ಧಕ್ಕೆ ಹೆಸರುವಾಸಿಯಾಗಿದೆ. ಅತ್ತ ಇರಾನ್ ಕೂಡ ಒಂದು ಬಲಿಷ್ಠ ರಾಷ್ಟ್ರವಾಗಿದ್ದು ಇಸ್ಲಾಮಿಕ್ ರಾಷ್ಟ್ರಗಳ ಬೆಂಬಲ ಹೊಂದಿದೆ. ಇವುಗಳ ನಡುವೆ ನಡೆಯುತ್ತಿರುವ ಯುದ್ಧ ಇನ್ನೂ ತೀವ್ರ ಸ್ವರೂಪ ಪಡೆದುಕೊಂಡು ಪರಮಾಣು ಯುದ್ಧವಾಗಿ ಕೂಡ ಪರಿಣಮಿಸಬಹುದು, ಇದರ ದುಷ್ಪರಿಣಾಮ ಈಗಾಗಲೇ ಗೋಚರಿಸಲು ಪ್ರಾರಂಭವಾಗಿದ್ದು, ಅನೇಕ ದೇಶಗಳಲ್ಲಿ ತೈಲಗಳ ಬೆಲೆ ಒಂದೇ ಸಮನೇ ಏರುತ್ತಿದೆ. ಅನೇಕ ದೇಶಗಳ ಷೇರು ಪೇಟೆಗಳ ವಹಿವಾಟು ಕುಸಿಯಲು ಪ್ರಾರಂಭಿಸಿದೆ. ಇರಾನ್‌ನೊಂದಿಗೆ ಪರಮಾಣು ಒಪ್ಪಂದ ಮಾಡಿಕೊಳ್ಳಲು ಉದ್ದೇಶಿಸಿದ್ದ ಅಮೇರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್‌ರವರ ಕನಸು ನುಚ್ಚು ನೂರಾಗಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರಿಗೆ ಈ ಯುದ್ಧ ನಿರ್ಣಾಯಕವಾಗಿದೆ. ಭಾರತ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳು ಯುದ್ಧವನ್ನು ನಿಲ್ಲಿಸುವಂತೆ ಈ ಎರಡು ದೇಶಗಳ ಮೇಲೆ ಒತ್ತಡ ಹಾಕುತ್ತಿವೆ. ವಿಶ್ವಸಂಸ್ಥೆ ಕೂಡ ತನ್ನದೇ ಆದ ರೀತಿಯಲ್ಲಿ ಯುದ್ಧ ನಿಲುಗಡೆಗೆ ಶ್ರಮಿಸುತ್ತಿದೆ. ಇರಾನ್ ಮತ್ತು ಇಸ್ರೇಲ್ ಈಗಲಾದರೂ, ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಕಾಪಾಡಲು ಮತ್ತು ಪರಮಾಣು ಯುದ್ಧವನ್ನು ತಪ್ಪಿಸಲು ಯುದ್ಧವನ್ನು ನಿಲ್ಲಿಸಿ, ತಮ್ಮ ತಮ್ಮ ಸಮಸ್ಯೆಗಳನ್ನು ರಾಜ ತಾಂತ್ರಿಕ ವಿಧಿ ವಿಧಾನಗಳ ಮೂಲಕ ಪರಿಹರಿಸಿಕೊಳ್ಳುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೊಟರಿ, ವಿವೇಕಾನಂದನಗರ, ಮೈಸೂರು

■ ದೇವಸ್ಥಾನಗಳಲ್ಲೂ ಲೂಟಿಗಿಳಿದ ಸರ್ಕಾರ

ಮಾನ್ಯರೆ,

ಆಷಾಢಮಾಸದಲ್ಲಿ ಶ್ರೀ ಚಾಮುಂಡೇಶ್ವರಿ ಬೆಟ್ಟದಲ್ಲಿ ವಿಶೇಷ ದರ್ಶನಕ್ಕೆ 2000 ರೂ.ಗಳನ್ನು ಮಾಡಿರುವುದು ಖಂಡನೀಯ. ಈ ಸರ್ಕಾರದಲ್ಲಿ ಹಣಕಾಸಿನ ಕೊರತೆ ಹೆಚ್ಚಾಗಿದ್ದು, ಹಾಗಾಗಿ ಆಷಾಢ ಮಾಸದಲ್ಲಿ ಚಾಮುಂಡೇಶ್ವರಿ ತಾಯಿಯ ದರ್ಶನಕ್ಕಾಗಿ ಬರುವ ಭಕ್ತ ಜನರ ಸುಲಿಗೆಗೆ ಇಳಿದಿದೆ. ಉಳ್ಳವರು ಎರಡು ಸಾವಿರ ನೀಡಿ ದರ್ಶನ ಮಾಡುತ್ತಾರೆ. ಇಲ್ಲದವರ ಪರಿಸ್ಥಿತಿಯೇನು. ಮಹಿಳೆಯರಿಗೆ 2000 ಸಾವಿರ ಉಚಿತವಾಗಿ ನೀಡಿ, ಮತ್ತೆ ಅದನ್ನು ಕಿತ್ತುಕೊಳ್ಳುವುದು ಸರ್ಕಾರದ ಉದ್ದೇಶವೂ ಆಗಿರಬಹುದು. ಈ ಸರ್ಕಾರ ಜನ ನೆಮ್ಮದಿಯಾಗಿರಲಂತೂ ಬಿಡಲ್ಲ. ದರ್ಶನಕ್ಕೆ ಬಡ, ಮಾಧ್ಯಮ ವರ್ಗದವರು ಎರಡು ಸಾವಿರ ನೀಡಿ ದರ್ಶನ ಮಾಡಲಂತೂ ಸಾಧ್ಯವಿಲ್ಲ. ಈ ಸರ್ಕಾರದ್ದು ಒಂದು ರೀತಿ ಹಿಂದು ವಿರೋಧಿ ಧೋರಣೆ. ಆದರೆ, ಸರ್ಕಾರ ನಡೆಸಲು ಹಿಂದೂಗಳ ಹಣವೇ ಬೇಕಾಗಿದೆ. ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಾತೆತ್ತಿದರೆ ಸಮ ಸಮಾಜ ಎಂದು ಉದ್ದುದ್ದ ಭಾಷಣ ಮಾಡುತ್ತಾರೆ. ಆದರೆ ದೇವಸ್ಥಾನದಲ್ಲೇ ಈ ರೀತಿ ದರ್ಶನಕ್ಕೆ 2000 ನಿಗದಿ ಮಾಡಿರುವುದು ಸರಿಯಲ್ಲ. ಈ ನಿರ್ಧಾರವನ್ನು ಮರು ಪರಿಶೀಲನೆ ಮಾಡಬೇಕು. ಹಿಂದೆ ಇದ್ದಂತೆ ವಿಶೇಷ ದರ್ಶನ ವ್ಯವಸ್ಥೆ ಮುಂದುವರೆಯಬೇಕೆಂದು ಈ ಮೂಲಕ ಆಗ್ರಹ.

– ಬಿ.ಎಂ. ಸಂತೋಷ್ ಕುಮಾರ್, ಮೈಸೂರು.

■ ನ್ಯಾಯ ಎಲ್ಲಿದೆ...ಮಾನವೀಯತೆ ಎಲ್ಲಿದೆ...?

ಮಾನ್ಯರೆ,

NIE ಆಡಳಿತ ಮಂಡಳಿ 2022–23ನೇ ಸಾಲಿನಲ್ಲಿ NIE ಮತ್ತು NIEIT ವಿಲೀನ ಎಂದರು. 2025–26ನೇ ಸಾಲಿಗೆ ವಿಲೀನ ಪ್ರಕ್ರಿಯೆ ಅಂತ್ಯದ ನಂತರ ಜ್ಯೇಷ್ಠತೆಯ ಪಟ್ಟಿ ಬಿಡುಗಡೆ ಮಾಡಿ ನಮ್ಮನ್ನು NIE ಸಂಸ್ಥೆಯಲ್ಲಿ ಸೇವೆ ಮುಂದುವರೆಸುವ ಲಿಖಿತ ಭರವಸೆ ಕೊಟ್ಟಿದ್ದರು. 2022–23 ರಿಂದ 2025–26ರವರೆಗೆ NIE ಮತ್ತು NIEIT ಕರ್ತವ್ಯ ನಿರ್ವಹಿಸಲು NIE ಆಡಳಿತ ಮಂಡಳಿ ತಿಳಿಸಿತು. ಅವರ ಮಾತನ್ನು ನಂಬಿ ನಾವು ಒಟ್ಟು 99 ಜನ ಎಲ್ಲೂ ಬೇರೆ ಕೆಲಸದ ಯೋಚನೆ ಮಾಡದೆ ದುಡಿದೆವು. ಇನ್ನೇನು ವಿಲೀನ ಪ್ರಕ್ರಿಯೆ ಮುಗಿಯುವ ಹಂತದಲ್ಲಿ ಇದು ವಿಲೀನ ಅಲ್ಲ. ನಿಮ್ಮ NIEIT ಸಂಸ್ಥೆ ಮುಚ್ಚಲಾಗಿದೆ ಎಂದು ಬಣ್ಣ ಬದಲಿಸಿದರು. ಈ ಸಂಬಂಧ ಪ್ರಾಚಾರ್ಯರಾದ ಡಾ. ರೋಹಿಣಿ ನಾಗ ಪದ್ಮ ಅವರಲ್ಲಿ ವಿನಂತಿ ಮಾಡಿದರೂ ಪ್ರಯೋಜನ ಆಗಲಿಲ್ಲ. ನಂತರ ಕಾರ್ಯದರ್ಶಿ ಉದಯಶಂಕರ್ ಅವರ ಭೇಟಿಗಾಗಿ ಅನುಮತಿ ಕೇಳಿದೆವು. ಅವರು ಅನುವು ಮಾಡಿಕೊಡಲೇ ಇಲ್ಲ. ಇದ್ದಕಿದ್ದ ಹಾಗೇ ನೀವು ಸ್ವಯಂ ಪ್ರೇರಣೆಯಿಂದ ಸಂಸ್ಥೆಯಿಂದ ಬೇರ್ಪಡುವಂತಹ (VSS) ಒಂದು ಯೋಜನೆ ಜಾರಿಗೆ ತಂದು ಈ ಯೋಜನೆ ಸ್ವೀಕರಿಸಿದರೆ NIE ಸಂಸ್ಥೆಯಲ್ಲಿ ಕೆಲಸಕ್ಕೆ ಪ್ರಕಟಣೆ ಮೂಲಕ ಕರೆದಾಗ ನಾವು ಮತ್ತೆ ಹೊಸ ಅಭ್ಯರ್ಥಿ ರೀತಿ ಅರ್ಜಿ ಹಾಕಿ ಆಯ್ಕೆ ಪ್ರಕ್ರಿಯೆಯಲ್ಲಿ ಕೆಲಸ ಪಡೆಯುವಂತೆ ತಿಳಿಸಿದರು. ಲಿಖಿತ ರೂಪದ ಪತ್ರ ಕೊಟ್ಟು ನೆರವೇರಿಸದೆ ಬಣ್ಣ ಬದಲಿಸಿದ ವಚನ ಭ್ರಷ್ಟರನ್ನು ಹೇಗೆ ನಂಬುವುದೆಂದು ನಾವೆಲ್ಲರೂ ಒಟ್ಟಿಗೆ 99 ರಲ್ಲಿ 76 ಜನ ದಿನಾಂಕ 27–05–2025 ರಂದು ಉಚ್ಚ ನ್ಯಾಯಾಲಯದ ಮೊರೆ ಹೋದೆವು. ಈ ಮಧ್ಯೆ ದಿನಾಂಕ 12–06–2025 ರಂದು ನ್ಯಾಯಾಲಯದಲ್ಲಿ ನಮ್ಮ ವಾದ ಇತ್ತು. ದಿನಾಂಕ 11–06–2025ರಂದು 76 ಉದ್ಯೋಗಿಗಳ ಖಾತೆಗೆ ನಮ್ಮ ಒಪ್ಪಿಗೆ ಇಲ್ಲದೆ ಒಂದಷ್ಟು ಹಣ ಹಾಕಿ, 12–06–2025 ರಂದು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಕಾಲೇಜಿನ ಆವರಣಕ್ಕೆ ಬರದಂತೆ ಹೊರಗೆ ನಿಲ್ಲಿಸಿ, ನೀವು ಇನ್ನೂ ಮುಂದೆ ಕೆಲಸಕ್ಕೆ ಬರುವ ಹಾಗಿಲ್ಲ ಎಂದು ತಿಳಿಸಿದರು. ದಿನಾಂಕ 12–06–2025 ರಂದು ನ್ಯಾಯಾಲಯದಲ್ಲಿ ನಡೆದ ವಾದದಲ್ಲಿ ಪರಿಶೀಲನೆ ನಡೆಯುವವರೆಗೆ ಸೇವೆ ಮುಂದುವರಿಸುವಂತೆ ಮಧ್ಯಂತರ ಆದೇಶ ನೀಡಿದ್ದಾರೆ. ಆದರೆ ನಮ್ಮನ್ನು ಈಗ ಕಾಲೇಜಿನ ಆವರಣಕ್ಕೆ ಬಿಡುತ್ತಿಲ್ಲ. ಇದು ಸರ್ವಾಧಿಕಾರದ ಧೋರಣೆ, ಈ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಗೌರವ ತೋರಿರುವ NIE ಆಡಳಿತ ಮಂಡಳಿ ನಿರ್ದೇಶಕರಿಗೆ ನಮ್ಮ ಧಿಕ್ಕಾರ. ನಿಮ್ಮ ಬೆಂಬಲ ನಮಗಿರಲಿ

– ಡಾ. ಕೆ.ಬಿ. ನಳಿನಿ, ಅಸೋಸಿಯೇಟ್ ಪ್ರೊಫೆಸರ್, NIEIT



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮದ್ಯಪಾನವೆಂಬ ಮಹಾವ್ಯಸನ

ಮಾನವನು ಮದ್ಯವನ್ನು ಎಂದು ತಯಾರಿಸಲು ಕಲಿತನೋ ತಿಳಿಯದು. ಅಂದಿನಿಂದ ಇಂದಿನವರೆಗೂ ಅದು ಮಾನವ ಕುಲವನ್ನು ಭದ್ರವಾಗಿ ಹಿಡಿದು ಪೀಡಿಸುತ್ತಿದೆ. ವೇದಗಳ ಕಾಲದಲ್ಲೂ ಮದ್ಯ (ಸುರಾ) ಇತ್ತು ಎಂಬುದಕ್ಕೆ ಪ್ರಮಾಣವಿದೆ. ವೇದಗಳಿಂದ ವಿಹಿತವಾದ ಸೌತ್ರಾಮಣಿ ಎಂಬ ಯಜ್ಞವಿದೆ. ಇದರಲ್ಲಿ ಆರಾಧ್ಯನಾದವನು ಇಂದ್ರ. ಈ ಯಜ್ಞದಲ್ಲಿ ಇಂದ್ರನಿಗೆ ಅರ್ಪಿಸಬೇಕಾದ ಹವಿರ್ದ್ರವ್ಯಗಳಲ್ಲಿ ಸುರಾ ಒಂದು. ಉಪನಿಷತ್ತುಗಳಲ್ಲಿ ಕೆಲವು ಕಡೆ ಸುರೆಯ ಪಾನದ ಪ್ರಸ್ತಾವ ಉಂಟು. ಅನಂತರ ಕೆಲವು ಸಂಸ್ಕೃತ ಕಾವ್ಯಗಳಲ್ಲೂ, ನಾಟಕಗಳಲ್ಲೂ ಸುರಾ ಪಾನದ ವರ್ಣನೆಗಳುಂಟು. ಇವೆಲ್ಲವೂ ಮದ್ಯ ಪಿಶಾಚಿ ತನ್ನ ಕಬಂಧ ಬಾಹುಗಳನ್ನು ಸದಾ ಸಮಾಜದಲ್ಲಿ ಚಾಚುತ್ತಿತ್ತು ಎಂಬುದನ್ನು ಸೂಚಿಸುತ್ತವೆ.

ಆದರೆ ಎಲ್ಲ ಕಾಲದಲ್ಲೂ ಜ್ಞಾನಿಗಳು ಮದ್ಯಪಾನದಿಂದ ವ್ಯಕ್ತಿಯ ಮೇಲೆ, ಕುಟುಂಬದ ಮೇಲೆ, ಸಮಾಜದ ಮೇಲೆ, ರಾಷ್ಟ್ರದ ಮೇಲೆ ಆಗುವ ಅಪಾಯವನ್ನು ಗುರುತಿಸಿದ್ದರು. ಮದ್ಯಪಾನ ಒಂದು ಶಾಪ ಮತ್ತು ಪಾಪ, ಮನುಷ್ಯನು ಅದರ ದಾಸನಾಗಬಾರದು ಎಂಬ ಎಚ್ಚರಿಕೆಯನ್ನು ಕೊಡುತ್ತಲೇ ಇದ್ದರು.


ಏಕತಶ್ಚತುರೋ ವೇದಾ ಬ್ರಹ್ಮಚರ್ಯಂ ತಥೈಕತಃ।
ಏಕತಃ ಸರ್ವಪಾಪಾನಿ ಮದ್ಯಪಾನಂ ತಥೈಕತಃ॥

ನಾಲ್ಕು ವೇದಗಳೂ (ತಕ್ಕಡಿಯ) ಒಂದು ಕಡೆ. ಬ್ರಹ್ಮಚರ್ಯವೊಂದೇ (ತಕ್ಕಡಿಯ) ಇನ್ನೊಂದು ಕಡೆ. (ಎರಡೂ ಸಮ) (ತಕ್ಕಡಿಯ) ಒಂದು ಕಡೆ ಸಕಲ ಪಾಪಗಳು. ಇನ್ನೊಂದು ಕಡೆ ಮದ್ಯಪಾನ. (ಎರಡೂ ಸಮ) ಎಂದು ಒಂದು ಸುಭಾಷಿತ ಹೇಳಿದೆ. ಹಾಗೆಂದರೆ ಮದ್ಯಪಾನ ಒಂದನ್ನೇ ಮಾಡಿದರೂ ಎಲ್ಲ ಪಾಪಗಳನ್ನೂ ಕುಡುಕನು ಮಾಡಿದಂತೆ ಎಂದು ಅಭಿಪ್ರಾಯ. ಇನ್ನೊಂದು ಸುಭಾಷಿತ ಹೀಗಿದೆ–

ಚಿತ್ತೇ ಭ್ರಾಂತಿರ್ಜಾಯತೇ ಮದ್ಯಪಾನಾತ್
ಭ್ರಾಂತೇ ಚಿತ್ತೇ ಪಾಪಚರ್ಯಾಮುಪೈತಿ।
ಪಾಪಂ ಕೃತ್ವಾ ದುರ್ಗತಿಂ ಯಾಂತಿ ಮೂಢಾಃ
ತಸ್ಮಾನ್ಮದ್ಯಂ ನೈವ ಪೇಯಂ ನ ಪೇಯಮ್॥

ಮದ್ಯಪಾನದಿಂದ ಮನಸ್ಸಿನಲ್ಲಿ ನಾನಾ ಪ್ರಕಾರದ ಭ್ರಾಂತಿಯು ಹುಟ್ಟುತ್ತದೆ. ಭ್ರಾಂತಿಯುಂಟಾದಾಗ ಮನುಷ್ಯನು ಪಾಪಕಾರ್ಯಗಳಲ್ಲಿ ತೊಡಗುತ್ತಾನೆ. ಪಾಪವನ್ನಾಚರಿಸಿದ ಮೂಢರು ಹೀನಗತಿಗೆ ಇಳಿದು ನರಕವನ್ನು ಸೇರುತ್ತಾರೆ. ಆದ್ದರಿಂದ ಮದ್ಯವನ್ನು ಕುಡಿಯಬಾರದು, ಕುಡಿಯಲೇಬಾರದು–ಎಂದು ಈ ಸುಭಾಷಿತದ ಸಾರಾಂಶ.

ಇಷ್ಟೆಲ್ಲಾ ಜನರಿಗೆ ತಿಳಿಯದೆ ಇಲ್ಲ. ಬಾಲ್ಯದಲ್ಲಿ ನಾನೂ ನನ್ನ ಹಳ್ಳಿಯಲ್ಲಿ ಹೆಂಡ–ಸಾರಾಯಿ ಕುಡಿದು ಮತ್ತರಾಗಿ ತೂರಾಡುವವರನ್ನು, ಯದ್ವಾತದ್ವಾ ಹಿರಿಯರನ್ನೂ, ಕಿರಿಯರನ್ನೂ ಬೈಯುತ್ತಿದ್ದವರನ್ನೂ ಕಂಡಿದ್ದೆ. ಇಂಥ ಕೆಟ್ಟ ಅವಸ್ಥೆ ಬರುವುದೆಂದು ತಿಳಿದಿದ್ದರೂ ಜನರೇಕೆ ಕುಡಿತದ ಚಟಕ್ಕೆ ಬಲಿ ಪಶುಗಳಾಗುತ್ತಾರೆ? ಅನೇಕ ಸಂದರ್ಭಗಳಲ್ಲಿ ಹಿರಿಯರನ್ನು ಕಂಡು ತಾವೂ ಹಾಗೆ ಮಾಡುವುದೇ ಸರಿಯೆಂಬ ಭಾವನೆಯಿಂದ ಹಾಗಾಗುವುದುಂಟು. ಇನ್ನು ಕೆಲವು ಸನ್ನಿವೇಶಗಳಲ್ಲಿ ಸಮಾನ ವಯಸ್ಕರ, ಸ್ನೇಹಿತರ ಒತ್ತಾಯಕ್ಕೆ ಕಟ್ಟುಬಿದ್ದು ಒಂದು ಸಲ ತಾನೆ, ತಿಂಗಳಿಗೊಮ್ಮೆ, ವಾರಕ್ಕೊಮ್ಮೆ ಕುಡಿದರೆ ಏನು ಹಾನಿ ಎಂದು ಅಭ್ಯಾಸದ ಆರಂಭವಾಗಿ ದಿನವೂ ಕುಡಿಯುವ ಚಟವೇ ಹುಟ್ಟಿಕೊಳ್ಳುತ್ತದೆ. ಕೆಸರಿನಲ್ಲಿ ಕಾಲಿಟ್ಟ ಮೇಲೆ ಮುಳುಗುವವರೆಗೂ ಜಾರುವ ಅನಿವಾರ್ಯತೆ ಉಂಟಾಗುತ್ತದೆ. ಈ ಚಟಕ್ಕೆ ಹಣವನ್ನು ಒದಗಿಸಲು ಅಕಾರ್ಯಗಳಿಗೆ ಕೈಹಾಕಿ ಶಾಶ್ವತ ದುಃಖಕ್ಕೆ ಈಡಾಗುವವರೇ ಹೆಚ್ಚು. ಸರ್ಕಾರಗಳು ಮದ್ಯದ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿ ಅದನ್ನೇ ತಮ್ಮ ಆದಾಯದ ಮೂಲವನ್ನಾಗಿ ಮಾಡಿಕೊಂಡಿವೆ. ಅಷ್ಟು ದುಬಾರಿಯಾದ ಮದ್ಯವನ್ನು ಕೊಂಡುಕೊಳ್ಳಲಾರದ ಮದ್ಯವ್ಯಸನಿಗಳು ಕಳ್ಳಭಟ್ಟಿಯ ಮೊರೆ ಹೋಗುತ್ತಾರೆ. ಇದನ್ನು ತಡೆಯಲು ಸರ್ಕಾರಗಳು ಎಷ್ಟು ಪ್ರಯತ್ನಿಸಿದರೂ ಅಲ್ಲಲ್ಲಿ ಕಳ್ಳಾಟ ನಡೆಯುತ್ತಲೇ ಇರುತ್ತದೆ. ಇದರಿಂದ ವಿಷ ಮದ್ಯವನ್ನು ಕುಡಿದು ಅನೇಕರು ಸಾಯುತ್ತಾರೆ, ಕೆಲವರು ಕಣ್ಣಿನ ಶಕ್ತಿಯನ್ನೇ ಕಳೆದುಕೊಂಡು ಅಂಧರಾಗುತ್ತಾರೆ.



ಕುಡಿತದ ಚಟಕ್ಕೆ ಎಂದೂ ವಶರಾಗದಿರುವುದು ಅತ್ಯುತ್ತಮ. ಅಕಸ್ಮಾತ್ ವ್ಯಸನಿಗಳಾಗಿದ್ದವರು ಆ ವ್ಯಸನದಿಂದ ಮುಕ್ತರಾಗುವುದು, ಹಾಗೆ ಆಗಲು ನೆರವನ್ನು ನೀಡುವುದು ಸಮಾಜದ ಕರ್ತವ್ಯ. ಈ ದಿಶೆಯಲ್ಲಿ ಕಾರ್ಯೋನ್ಮುಖರಾಗಿರುವವರು ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ದೇಶಿಕೇಂದ್ರ ಸ್ವಾಮಿಗಳು. ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸಿ ಅವರು ವೈದ್ಯರ ನೆರವಿನಿಂದ ಅನೇಕರನ್ನು, ಮದ್ಯಪಾನದ ಕೆಸರಿನಲ್ಲಿ ಮುಳುಗಿದ್ದವರನ್ನು ಮೇಲಕ್ಕೆತ್ತಿ ಉದ್ಧರಿಸಿದ್ದಾರೆ. ಶ್ರೀಮಠದಿಂದ ಆಯೋಜಿತವಾದ ಶಿಬಿರವು ಕಳೆದ ಏಪ್ರಿಲ್ 14 ರಿಂದ 23 ರವರೆಗೆ ಹತ್ತು ದಿನ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನಲ್ಲಿರುವ ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ನಡೆಯಿತು. 2014ನೆಯ ಇಸವಿ ಯಿಂದ ಇಂತಹ ಶಿಬಿರಗಳನ್ನು ಉಚಿತವಾಗಿ, ಎಂದರೆ ಶುಲ್ಕರಹಿತವಾಗಿ ನಡೆಸುತ್ತಾ ಬಂದಿರುವುದು ಶ್ರೀ ಜಗದ್ಗುರುಗಳ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಸುತ್ತೂರಿನಲ್ಲೇ ಇದುವರೆಗೆ ಐದು ಶಿಬಿರಗಳು ನಡೆದಿದ್ದು, ಮುನ್ನೂರ ಎಂಬತ್ತೆರಡು ಜನರು ವ್ಯಸನಮುಕ್ತರಾಗಿದ್ದಾರೆಂಬುದು ಶಿಬಿರಗಳ ಸಾಫಲ್ಯವನ್ನು ಎತ್ತಿ ತೋರಿಸುತ್ತದೆ.

ರಾಮಾಪುರದಲ್ಲಿ 109 ಜನರು, ಗುಂಡ್ಲುಪೇಟೆಯ ಎರಡು ಶಿಬಿರಗಳಲ್ಲಿ 103 ಜನ, ಸರಗೂರಿನ ಶಿಬಿರದಲ್ಲಿ 34 ಜನ, ನಂಜನಗೂಡಿನ ಶಿಬಿರದಲ್ಲಿ 34 ಜನ, ಚಾಮರಾಜನಗರದಲ್ಲಿ 58 ಜನ, ತಿರುಮಕೂಡಲು ನರಸೀಪುರದಲ್ಲಿ 31 ಜನ, ಹೆಗ್ಗಡದೇವನಕೋಟೆಯಲ್ಲಿ 58 ಜನ, ಕೊಳ್ಳೇಗಾಲದಲ್ಲಿ 47 ಜನ, ಹುಣಸೂರಿನಲ್ಲಿ 53 ಜನ, ಕೃಷ್ಣರಾಜನಗರದಲ್ಲಿ 52 ಜನ, ಪಿರಿಯಾಪಟ್ಟಣದಲ್ಲಿ 52 ಜನ, ಯಳಂದೂರಿನಲ್ಲಿ 30 ಜನ, ಹನೂರಿನಲ್ಲಿ 51 ಜನ, ಹೀಗೆ ಒಟ್ಟು ಶ್ರೀಮಠದಿಂದ ನಡೆಸಿದ ಉಚಿತ ಶಿಬಿರಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರು ಮದ್ಯವ್ಯಸನದಿಂದ ಮುಕ್ತರಾಗಿದ್ದಾರೆ ಎಂಬುದು ನಿಜಕ್ಕೂ ಶ್ಲಾಘನೀಯ. ಈ ಕಾರ್ಯದಲ್ಲಿ ಇತರ ಕೆಲವು ಸಂಸ್ಥೆಗಳೂ ಕೈಜೋಡಿಸಿವೆ ಎಂಬುದು ಪ್ರಶಂಸಾರ್ಹ.

ಅನೇಕರ ಜೊತೆ ನಾನು ಈ ಬಗೆಗೆ ಮಾತನಾಡಿದಾಗ ಅವರು ಶಿಬಿರಗಳ ಸಫಲತೆಯ ಬಗೆಗೆ ಸಂಶಯವನ್ನು ವ್ಯಕ್ತಪಡಿಸಿದರು. ನಿಜ, ಶಿಬಿರದಲ್ಲಿದ್ದಾಗ ವ್ಯಸನಮುಕ್ತರಾಗಿರುತ್ತಾರೆ. ಆಮೇಲೆ ತಮ್ಮ ಊರಿಗೋ ಹಳ್ಳಿಗೋ ಹೋದ ಮೇಲೆ ಮದ್ಯದ ಪ್ರಲೋಭನೆಗೆ ಒಳಗಾಗಿ ಮತ್ತೆ ಕುಡಿಯಲು ಆರಂಭಿಸುತ್ತಾರೆ. ಏನು ಮಾಡುತ್ತೀರಿ? ಶಿಬಿರ ಮಾಡಿದ್ದು ಬೂದಿಯಲ್ಲಿ ಹೋಮ ಮಾಡಿದಂತಾಗುವುದಿಲ್ಲವೆ? ಎಂಬುದು ಅವರ ಪ್ರಶ್ನೆ.

ಇದಕ್ಕೆ ಉತ್ತರವಿದೆ. ಶ್ರೀಗಳಿಗೆ ಈ ಸಮಸ್ಯೆ ಗೊತ್ತಿದೆ. ಶಿಬಿರಗಳಲ್ಲಿ ಭಾಗವಹಿಸಿ ವ್ಯಸನಮುಕ್ತರಾದವರ ಅನುಸರಣೆ (Followup) ಮಾಡಿ ಅವರು ಶಾಶ್ವತ ವ್ಯವಸನಮುಕ್ತರಾಗಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಲು ಜೆಎಸ್‌ಎಸ್ ಆಪ್ತ ಸಮಾಲೋಚನಾ ಕೇಂದ್ರವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಆರಂಭಿಸಿದ್ದಾರೆ. ಗಿಡಗಳನ್ನು ನೆಟ್ಟರೆ ಸಾಲದು, ಅವುಗಳನ್ನು ಬೇಸಿಗೆಯ ಬಿಸಿಲಿನಲ್ಲಿ ನೀರು ಉಣಿಸಿ ನೋಡಿಕೊಳ್ಳಬೇಕು ಎಂಬ ತತ್ತ್ವವನ್ನಿಲ್ಲಿ ಅನುಸರಿಸಲಾಗಿದೆ. ವ್ಯಸನಮುಕ್ತರಿಗೆ ಸಮಸ್ಯೆಗಳುಂಟಾದಾಗ ಪರಿಹಾರಗಳನ್ನು ತಿಳಿಸುವುದಕ್ಕಾಗಿ ಸಮಾಲೋಚಕರನ್ನು ನಿಯೋಜಿಸಲಾಗಿದೆ.

ಎಲ್ಲಕ್ಕೂ ಮುಖ್ಯವಾಗಿ ಮದ್ಯವ್ಯಸನಿಗಳು ಆತ್ಮಾವಲೋಕನವನ್ನು ಮಾಡಿಕೊಳ್ಳುವ ಅವಶ್ಯಕತೆ ಇದೆ. ತಾನು ಏಕೆ ಈ ದೌರ್ಬಲ್ಯಕ್ಕೆ ಒಳಗಾದೆ ಎಂಬುದನ್ನು ಚಿಂತಿಸಿ, ಆ ವ್ಯಸನದ ದುಷ್ಪರಿಣಾಮಗಳು ಕೇವಲ ತನ್ನ ಮೇಲೆ ಮಾತ್ರವಲ್ಲ, ತನ್ನ ಹೆಂಡತಿ, ಮಕ್ಕಳು, ಅಣ್ಣ ತಮ್ಮಂದಿರು ಹೇಗೆ ತನ್ನಿಂದ ದುಃಖಿತರಾಗುತ್ತಾರೆ ಎಂಬುದನ್ನು ಆಲೋಚಿಸುವಂತೆ ಮಾಡಬೇಕು. ಇದಕ್ಕಾಗಿ ಪರಿಣಿತರ ಗುಂಪನ್ನೇ ಜಗದ್ಗುರುಗಳು ರಚಿಸಿದ್ದಾರೆ. ವ್ಯವಸನಿಗಳು, ವ್ಯಸನಮುಕ್ತರು ಈ ಪರಿಣಿತರೊಡನೆ ಸಾಕ್ಷಾತ್ತಾಗಿ ಅಥವಾ ಆನ್‌ಲೈನ್ ಮೂಲಕ ಸಂವಾದಗಳನ್ನು ಮಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವ್ಯವಸ್ಥೆಯನ್ನು ಮಾಡಲಾಗಿದೆ.

ಇಂದಿನ ಪ್ರಪಂಚದ ಮುಖ್ಯ ಸಮಸ್ಯೆ – ಮದ್ಯ ವ್ಯಸನಮುಕ್ತರಿಗೆ ಮಾತ್ರ ಅಲ್ಲ, ನಮ್ಮೆಲ್ಲರಿಗೂ – ಇರುವುದು ಮಾನಸಿಕ ಒತ್ತಡ (Mental Tension). ಇದಕ್ಕೆ ನಮ್ಮ ಪ್ರಾಚೀನರು ಕಂಡುಕೊಂಡ ಮಾರ್ಗ ಯೋಗ. ಮಾನಸಿಕ ಒತ್ತಡವನ್ನೇ ಅವರು ಚಿತ್ತವೃತ್ತಿ ಎಂದು ಕರೆದರು. ಯೋಗಶ್ಚಿತ್ತ ವೃತ್ತಿ ನಿರೋಧ : ಎಂಬುದು ಪತಂಜಲಿಯ ಸೂತ್ರ. ಮದ್ಯವ್ಯಸನದಿಂದ ಮುಕ್ತರಾಗಬಯಸುವವರು ತರುಣರಾಗಲೀ ಅಥವಾ ಹಿರಿಯರಾಗಲೀ ಯೋಗಾಭ್ಯಾಸವನ್ನು ಮಾಡಿ ಪ್ರಾಣಾಯಾಮ ಮತ್ತು ಧ್ಯಾನಗಳಲ್ಲಿ ತೊಡಗಿದರೆ ಒತ್ತಡ ದಿಂದ ಮುಕ್ತರಾಗಬಹುದು ಎಂಬ ಉದ್ದೇಶದಿಂದ ಶಿಬಿರದಲ್ಲಿ ಪ್ರತಿದಿನವೂ ಯೋಗಾಭ್ಯಾಸವನ್ನು ನುರಿತ ಶಿಕ್ಷಕರಿಂದ ಏರ್ಪಡಿಸಿದ್ದಾರೆ. ಇದು ಶಿಬಿರಾರ್ಥಿಗಳ ಸುಯೋಗ. ಅಲ್ಲದೆ ಸಾಂಸ್ಕೃತಿಕ ಚಟು ವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸಲು ಮತ್ತು ಬೆಳೆಸಿಕೊಳ್ಳಲು ಅವಕಾಶವಿದೆ. ಸಮೀಪದ ಗ್ರಾಮಗಳ ಮುಖಂಡರನ್ನೂ ಶಿಬಿರಕ್ಕೆ ಆಹ್ವಾನಿಸಿ ಅವರ ಅನುಭವದ ಫಲವೂ ಶಿಬಿರಾರ್ಥಿಗಳಿಗೆ ದೊರಕುವಂತೆ ಮಾಡಿರುವುದು ಇನ್ನೊಂದು ವೈಶಿಷ್ಟ್ಯ. ಈ ಶಿಬಿರವು ಒಂದು ಆಶಾಕಿರಣ. ಇದರ ಬೆಳಕು ಎಲ್ಲೆಲ್ಲೂ ಹರಡಲಿ. ಶಿಬಿರದ ಉದ್ದೇಶ ಸಾರ್ಥಕವಾಗಲಿ ಎಂದು ಹಾರೈಸೋಣ.

ಅಭಿವೃದ್ಧಿ ಮಾಡಲು ನಮ್ಮವರಿಗೆ ಸದ್ಬುದ್ಧಿ ಬೇಕು!



ಮಿರ್ಲೆ ಚಂದ್ರಶೇಖರ
ಮೊ: 9916129654

ಸಾಂಸ್ಕೃತಿಕ ನಗರ ಮೈಸೂರು ಇನ್ನು ಸಾವಿರ ವರ್ಷವಾದರೂ ತನ್ನ ಹಿರಿಮೆಯನ್ನು ಕಳೆದುಕೊಳ್ಳುವುದಿಲ್ಲ. ಕಾರಣ, 20ನೇ ಶತಮಾನದ ಆರಂಭದಲ್ಲಿ ಪ್ರಭುತ್ವದ ಆಡಳಿತದಲ್ಲಿ ಕೈಗೊಂಡ ಸ್ಪಷ್ಟ ನಿರ್ಣಯಗಳು ಹಾಗೂ ಅನುಷ್ಠಾನಗೊಂಡ ಕಮಿಷನ್‌ರಹಿತವಾದ ಯೋಜನೆಗಳ ಫಲ. ನಮ್ಮ ಸುಂದರ ಮೈಸೂರು, ಇಲ್ಲಿನ ನಿವಾಸಿಗಳಿಗೆ ಹಾಗೂ ಬರುವ ಪ್ರವಾಸಿಗರಿಗೆ ನೆಮ್ಮದಿ ಕೊಡುವ, ಕಣ್ಣಿಗೆ ಮುದ ನೀಡುವ ಪ್ರಶಾಂತ ನಗರವಾಗಿ ನಿರ್ಮಾಣಗೊಳ್ಳಲು ಶ್ರಮ ವಹಿಸಿದ ನಮ್ಮ ದೊರೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್.

ಜೂನ್ 4ರಂದು ಅಭಿವೃದ್ಧಿಯ ಹರಿಕಾರ, ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮದಿನವನ್ನು ಮೈಸೂರು ಪ್ರಾಂತದ ಎಲ್ಲೆಡೆ ಅದ್ಧೂರಿಯಾಗಿ ಮನೆಯ ಹಬ್ಬದಂತೆ ಆಚರಿಸಿದರು. ಹಾಗೆಯೇ ಆಗಸ್ಟ್ 3ರಂದು ಅವರ ಪುಣ್ಯ ಸ್ಮರಣೆಯ ದಿನವನ್ನು 85 ವರ್ಷ ಗಳಾದರೂ ಆಚರಿಸಿಕೊಂಡು ಬರುತ್ತಿದ್ದೇವೆ. ದೊರೆಗಳು ಕೈಗೊಂಡ ನೂರಾರು ಅಭಿವೃದ್ಧಿ ಕಾರ್ಯಗಳು ಲಕ್ಷಾಂತರ ಜನರ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿ ಆಗಿದ್ದರ ಪ್ರತಿಫಲವಾಗಿ ಅವರನ್ನು ಮೈಸೂರು ಸಂಸ್ಥಾನದ ಜನತೆ ಎಂದೆಂದಿಗೂ ಮರೆಯಲಾರರು. ಅವರು ಮಾಡಿದ ಜನಪರ ಕೆಲಸಗಳ ಸಾಕ್ಷಿಗಳು ಮೈಸೂರು ಇರುವವರೆಗೂ ಇದ್ದೇ ಇರುತ್ತವೆ. ಆದರೆ, ಒಂದು ಆತಂಕವಿದೆ. ಸ್ವಪ್ರತಿಷ್ಠೆಗಾಗಿ ಬೃಹತ್ ಮೈಸೂರು ಮಾಡಲು ಹೊರಟಿರುವ ಮಹನೀಯರು ಬೆಂಗಳೂರಿನಂತೆ ನೆಮ್ಮದಿ ಇಲ್ಲದ ಊರನ್ನಾಗಿ ಅಭಿವೃದ್ಧಿಗೊಳಿಸುವ ಎಲ್ಲಾ ಸೂಚನೆಗಳು ಇವೆ.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ 18ನೇ ವಯಸ್ಸಿನಲ್ಲಿ ಪಟ್ಟವನ್ನು ಅಲಂಕರಿಸಿ, ಸುಮಾರು 38 ವರ್ಷಗಳ ಸುದೀರ್ಘ ಆಡಳಿತ ನಡೆಸಿ, ಮೈಸೂರು ಸಂಸ್ಥಾನವನ್ನು ಎಲ್ಲಾ ಕ್ಷೇತ್ರಗಳಲ್ಲೂ ಸರ್ವತೋಮುಖವಾಗಿ ಅಭಿವೃದ್ಧಿಯ ಯಾಗ ಮಾಡಿ ನಾಡನ್ನು ಸುಭಿಕ್ಷಗೊಳಿಸಿದರು. ಜೊತೆಗೆ ಮೈಸೂರು ನಗರವನ್ನು ಯೋಜನಾಬದ್ಧವಾಗಿ ಕಟ್ಟಿದರು.

ಪಟ್ಟಕ್ಕೇರಿದ ವರ್ಷವೇ ಶಿವನಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆ. ಮಿಂಟೋ ಕಣ್ಣಿನ ಆಸ್ಪತ್ರೆ, ಹೆಚ್‌ಎಎಲ್ ವಿಮಾನ ತಯಾರಿಕಾ ಘಟಕ, ಭಾರತೀಯ ವಿಜ್ಞಾನ ಸಂಸ್ಥೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್ತು, ಅಗ್ರಿಕಲ್ಚರಲ್ ಕಾಲೇಜು, ಶ್ರೀಗಂಧದ ಎಣ್ಣೆ ಫ್ಯಾಕ್ಟರಿ, ಸರ್ಕಾರಿ ವಿಜ್ಞಾನ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ನಿಮಾನ್ಸ್ ಸಂಸ್ಥೆಗಾಗಿ 100 ಎಕರೆ ಜಮೀನು ನೀಡಿದರು. ಕೆ.ಆರ್.ಮಾರುಕಟ್ಟೆ, ಟೌನ್‌ಹಾಲ್, ಮಹಿಳೆಯರಿಗಾಗಿ ಕಾಲೇಜು, ವಾಣಿವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ...., ಬರೆದರೆ ಬಹ ಳಷ್ಟು ಇವೆ. ಹಾಗೆಯೇ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಬಂದರೆ ಯಾವುದು ಅಂತ ದಾಖಲಿಸಲಿ. ಇಡೀ ನೆಲದ ಇಂಚಿಂಚು ಸ್ಥಳವು ನಾಲ್ವಡಿ ಕೃಷ್ಣರಾಜರ ಹೆಸರನ್ನು ಕೂಗಿಕೂಗಿ ಹೇಳುತ್ತವೆ. ಒಬ್ಬ ಆಡಳಿತಗಾರನಿಗೆ ಇದ್ದ ದೂರದೃಷ್ಟಿ ಹಾಗೂ ದಕ್ಷತೆಯ ಸೂಚಕವಾಗಿ ಮೈಸೂರು ನಗರವು ಬೆಳೆಯಿತು, ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು.



ನೀರಾವರಿಗೆ ಇವರು ಹೆಚ್ಚಿನ ಒತ್ತುಕೊಟ್ಟರು. ಯಂತ್ರೋಪಕರಣಗಳು ಇಲ್ಲದಿದ್ದ ಕಾಲದಲ್ಲೂ ಅಷ್ಟೊಂದು ಅಗಾಧವಾದ ಭಾರೀ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿ, ನಾವಿಂದು ತಿನ್ನುವ ಅನ್ನವನ್ನು ಕೊಟ್ಟ ದೇವರು ರಾಜರ್ಷಿಯವರು.

ಮೈಸೂರು ಸಂಸ್ಥಾನದ ಅರಸರು ನೀರಾವರಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ಅಪಾರ, ಮಾರಿಕಣಿವೆ ಜಲಾಶಯ(ವಾಣಿವಿಲಾಸ ಸಾಗರ ಅಣೆಕಟ್ಟೆ), ಕೃಷ್ಣರಾಜಸಾಗರ ಅಣೆಕಟ್ಟೆ, ಬೋರನ ಕಣಿವೆ ಜಲಾಶಯ, ಗಾಯತ್ರಿ ಜಲಾಶಯ, ಹಿರೇಬಾಸ್ಕರ ಅಣೆಕಟ್ಟೆ ಹಾಗೂ ಕಾವೇರಿ ನದಿ ಹಾಯುವಿಕೆಯ ಉದ್ದಕ್ಕೂ ಹಲವಾರು ಸಣ್ಣ ಅಣೆಕಟ್ಟೆಗಳನ್ನು ನಿರ್ಮಿಸಿ ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಕಲ್ಪಿಸಿದರು. ವಿದ್ಯುತ್ ಉತ್ಪಾದಿಸುವಲ್ಲಿ ಯಶಸ್ವಿ ಆದರು. ಬ್ರಿಟಿಷರ ದಬ್ಬಾಳಿಕೆ ಕಾಲದಲ್ಲೂ ಅವರನ್ನು ಸಂಬಾಳಿಸಿಕೊಂಡು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಕಂಡ ಮೈಸೂರು ಭಾಗದಲ್ಲಿ ಪ್ರಜೆಗಳಿಂದ ಆಯ್ಕೆಯಾಗಿ ಮೂವತ್ತಕ್ಕೂ ಹೆಚ್ಚು ಮಂತ್ರಿಗಳಿರುವ ಸರ್ಕಾರದಿಂದ ಆಗಿರುವ ಪ್ರಗತಿಯಾದರು ಏನು?

ಸ್ವಾತಂತ್ರ್ಯ ನಂತರ ಪ್ರಾರಂಭವಾದದ್ದು ಪ್ರಜಾಪ್ರಭುತ್ವದ ಆಡಳಿತ, ಅರಸೊತ್ತಿಗೆ ಹೋಗಿ ಶಾಸಕರು, ಮಂತ್ರಿ ಮಹೋದಯರು ಆಡಳಿತ ಚುಕ್ಕಾಣಿ ಹಿಡಿದರು, ಇವರ ತಪ್ಪು–ಒಪ್ಪುಗಳನ್ನು ಎತ್ತಿ ತೋರಲೆಂದು ವಿರೋಧ ಪಕ್ಷದ ಶಾಸಕರು, ಹೀಗೆ ಆಡಳಿತ ವ್ಯವಸ್ಥೆ ಇದ್ದರೂ ಒಬ್ಬ ರಾಜರು ಮಾಡಿದಷ್ಟು ಪರಿಣಾಮಕಾರಿಯಾದ ಅಭಿವೃದ್ಧಿ ಕೆಲಸಗಳು ನಡೆಯಲೇ ಇಲ್ಲ. ಅಂದು ರಾಜರ ಆಸ್ಥಾನದಲ್ಲಿ ವಿರೋಧ ಪಕ್ಷಕ್ಕಿಂತ ಸಲಹೆ ನೀಡುವ ಪರಿಣಿತರಿದ್ದರು. ಅಭಿವೃದ್ಧಿಗೆ ಅವರು ಸಹಕರಿಸುತ್ತಿದ್ದರು. ಯೋಜನೆಗಳಿಗೆ ಹಣ ಸಾಲದಿದ್ದಾಗ ಮೈಮೇಲಿದ್ದ ಒಡವೆ–ವೈಡೂರ್ಯಗಳನ್ನು ಮಾರಿ ಹಣ ಹೊಂದಿಸಿದರು. ಈಗ ನೋಡಿ, ಬೆಲೆ ಏರಿಕೆ, ಕುಡಿಯುವ ಕಾಫಿ–ಟೀಯಿಂದ ಹಿಡಿದು ನಿತ್ಯದ ಜೀವನಕ್ಕೆ ಬಳಸುವ ಎಲ್ಲಾ ವಸ್ತುಗಳ ಮೇಲೆ ಮನಸ್ಸೋ ಇಚ್ಛೆ ವಿಧಿಸುವ ತೆರಿಗೆ ರೂಪದಲ್ಲಿ ಕೋಟಿಕೋಟಿ ಹಣ ಸರ್ಕಾರದ ಖಜಾನೆಗೆ ಸಂಗ್ರಹವಾದರೂ ಅಭಿವೃದ್ಧಿಗಿಂತ ಸೋರಿಕೆಯೇ ಹೆಚ್ಚಾಗಿದೆ.

> ಯಾರಿಗೇ ಪ್ರಶ್ನೆ ಇಟ್ಟರೂ, ಏನು ಮಾಡುವುದು ಮೇಲಿನವರಿಗೆ ಕೊಡಬೇಕು, ನನ್ನ ಟ್ರಾನ್ಸ್‌ಫರ್‌ಗೆ ಕೊಡಬೇಕು ಅಂತಾರೆ; ಕಾಮಗಾರಿಗಳ ಪೂಜೆಯ ಹೆಸರಿನಲ್ಲಿ ವಸೂಲಿಗಿಳಿದ ಜನಪ್ರತಿನಿಧಿ ಕೇಳಿದರೆ ಏನು ಮಾಡುವುದು ಜನರಿಗೆ ಕೊಡಬೇಕು! ಹಾಗಾಗಿ ಚುನಾವಣೆಗೆ ಹಲವು ಕೋಟಿಗಳು ಬೇಕಾಗುತ್ತದೆ. ನಾನೇನು ಮನೆಯಿಂದ ತಂದು ಹಾಕಲಾಗುತ್ತದೆಯೇ?. ಹೀಗೆ ಯಾರೂ ಯಾರನ್ನೂ ಬೊಟ್ಟು ಮಾಡಿ ತೋರಿಸದಂತಾಗಿದೆ. ಕೊನೆಗೆ ತೋರುವ ಬೆರಳುಗಳು ಮತದಾರನ ಕಡೆಗೆ ಇರುತ್ತವೆ. ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿಯೂ ಮತವನ್ನು ಹಣ ಕೊಟ್ಟು ಹಾಕಿಸಿಕೊಂಡರೆಂದು ಮಾತನಾಡುತ್ತಾರೆ. ನಮಗೆ ವಿದ್ಯೆ ಕಲಿಸಿದ ಗುರುಗಳು ಆ ಮಟ್ಟಕ್ಕೆ ಇಳಿಯುವುದಿಲ್ಲ ಎಂಬುದು ನನ್ನ ನಂಬಿಕೆ. ನಂಬುವುದು, ಬಿಡುವುದು ನಿಮಗೆ ಬಿಟ್ಟಿದ್ದು!

ಜನಸೇವೆ ಮಾಡುವುದಕ್ಕೆ ಯಾವ ಖಾತೆ ಆದರೇನು?, ಇಂತಹದ್ದೇ ಖಾತೆಗಳು ಬೇಕೆನ್ನುವುದಕ್ಕೆ ಕಾರಣ ತಿಳಿಯದ ದಡ್ಡ ಜನರು ನಾವಲ್ಲ, ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆಯಲ್ಲಿ ನಡೆಯುವುದು ಏನೆಂದು ಜಗಕ್ಕೇ ಗೊತ್ತಿದೆ, ಕೈಗೊಳ್ಳುವ ಪ್ರತಿಯೊಂದು ಯೋಜನೆಗಳಲ್ಲೂ ಹಣ ದುರುಪಯೋಗ ಆಗುತ್ತಿದೆ. ಅವನಿಗಿಷ್ಟು, ಇವನಿಗಿಷ್ಟು, ಮೇಲಿನವನಿಗಿಷ್ಟು ಎಂದಾದರೆ ಎಲ್ಲವೂ ಮುಗಿಯುವವರೆಗೆ ಇದ್ದು, ಮುಗಿದ ಮೇಲೆ ದುರುಪಯೋಗವಾಗಿದೆ ಎಂದು ದೂರು ಕೊಡುವ ಮಂದಿಗೆ ಲೆಕ್ಕವಿಲ್ಲ. ಆಗ ದೂರು ಕೊಟ್ಟವರಿಗೆ ಹಾಗೂ ಪರಿ ಶೀಲನೆಗೆ ಬಂದವರಿಗೂ ಒಂದಷ್ಟು ಪಾಲು (ಒಳ್ಳೆಯವರು ಇಲ್ಲವೇ ಇಲ್ಲ ಎನ್ನಲಾಗದು, ಅವರು ಭೂತಗಾಜಿಟ್ಟು ನೋಡಬೇಕಿರುವಷ್ಟು ಸಂಖ್ಯೆಯಲ್ಲಿ ದ್ದಾರಷ್ಟೆ) ಹೋಗುತ್ತದೆ. ಇಂತಹ ಅವ್ಯವಸ್ಥೆಯಲ್ಲಿ ನೆನಪುಳಿಯುವ ಕಾಮಗಾರಿಗಳು ನಡೆಯುವು ದುಂಟೆ? ಮತ್ತೇ ಮೈಸೂರು ದೊರೆಗಳು ಕೈಗೊಂಡ ಯೋಜನೆಗಳಿಗೆ ಸರಿಸಾಟಿಯಾಗಿ ನಿಲ್ಲುವುದೇಗೆ?.

ಯಾರಿಗೇ ಪ್ರಶ್ನೆ ಇಟ್ಟರೂ, ಏನು ಮಾಡುವುದು ಮೇಲಿನವರಿಗೆ ಕೊಡಬೇಕು, ನನ್ನ ಟ್ರಾನ್ಸ್‌ಫರ್‌ಗೆ ಕೊಡಬೇಕು ಎಂದರೆ, ಜನಪ್ರತಿನಿಧಿಗಳು ಕಾಮಗಾರಿಗಳ ಪೂಜೆಯ ಹೆಸರಿನಲ್ಲಿ ವಸೂಲಿ, ಅವರನ್ನು ಕೇಳಿದರೆ ಏನು ಮಾಡುವುದು ಜನರಿಗೆ ಕೊಡಬೇಕು, ಮತಕ್ಕಿಷ್ಟು ಅಂತ ಕೊಡಬೇಕು, ಚುನಾವಣೆಗೆ ಹಲವು ಕೋಟಿಗಳು ಬೇಕಾಗುತ್ತದೆ, ನಾನೇನು ಮನೆಯಿಂದ ತಂದು ಹಾಕಲಾಗುತ್ತದೆಯೇ?. ಹೀಗೆ ಯಾರೂ ಯಾರನ್ನೂ ಬೊಟ್ಟು ಮಾಡಿ ತೋರಿಸದಂತಾಗಿದೆ. **ಕೊನೆಗೆ ತೋರುವ ಬೆರಳು ಮತದಾರನ ಕಡೆಗೆ ತೋರಿಸುತ್ತವೆ**. ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿಯೂ ಮತವನ್ನು ಹಣ ಕೊಟ್ಟು ಹಾಕಿಸಿಕೊಂಡರೆಂದು ಮಾತನಾಡುತ್ತಾರೆ. ನಮಗೆ ವಿದ್ಯೆ ಕಲಿಸಿದ ಗುರುಗಳು ಆ ಮಟ್ಟಕ್ಕೆ ಇಳಿಯುವುದಿಲ್ಲ ಎಂಬುದು ನನ್ನ ನಂಬಿಕೆ, ನಂಬುವುದು ನಿಮಗೆ ಬಿಟ್ಟಿದ್ದು!.

ಕೊನೆಗೆ, ಮೈಸೂರು ನಗರಕ್ಕೆ ಸೀಮಿತವಾಗಿ ಒಂದು ಕಾಮಗಾರಿಯ ಅವ್ಯವಸ್ಥೆ ಬಗ್ಗೆ ಬರೆಯಲೇಬೇಕು. ಸುಮಾರು ಹದಿನೈದು ವರ್ಷಗಳಿರ ಬಹುದು ಡಾ.ರಾಜಕುಮಾರ್ ಹೆಸರಿನಲ್ಲಿ ಒಂದು ರಸ್ತೆಯನ್ನು ಬಹುಶಃ ಮುಡಾದವರು ಮಾಡಿಸಿರಬೇಕು. ಕನ್ನಡದ ಕಣ್ಮಣಿ ಹಾಗೂ ಮೇರು ನಟರ ಹೆಸರಿಟ್ಟು ಬಹಳವೇ ಕೆಟ್ಟದಾಗಿ ಹಾಗೂ ಅವೈಜ್ಞಾನಿಕವಾಗಿ ದೂರದೃಷ್ಟಿ ಇಲ್ಲದೆ ನಿರ್ಮಿಸಿರುವ ರಸ್ತೆ ಇದು. ನರಸಿಂಹರಾಜ ಕ್ಷೇತ್ರಕ್ಕೆ ಒಳಪಡುವ ರಸ್ತೆ. ಅಂದಾಜು 3 ಕಿಮೀ ಉದ್ದವಿದೆ. ನಗರ ಯೋಜಕರು ಹಾಗೂ ರಸ್ತೆ ಪರಿಣಿತ ಇಂಜಿನಿಯರ್‌ರವರ ಸಲಹೆ ಪಡೆದು ನಿರ್ಮಾಣ ಆಗಿದ್ದಿದ್ದರೆ ನಗರಕ್ಕೆ ಇದೊಂದು ಅದ್ಭುತವಾದ ರಸ್ತೆ ಆಗುತ್ತಿತ್ತು. ಮಧ್ಯ ಡಿವೈಡರ್ ಅಳವಡಿಸಿರುವ ಎರಡು ಲೇನ್ ರಸ್ತೆ, ಇದಕ್ಕೆ ಎರಡೂ ಬದಿಗಳಲ್ಲಿ ಸಮರ್ಪಕವಾದ ಮಳೆನೀರು ಚರಂಡಿಗಳಿಲ್ಲ, ಪಾದಚಾರಿ ಮಾರ್ಗಗಳು ಇಲ್ಲವಾದ್ದರಿಂದ ಜನರು ರಸ್ತೆಯಲ್ಲೇ ನಡೆಯಬೇಕು, ಟೆರೇಷಿಯನ್ ಕಾಲೇಜು ವೃತ್ತದಿಂದ ನಾಲ್ಕಾರು ಬಡಾವಣೆಗಳನ್ನು ಹಾಯ್ದು ಮಹದೇವಪುರ ರಸ್ತೆಯನ್ನು ಸಂಪರ್ಕಿಸುವ ಮುಖ್ಯ ರಸ್ತೆಯಾಗಿದ್ದು ರಾತ್ರಿ ಆಯಿತೆಂದರೆ ಕಗ್ಗತ್ತಲು ಬೀದಿ ದೀಪಗಳು ಇಲ್ಲ. ಸಂಚಾರ ದಟ್ಟಣೆ ನೋಡಿದರೆ ರಸ್ತೆಯ ಅಗಲ ಇಮ್ಮಡಿ ಇರಬೇಕಿತ್ತು.

ದುರಂತವೆಂದರೆ ಈ ರಸ್ತೆಯಲ್ಲಿನ ಗಣಪತಿ ದೇವಸ್ಥಾನದ ಸಮೀಪ ಸುಮಾರು 300 ಮೀ. ಉದ್ದ ರಸ್ತೆಯು ಜಮೀನಿನ ಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕಿನಿಂದ ಮಣ್ಣು ರಸ್ತೆಯಾಗೇ ಉಳಿದಿದೆ. ಗುಂಡಿಗಳೇ ಇರುವ ಇಲ್ಲಿ ಸಂಚರಿಸಿದರೆ ಹೆರಿಗೆ ಭಾಗ್ಯ ಉಚಿತ ಮತ್ತು ಸೊಂಟ ಮುರಿತ ಖಚಿತ. ಪ್ರಸೂತಿ ವೈದ್ಯರಿಗೆ ನಷ್ಟ, ಮೂಳೆ ವೈದ್ಯರಿಗೆ ಲಾಭ!. ಸಮಸ್ಯೆಯನ್ನು ಬಗೆಹರಿಸಿ ಕೇವಲ 300 ಮೀ. ರಸ್ತೆಯನ್ನು ಮಾಡಿಸಲು 15 ವರ್ಷಗಳಾದರೂ ಆಗಲಿಲ್ಲವೆಂದರೆ ನಮ್ಮ ಜನಪ್ರತಿನಿಧಿಗಳಿಗೆ ಕೈಎತ್ತಿ ಮುಗಿಯಬೇಕು. ಬಹುಶಃ ಈ ಭಾಗದ ಜನರು ಹೋರಾಟ ಮತ್ತು ಚಳುವಳಿಗಳನ್ನು ತಿಳಿಯದ ಮುಗ್ಧರಿರಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪರಿಸರ ನಾಶಕ್ಕೆ ಮನುಷ್ಯ ದೊಡ್ಡ ಬೆಲೆ ತೆರಬೇಕಾಗುತ್ತದೆ

ವಿಶ್ವ ಪರಿಸರ ದಿನಾಚರಣೆಯಲ್ಲಿ ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಎಚ್ಚರಿಕೆ

- ಒಂದು ಮರ ಕಡಿದರೆ 10 ಗಿಡ ನೆಟ್ಟು ಪೋಷಿಸಿ
- ಸಚಿವನಾಗಿದ್ದಾಗ ನಾನು ನೆಡಿಸಿದಂತಹ ಗಿಡಗಳು ಈಗ ಮರಗಳಾಗಿವೆ
- ಶಿಕ್ಷಣ, ಸಂಘಟನೆ, ಹೋರಾಟ ಮುಖ್ಯ; ಸತ್ಯವಂತರಿಗೆ ಕಾಲವಿಲ್ಲ!



ದಕ್ಷ ಪಿಯು ಕಾಲೇಜಿನಲ್ಲಿ ಮಂಗಳವಾರ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜೂ.17(ಬಿಎಲ್‌ಯು)– ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಗಿಡ–ಮರ ಬೆಳೆಸಬೇಕು. ಇದನ್ನು ಗಂಭೀರವಾಗಿ ಪರಿಗಣಿಸದೆ, ಪರಿಸರ ನಾಶ ಮಾಡಿದರೆ ಮನುಷ್ಯ ದೊಡ್ಡ ಬೆಲೆ ತೆರಬೇಕಾಗುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಎಚ್ಚರಿಸಿದರು.

ಮೈಸೂರಿನ ಕೂರ್ಗಳ್ಳಿಯ ದಕ್ಷ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಉಳಿಸದಿದ್ದರೆ ಏನೆಲ್ಲಾ ಅನಾಹುತಗಳನ್ನು ಎದುರಿಸಬೇಕಾಗುತ್ತದೆ ಎಂದು ಸವಿಸ್ತಾರವಾಗಿ ವಿವರಿಸಿದರು.

ವಿದ್ಯಾರ್ಥಿಗಳು ಪರಿಸರದ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು. ಗಿಡ–ಮರಗಳನ್ನು ಬೆಳೆಸಿ ಪರಿಸರ ಸಂರಕ್ಷಣೆ ಮಾಡಬೇಕು. ಒಂದು ಮರ ಕಡಿದರೆ ಹತ್ತು ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸಿ ದೊಡ್ಡ ಮರಗಳಾಗಿ ಬೆಳೆಸಬೇಕು. ಈ ಮೂಲಕ ಪರಿಸರ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ಇತರರಿಗೂ ತಿಳಿಸಿ ಹೇಳಬೇಕು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ನಾನು ಸಹಕಾರ ಸಚಿವನಾಗಿದ್ದಾಗ ವಿಧಾನಸಭಾಧ್ಯಕ್ಷ ಕೆ.ಆರ್.ಪೇಟೆ ಕೃಷ್ಣ ಹಾಗೂ ವಿಧಾನಪರಿಷತ್ ಸಭಾಪತಿ ಪ್ರೊ.ಬಿ.ಕೆ.ಚಂದ್ರಶೇಖರ್ ಅವರೊಡನೆ ಸಮಾಲೋಚಿಸಿ ಮೈಸೂರಿನಲ್ಲಿ ಲಕ್ಷ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಿದೆ. ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ ಅವರನ್ನು ಮೈಸೂರಿಗೆ ಕರೆಸಿ ಶಾಲೆ, ಆಸ್ಪತ್ರೆ, ರಸ್ತೆ, ಪಾರ್ಕ್ ಸೇರಿದಂತೆ ಇತರೆಡೆ ಒಂದೇ ದಿನ ಲಕ್ಷ ಗಿಡ ನೆಡುವುದನ್ನು ಸಾಕಾರಗೊಳಿಸಿದೆ. ಅಂದು ನೆಟ್ಟ ಗಿಡಗಳು ಇಂದು ಮರಗಳಾಗಿವೆ. ದಾರಿಹೋಕರಿಗೆ ನೆರಳಾಗಿ ವಾತಾವರಣವನ್ನು ತಂಪಾಗಿಸುತ್ತಿವೆ ಎಂದರು.

ಮೈಸೂರು ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದಾಗ ಮೈಸೂರಿನಿಂದ ಕುಶಾಲನಗರ, ಕೆ.ಆರ್.ನಗರದಿಂದ ಹುಣಸೂರು, ಹುಣಸೂರಿನಿಂದ ಹನಗೋಡು ತನಕ ಗಿಡಗಳನ್ನು ನೆಡಿಸಿದೆ. ಇವು ಕೂಡ ಇಂದು ಮರಗಳಾಗಿ ಜನರಿಗೆ ನೆರಳಾಗಿವೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಶಿಕ್ಷಣ ಪ್ರತಿಯೊಬ್ಬರಿಗೂ ಬೇಕಿದೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟ ಮುಖ್ಯವಾಗಿದ್ದು, ಯಾವುದೇ ಸಮಸ್ಯೆ ಇದ್ದರೂ ಶಿಕ್ಷಣ ಕಲಿತರೆ ಅದನ್ನು ಸುಲಭವಾಗಿ ಪರಿಹಾರ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ನಾನು ಪದವಿ ಪಡೆದಿಲ್ಲ; ಆದರೂ ಉನ್ನತ ಶಿಕ್ಷಣ ಸಚಿವನಾಗಿದ್ದೆ: ನಾನು ಪದವಿ ಪಡೆದಿಲ್ಲ, ಆದರೂ ನನಗೆ ಉನ್ನತ ಶಿಕ್ಷಣ ಖಾತೆ ನೀಡಿದರು. ಗ್ರಾಮೀಣಾಭಿವೃದ್ಧಿ, ಸಹಕಾರ ಸೇರಿದಂತೆ ಬೇರೆ ಖಾತೆ ನೀಡುವಂತೆ ಕೇಳಿದೆ. ಇದಕ್ಕಾಗಿ 20 ದಿನ ಕಾದೆ. ಆದರೆ ನನ್ನ ಖಾತೆ ಬದಲಾಗದ ಕಾರಣ ಉನ್ನತ ಶಿಕ್ಷಣ ಖಾತೆಯಲ್ಲೆ ಆಮೂಲಾಗ್ರ ಬದಲಾವಣೆ ತಂದು ಶಿಕ್ಷಣದ ಬೆಳವಣಿಗೆಗೆ ಮುಂದಾದೆ ಎಂದರು.

ಸಚಿವನಾದ ಮೊದಲಿಗೆ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಭೆ ಕರೆದು ಚರ್ಚೆ ಮಾಡಿ ಹಲವು ಮಾಹಿತಿ ಪಡೆದೆ. ಒಳ್ಳೆಯ ಕಟ್ಟಡಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಲು ಗಮನ ಹರಿಸುವಂತೆ ಸಲಹೆ ನೀಡಿದೆ ಎಂದರು.

ಶಾಲೆಗಳ ದತ್ತುಗೆ ಪ್ರೇರಣೆ: ಶಾಲೆಗಳನ್ನು ದತ್ತು ಪಡೆದು ಶಿಕ್ಷಣ ನೀಡಿದರೆ ಮಾದರಿ ಗ್ರಾಮ ಮಾಡಬಹುದು ಎಂದು ಶಿಕ್ಷಣ ಕ್ಷೇತ್ರದ ಪ್ರಮುಖರಿಗೆ ಮನವರಿಕೆ ಮಾಡಿದೆ. ಇದರಿಂದ ಪ್ರತಿಯೊಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಐದು ಗ್ರಾಮಗಳನ್ನು ದತ್ತು ಪಡೆದರು ಎಂದರು.

ಶಿಕ್ಷಕರು, ಮುಖ್ಯ ಶಿಕ್ಷಕರು ಎಂಬ ತಾರತಮ್ಯ ತೋರದೆ ಸಮಾನವಾಗಿ ನೋಡಬೇಕು. ಸಂಬಳಕ್ಕಾಗಿ ದುಡಿಯುತ್ತಿದ್ದೇನೆ ಎಂಬ ಭಾವನೆ ಬಿಟ್ಟು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕು. ಈ ಮೂಲಕ ಮಕ್ಕಳಲ್ಲಿ ಉತ್ತಮ ನಾಯಕತ್ವ ರೂಪಿಸಬೇಕು ಎಂದು ಸಲಹೆ ನೀಡಿದರು.

ಸತ್ಯದ ಹಾದಿಯಲ್ಲಿ ನಡೆಯುತ್ತಿರುವವರ ಸಂಖ್ಯೆ ಕಡಿಮೆ ಇದ್ದು, ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಿಗೆ ಬೆಲೆಯೇ ಇಲ್ಲದಂತಾಗಿದೆ. ಸತ್ಯ ಹೇಳುತ್ತೇನೆ ಎಂದರೂ ಅವರ ಬಾಯಿ ಮುಚ್ಚಿಸಲಾಗುತ್ತಿದೆ. ಸತ್ಯವಾಗಿ ನಡೆಯುವವರಿಗೆ ಆರ್‌ಟಿಐ ಮೂಲಕ ತೊಂದರೆ ಕೊಡಲಾಗುತ್ತಿದೆ. ಇದರಿಂದ ಸತ್ಯ ಮರೆಯಾಗಿ, ಸುಳ್ಳು ಮಹತ್ವ ಪಡೆಯುತ್ತಿದೆ ಎಂದರು.

ಸರಳತೆಯ ಸೌಂದರ್ಯಕ್ಕಿಂತ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಕಿಕೊಂಡವರಿಗೆ ಬೆಲೆ ನೀಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಕ್ಷ ಕಾಲೇಜಿನ ಆಡಳಿತ ಮಂಡಳಿಯ ಜಯಚಂದ್ರರಾಜೇ ಅರಸ್, ಗೌತಮ್ ರಾಜೇ ಅರಸ್, ನಿರ್ದೇಶಕ ಪಿ.ಹರೀಶ್, ಪ್ರಾಂಶುಪಾಲ ಡಾ.ಮಹೇಶ್, ಉಪ ಪ್ರಾಂಶುಪಾಲ ಎಂ.ಡಿ.ಬಷೀರ್ ವೇದಿಕೆಯಲ್ಲಿದ್ದರು.

ಐಷರಾಮಿ ಮದುವೆಗೆ ಪೈಪೋಟಿ; ಸಂಸ್ಕಾರ ನಾಶ

ಆರ್ಥಿಕ ಸಂಕಷ್ಟ ಇದ್ದರೂ ಇತ್ತೀಚಿಗೆ ಐಷರಾಮಿಯಾಗಿ ಮದುವೆ ಮಾಡುವುದಕ್ಕೆ ಜನ ಪೈಪೋಟಿ ನಡೆಸುತ್ತಿದ್ದಾರೆ ಎಂದು ಜಿ.ಟಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು. ತಿರುಪತಿಯಲ್ಲಿ ನನ್ನ ಮಕ್ಕಳ ಮದುವೆಯನ್ನು ಸರಳವಾಗಿ ಮಾಡಿದೆ. ಇತ್ತೀಚಿಗೆ ನನ್ನ ಸಹೋದರನ ಮಗನ ಮದುವೆಯನ್ನು ಧರ್ಮಸ್ಥಳದಲ್ಲಿ ಸರಳವಾಗಿ ಮಾಡಿದೆ. ಆದರೆ ಕೆಲವರು ಆಸ್ತಿ ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ವೈಭವದಿಂದ ಮದುವೆ ಮಾಡುತ್ತಿದ್ದಾರೆ. ಈ ಮೂಲಕ ವೈಭವದ ಮದುವೆಗೆ ಪೈಪೋಟಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಕೆಲವರಿಗೆ 20ರಿಂದ 100 ಎಕರೆ ತನಕ ಜಮೀನು ಇತ್ತು. ಆದರೆ ಜಮೀನು ಮಾರಾಟ ಮಾಡಿ ದುಂದುವೆಚ್ಚ ಮಾಡಿದ ಕಾರಣ ಇಂದು ಆಸ್ತಿ ಇಲ್ಲದೆ ಬರಿಗೈನಲ್ಲಿ ಕುಳಿತಿದ್ದಾರೆ. ಇತ್ತೀಚಿಗೆ ತಂದೆ ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಕೂಡ ಕಡಿಮೆಯಾಗಿದೆ. ಇದರಿಂದ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದರು.

ಹಿಂದೆ ನಮಗೆ ತಂದೆ ತಾಯಿಯೇ ಮುಖ್ಯವಾಗಿದ್ದರು. ಮನೆಯಿಂದ ಹೊರ ಹೋಗುವಾಗ–ವಾಪಸ್ ಬಂದಾಗ ಅವರ ಪಾದ ಮುಟ್ಟಿ ನಮಸ್ಕರಿಸುವುದು ರೂಢಿಯಾಗಿತ್ತು. ನಾನು 16 ವರ್ಷದವನಿರುವಾಗ ಭೀಕರ ಬರಗಾಲ ಬಂದಿತು. ಕೆ.ಆರ್.ನಗರಕ್ಕೆ ಹಸುಗಳಿಗೆ ಹುಲ್ಲು ತರಲು ಹೊರಟೆ, ಆಗ ಅಪ್ಪನ ಕಾಲಿಗೆ ನಮಸ್ಕರಿಸಿ ಹೋಗಿದ್ದೆ, ವಾಪಸ್ಸು ಬಂದಾಗಲೂ ಮತ್ತೆ ತಂದೆ ಕಾಲಿಗೆ ನಮಸ್ಕರಿಸಿದೆ ಎಂದು ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಜಿ.ಟಿ.ದೇವೇಗೌಡರು, ಹಿಂದೆ ಇದ್ದ ಸಂಸ್ಕಾರ ಈಗ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಣ್ಣಿನ ರಾಜ ಮಾವಿಗೆ ಪೈಪೋಟಿ ನೀಡುತ್ತಿದ್ದ ನೇರಳೆಹಣ್ಣಿನ ಬೆಲೆ ಇಳಿಕೆ



ಮೈಸೂರಿನ ಆರ್‌ಎಂಸಿ ವೃತ್ತದ ರಸ್ತೆ ಬದಿಯಲ್ಲಿ ನೇರಳೆಹಣ್ಣು ಮಾರಾಟ ಮಾಡುತ್ತಿರುವುದು.

ಮೈಸೂರು, ಜೂ.17(ಬಿಎಲ್‌ಯು)– ಹಣ್ಣಿನ ರಾಜ ಮಾವಿನೊಂದಿಗೆ ಪೈಪೋಟಿಗಿಳಿದಿದ್ದ ನೇರಳೆಹಣ್ಣಿನ ಬೆಲೆ ದಿಢೀರ್ ಕುಸಿತ ಕಂಡಿದೆ.

ನೇರಳೆಹಣ್ಣನ್ನು ಹೆಚ್ಚಾಗಿ ಚಿಂತಾಮಣಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಸೇರಿದಂತೆ ಇತರೆಡೆ ಹೆಚ್ಚಾಗಿ ಬೆಳೆಯಲಾಗುತ್ತದೆ. ಮೈಸೂರಿನ ಸಗಟು ಮಾರಾಟಗಾರರು ಅಲ್ಲಿಂದ ನೇರಳೆಹಣ್ಣು ಖರೀದಿಸಿ ಪ್ರತಿದಿನ ಬೆಳಗ್ಗೆ ಇಲ್ಲಿ ಹೋಲ್‌ಸೇಲ್‌ನಲ್ಲಿ ಮಾರಾಟ ಮಾಡುತ್ತಾರೆ.

ಮೈಸೂರಿನ ಆರ್‌ಎಂಸಿ ವೃತ್ತದ ರಸ್ತೆ ಬದಿಯಲ್ಲಿ ಇಂದು ನೇರಳೆಹಣ್ಣು ಮಾರಾಟ ಬೆಲೆ ಹೋಲ್‌ಸೇಲ್‌ನಲ್ಲಿ ಕೆ.ಜಿ.ಗೆ 130ರಿಂದ 150 ರೂಪಾಯಿ ತನಕ ನಿನ್ನೆ ಇತ್ತು. ಇದನ್ನು ಖರೀದಿ ಮಾಡುವ ಚಿಲ್ಲರೆ ಮಾರಾಟಗಾರರು ಕೆ.ಜಿ.ಗೆ 220 ರಿಂದ 260 ರೂಪಾಯಿವರೆಗೆ ಮಾರಾಟ ಮಾಡುತ್ತಿದ್ದರು. ಸಾಮಾನ್ಯವಾಗಿ ಗ್ರಾಹಕರು ನೇರಳೆಹಣ್ಣನ್ನು ಅರ್ಧ ಇಲ್ಲವೇ ಕೆಜಿಗಟ್ಟಲೆ ಖರೀದಿ ಮಾಡುವುದು ಕಡಿಮೆ. ಹಾಗಾಗಿ ಚಿಲ್ಲರೆ ಮಾರಾಟಗಾರರು ಕಾಲು ಕೆ.ಜಿ.ಗೆ 55 ರಿಂದ 65 ರವರೆಗೆ ಮಾರಾಟ ಮಾಡುತ್ತಿದ್ದರು.

ಆದರೆ ಇಂದು ಬೆಲೆ ದಿಢೀರ್ ಕುಸಿದಿದೆ. ಸಗಟು ಮಾರಾಟಗಾರರೇ ಕೆ.ಜಿ.ಗೆ 80 ರೂ.ಗೆ ಮಾರಾಟ ಮಾಡಲಾರಂಭಿಸಿದ್ದಾರೆ. ಇನ್ನು ಚಿಲ್ಲರೆ ಮಾರಾಟಗಾರರು ಕೂಡ ಕೆ.ಜಿ.ಗೆ 160ರಿಂದ 200 ರೂ.ಗೆ ಮಾರಾಟ ಮಾಡುತ್ತಿದ್ದಾರೆ. ಮಾವಿನ ಹಣ್ಣು ಮಾರುಕಟ್ಟೆಗೆ ಹೆಚ್ಚಾಗಿ ಬಂದಿರುವ ಹಿನ್ನೆಲೆಯಲ್ಲಿ ಕಳೆದ ಎರಡು ದಿನದಿಂದ ಬೆಲೆ ಕಡಿಮೆಯಾಗಿದೆ. ಹಾಗಾಗಿ ಮಾವಿನ ಹಣ್ಣನ್ನು ಹೆಚ್ಚಾಗಿ ಖರೀದಿ ಮಾಡುತ್ತಿರುವ ಗ್ರಾಹಕರು, ನೇರಳೆ ಖರೀದಿಗೆ ಆಸಕ್ತಿ ತೋರಿಲ್ಲ. ಮೈಸೂರಿನಲ್ಲಿ ನೇರಳೆ ಹಣ್ಣಿಗೆ ಹೆಚ್ಚು ಬೇಡಿಕೆ ಇದ್ದು, ದಿನಕ್ಕೆ ಸುಮಾರು 2.5 ಟನ್ ಹಣ್ಣು ಮಾರಾಟವಾಗುತ್ತಿದೆ. ಸ್ಥಳಿಯವಾಗಿ ನೇರಳೆ ಬೆಳೆಯುವುದು ಕಡಿಮೆ. ಹಾಗಾಗಿ ಚಿಂತಾಮಣಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದಿಂದಲೇ ಇಲ್ಲಿಗೆ ತರಿಸಲಾಗುತ್ತಿದೆ.

ಗಾಜಾ ಮೇಲೆ ಇಸ್ರೇಲ್ ದಾಳಿ ಖಂಡಿಸಿ ಎಡಪಕ್ಷಗಳ ಪ್ರತಿಭಟನೆ



ಇಸ್ರೇಲ್‌ನಿಂದ ಮಾನವ ಹತ್ಯಾಕಾಂಡ ಖಂಡಿಸಿ, ಪ್ಯಾಲೆಸ್ತೀನಿಯರ ಬೆಂಬಲಿಸಿ ಸಿಪಿಐ, ಎಸ್‌ಯುಸಿಐ ಸೇರಿದಂತೆ ಎಡಪಕ್ಷಗಳು ಮೈಸೂರಿನ ಟೌನ್‌ಹಾಲ್ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿದವು.

ಮೈಸೂರು, ಜೂ.17(ಜಿಎ)– ಇಸ್ರೇಲ್‌ನಿಂದ ಮಾನವ ಹತ್ಯಾಕಾಂಡ ಖಂಡಿಸಿ, ಪ್ಯಾಲೆಸ್ತೀನಿಯರ ಬೆಂಬಲಿಸಿ ಸಿಪಿಐ, ಎಸ್‌ಯುಸಿಐ ಸೇರಿದಂತೆ ಎಡಪಕ್ಷಗಳು ಮೈಸೂರಿನ ಟೌನ್‌ಹಾಲ್ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿದವು.

ಎರಡು ವರ್ಷಗಳಿಂದ ಸತತವಾಗಿ ಇಸ್ರೇಲ್ ನಡೆಸುತ್ತಿರುವ ಬಾಂಬ್ ದಾಳಿ, ಮಿಲಿಟರಿ ಆಕ್ರಮಣದಿಂದ 55 ಸಾವಿರಕ್ಕೂ ಹೆಚ್ಚಿನ ಪ್ಯಾಲೆಸ್ತೀನಿಯರು ಕೊಲ್ಲಲ್ಪಟ್ಟಿದ್ದಾರೆ. ಲಕ್ಷಾಂತರ ಜನರು ಗಾಯಾಳುಗಳಾಗಿದ್ದಾರೆ. ಅಗತ್ಯ ಮೂಲ ಸಂರಚನೆ, ಆಸ್ಪತ್ರೆಗಳು, ಶಾಲೆಗಳು ಮತ್ತು ನಿರಾಶ್ರಿತ ವಸತಿ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ. ಇದರಿಂದಾಗಿ ಪ್ಯಾಲೆಸ್ತೀನಿಯರು ಹಿಂದೆಂದೂ ಕಂಡರಿಯದ ಮಾನವ ದುರಂತವನ್ನು ಅನುಭವಿಸುವಂತಾಗಿದೆ ಎಂದು ಕಿಡಿಕಾರಿದರು.

ಮೊದಲ ಹಂತದ ಕದನ ವಿರಾಮ ಪೂರ್ಣಗೊಂಡ ಕೂಡಲೇ ಇಸ್ರೇಲ್ ಗಾಜಾ ಮೇಲಿನ ದಾಳಿಯನ್ನು ಪುನರಾರಂಭಿಸಿದೆ. ಅಂದಿನಿಂದ, ಗಾಜಾಗೆ ಆಹಾರ, ನೀರು, ಇಂಧನ, ನೆರವು ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಪೂರೈಕೆ ಕಡಿತಗೊಳಿಸಿದೆ. ಗಾಜಾದಲ್ಲಿ ಜನ ಹಸಿವಿನಿಂದ ಸಾಯುವಂತೆ ಮಾಡಲು ಇಸ್ರೇಲ್ ಉದ್ದೇಶಿಸಿದೆ. ಇಸ್ರೇಲ್ ದಾಳಿಯಲ್ಲಿ ಮೃತಪಟ್ಟವರಲ್ಲಿ ಶೇ.60ರಷ್ಟು ಮಹಿಳೆಯರು ಮತ್ತು ಮಕ್ಕಳು. ಪತ್ರಕರ್ತರು ಮತ್ತು ವಿಶ್ವಸಂಸ್ಥೆಯ ಸಹಾಯ ಕಾರ್ಯಕರ್ತರನ್ನು ಸಹ ಗುರಿಯಾಗಿಸಿ ಕೊಲ್ಲಲಾಗುತ್ತಿದೆ. ಬೆಳೆಗಳು ನಾಶವಾಗುತ್ತಿವೆ. ಈ ಎಲ್ಲಾ ದಾಳಿಗಳು ಇಸ್ರೇಲಿ ಪ್ರಭುತ್ವದ ನರಮೇಧದ ಗುಣವನ್ನು ತೆರೆದಿಟ್ಟಿದೆ. ಇದನ್ನೆಲ್ಲಾ ಗಮನಿಸಿ ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ), ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತಾನ್ಯಾಹು ಮತ್ತು ಇತರ ಇಸ್ರೇಲಿ ನಾಯಕರ ವಿರುದ್ಧ ಬಂಧನದ ವಾರೆಂಟ್ ಹೊರಡಿಸಿದೆ. ಆದರೂ ನರಮೇಧ ನಿಲ್ಲಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಾಜಾ ಮೇಲಿನ ಆಕ್ರಮಣ ಮತ್ತು ದಾಳಿಯನ್ನು ಇಸ್ರೇಲ್ ನಿಲ್ಲಿಸಬೇಕು. ಜನಾಂಗೀಯ ದ್ವೇಷ, ಯುದ್ಧ ಅಪರಾಧಗಳನ್ನು ಖಂಡಿಸಿ, ಇಸ್ರೇಲ್‌ನ್ನು ಜನಾಂಗೀಯ ದ್ವೇಷದ ಪ್ರಭುತ್ವವೆಂದು ಘೋಷಿಸಿ ಕ್ರಮ ಕೈಗೊಳ್ಳಬೇಕು. ತಮ್ಮ ರಾಷ್ಟ್ರ, ಗೌರವ ಮತ್ತು ಸ್ವಾತಂತ್ರ್ಯಕ್ಕಾಗಿ ಪ್ಯಾಲೆಸ್ತೇನ್ ಜನತೆ ನಡೆಸುತ್ತಿರುವ ನ್ಯಾಯಯುತ ಹೋರಾಟ ಬೆಂಬಲಿಸಬೇಕು. ಭಾರತ ದೇಶದ ಜನರ ಸಾಮ್ರಾಜ್ಯಶಾಹಿ–ವಿರೋಧಿ ಆಶೋತ್ತರಗಳಿಗೆ ಅನುಗುಣವಾಗಿ ಪ್ಯಾಲೆಸ್ತೀನಿಯರ ಆಶಯಗಳನ್ನು ಬೆಂಬಲಿಸುತ್ತ ಬಂದಿರುವ ನೆಲೆಯಲ್ಲೇ ಭಾರತ ಸರ್ಕಾರ ನೀತಿಬದ್ಧ ನಿಲುವನ್ನು ತೆಗೆದುಕೊಳ್ಳಬೇಕು. ಇಸ್ರೇಲಿನೊಂದಿಗೆ ಮಿಲಿಟರಿ, ಭದ್ರತಾ ಸಹಕಾರವನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ, ಜವರಯ್ಯ, ರತಿರಾವ್, ರವಿ, ವಿಜಯ್‌ಕುಮಾರ್, ಜಯರಾಂ, ಜಗನ್ನಾಥ್, ಭೂಮಿಗೌಡ, ದೇವದಾಸ್, ಸೋಮರಾಜೇ ಅರಸ್, ಉಮಾದೇವಿ, ಸಂಧ್ಯಾ, ಇನ್ಸಾಫ್ ಸಂಘಟನೆಯ ನೂರ್‌ಮರ್ಚೆಂಟ್, ಪಾಷಾ, ಬಾಲಾಜಿ, ರಾಘವೇಂದ್ರ, ಸುಬ್ರಹ್ಮಣ್ಯ, ನಾಗರಾಜ್, ಖಲೀಂ, ಚಂದ್ರಶೇಖರ್ ಮೇಟಿ ಹಲವರು ಪಾಲ್ಗೊಂಡಿದ್ದರು.

ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜೂ.17–ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದವರಿಗೆ ಮತ್ತು ವಿಕಲಚೇತನರಿಗೆ 2025–26ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಹಾಗೂ ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಶೇ.24.10, ಶೇ 7.25, ಮತ್ತು ಶೇ 5ರ ಯೋಜನೆಯ ಅನುದಾನದಲ್ಲಿ ವಿವಿಧ ಸೌಲಭ್ಯಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶೇ.24.10ರ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್, ಇತರೆ ವಸತಿ ಯೋಜನೆ ಹಾಗೂ ಸ್ವಂತ ಮನೆ ನಿರ್ಮಿಸುವ ಫಲಾನುಭವಿಗಳಿಗೆ ಮನೆ ನಿರ್ಮಿಲು ಸಹಾಯಧನ ನೀಡಲಾಗುವುದು. ಶೇ.24.10 ಯೋಜನೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ ಯುವತಿಯರಿಗೆ ಗಣಕಯಂತ್ರ ತರಬೇತಿ ನೀಡಲಾಗುವುದು. ಶೇ.24.10 ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ಉನ್ನತ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಸಹಾಯಧನ ನೀಡಲಾಗುವುದು. ಶೇ.24.10, ಶೇ.7.25 ಮತ್ತು ಶೇ.5ರ ಯೋಜನೆಯಲ್ಲಿ ಶೇ.24.10 ಯೋಜನೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದವರು, ವಿಕಲಚೇತನರಿಗೆ, 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪದವಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವವರಿಗೆ ಪ್ರೋತ್ಸಾಹಧನ ಹಾಗೂ ತಾಂತ್ರಿಕ/ ವೈದ್ಯಕೀಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ಸಹಾಯಧನ ನೀಡಲಾಗುತ್ತದೆ. ಅರ್ಹ ಫಲಾನುಭವಿಗಳು ಕಚೇರಿಯಿಂದ ಅರ್ಜಿ ನಮೂನೆ ಪಡೆದು ಸಂಬಂಧಿಸಿದ ದೃಢೀಕೃತ ದಾಖಲೆಗಳೊಡನೆ ಅರ್ಜಿ ಸಲ್ಲಿಸಲು ಜೂ.30ರ ಸಂಜೆ 4 ಗಂಟೆಯೊಳಗೆ ಸಲ್ಲಿಸುವುದು.

ಹೆಬ್ಬಾಳು ಕೈಗಾರಿಕಾ ಪ್ರದೇಶದ ರಸ್ತೆಗಳೆಲ್ಲಾ ಗುಂಡಿಮಯ

ಇಲ್ಲಿ ಸಂಚರಿಸುವ ಕೈಗಾರಿಕೋದ್ಯಮಿಗಳು, ಕಾರ್ಮಿಕರು, ಸಾರ್ವಜನಿಕರಿಗೆ ನಿತ್ಯ ನರಕದರ್ಶನ




ಮೈಸೂರು,ಜೂ.17(ಆರ್‌ಕೆ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಸ್ತೆಗಳೆಲ್ಲಾ ಗುಂಡಿಬಿದ್ದು, ಇಲ್ಲಿ ಸಂಚರಿಸುವಾಗ ಕೈಗಾರಿಕೋದ್ಯಮಿಗಳು, ಕಾರ್ಮಿಕರು, ಸಾರ್ವಜನಿಕರಿಗೆ ನರಕ ದರ್ಶನವಾಗುತ್ತಿದೆ.

ಕಸದ ರಾಶಿ ಹಾಗೂ ಕಟ್ಟಡ ತ್ಯಾಜ್ಯಗಳಿಂದ ಪರಿತಪಿಸುತ್ತಿದ್ದ ಕೈಗಾರಿಕೋದ್ಯಮಿಗಳು ಅದರ ತೆರವಿನ ನಂತರ ಇದೀಗ ಗುಂಡಿ ಬಿದ್ದಿರುವ ರಸ್ತೆಗಳಿಂದಾಗಿ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಹೆಬ್ಬಾಳು ಕೈಗಾರಿಕಾ ಪ್ರದೇಶದ ಬಹುತೇಕ ರಸ್ತೆಗಳು ಹಲವು ವರ್ಷಗಳಿಂದ ಡಾಂಬರೀಕರಣ ಭಾಗ್ಯ ಕಾಣದೇ ಅಲ್ಲಿ ದೊಡ್ಡದಾದ ಗುಂಡಿಗಳಾಗಿದ್ದು, ಜನರಿಗೆ ಅಪಾಯ ತಂದೊಡ್ಡುತ್ತಿವೆ.

ಹೆಬ್ಬಾಳು ರಿಂಗ್ ರಸ್ತೆಯಿಂದ ಕೆಆರ್‌ಎಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಆಟೋಮೋಟಿವ್ ಆಕ್ಸೆಲ್‌ವರೆಗಿನ ರಸ್ತೆ ಶೋಚನೀಯವಾಗಿದ್ದು, ಪ್ರತೀ ದಿನ ವಾಹನಗಳಲ್ಲಿ ಸಂಚರಿಸುವವರಿಗೆ ನರಕಯಾತನೆಯಾಗಿದೆ. ಈ ರಸ್ತೆಯಲ್ಲಿ ಜೀವ ಕೈಯಲ್ಲಿ ಹಿಡಿದು ವಾಹನ ಚಾಲನೆ ಮಾಡಬೇಕಾಗಿದೆ.

ಅನೇಕ ವರ್ಷಗಳಿಂದ ರಸ್ತೆಗಳಿಗೆ ಡಾಂಬರೀಕರಣ ಪ್ರಯತ್ನಗಳೇ ನಡೆದಿಲ್ಲ ಎಂದು ಈ ಪ್ರದೇಶದ ಕೈಗಾರಿಕೋದ್ಯಮಿಯೊಬ್ಬರು ದೂರಿದ್ದಾರೆ. ಹೂಟಗಳ್ಳಿ ನಗರಸಭೆ ಮತ್ತು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ(ಕೆಐಎಡಿಬಿ) ಪರಸ್ಪರ ದೂಷಿಸುವ ಮೂಲಕ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿವೆ. ರಾತ್ರಿ ಪಾಳಿ ಕಾರ್ಮಿಕರು ಕೆಲವೆಡೆ ಬೀದಿ ಲೈಟ್‌ಗಳಿಲ್ಲದೆ ಗುಂಡಿಗಳು ಸರಿಯಾಗಿ ಕಾಣದೇ ಅಪಘಾತಕ್ಕೀಡಾಗಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮಳೆ ಸುರಿದಾಗ ಈ ರಸ್ತೆಗಳು ಸಂಪೂರ್ಣ ಹೊಂಡಮಯ. ಓಡಾಡಲು ಸಾಧ್ಯವೇ ಆಗುವುದಿಲ್ಲ. ಈ ಒಂದು ಗಂಭೀರ ಸಮಸ್ಯೆ ಕೈಗಾರಿಕೆಗಳ ಉತ್ಪಾದನೆ ಮೇಲೂ ಪರಿಣಾಮ ಬೀರುತ್ತಿದೆ ಎಂದು ಮತ್ತೋರ್ವ ಉದ್ಯಮಿ ತಮ್ಮ ಅಳಲು ತೋಡಿಕೊಂಡಿದ್ದಾರೆ. ಇದು ರಿಂಗ್ ರಸ್ತೆಯಿಂದ ಹೆಬ್ಬಾಳು ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದೆ. ಹೆಚ್ಚಿನ ತೆರಿಗೆ ಪಾವತಿಸುವ ಕೈಗಾರಿಕೋದ್ಯಮಿಗಳಿಗೆ ಅಧಿಕಾರಿಗಳು ಉತ್ತಮ ಮೂಲ ಸೌಲಭ್ಯಗಳನ್ನು ಒದಗಿಸಬೇಕಿದೆ. ಈ ಹಿಂದೆ ಹೂಟಗಳ್ಳಿ ನಗರಸಭೆ ನಿಯಂತ್ರಣದಲ್ಲಿದ್ದ ಹೆಬ್ಬಾಳು ಕೈಗಾರಿಕಾ ಪ್ರದೇಶವನ್ನು ಇತ್ತೀಚೆಗಷ್ಟೇ ಕೆಐಎಡಿಬಿಗೆ ಹಸ್ತಾಂತರಿಸಲಾಗಿದೆ. ಆದರೆ ಪರಿಸ್ಥಿತಿಯೇನು ಸುಧಾರಿಸಿಲ್ಲ. ಹೂಟಗಳ್ಳಿ ನಗರಸಭೆಯು ಕಳೆದ 3 ವರ್ಷಗಳಿಂದ ಕೈಗಾರಿಕೆಗಳ ಮಾಲೀಕರಿಂದ ತೆರಿಗೆ ಸಂಗ್ರಹಿಸುತ್ತಿದೆಯಾದರೂ, ಸ್ವಚ್ಛತೆ, ರಸ್ತೆ, ಬೀದಿದೀಪ ಸೇರಿದಂತೆ ಮೂಲ ಸೌಲಭ್ಯ ಒದಗಿಸುತ್ತಿಲ್ಲ. ಅದರ ಪರಿಣಾಮವೇ ರಸ್ತೆಗಳು ಗುಂಡಿಮಯವಾಗಲು ಕಾರಣ ಎಂದು ಅವರು ದೂರಿದ್ದಾರೆ. 'ಮೈಸೂರು ಮಿತ್ರ'ದಲ್ಲಿ ಈ ಕುರಿತು ಸುದ್ದಿ ಪ್ರಕಟಿಸಿದ ನಂತರ, ಕೆಐಎಡಿಬಿಯು ಇತ್ತೀಚೆಗೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿನ ರಸ್ತೆಗಳು ಮತ್ತು ಫುಟ್‌ಪಾತ್ ಮೇಲೆ ಸುರಿಯಲಾಗಿದ್ದ ತ್ಯಾಜ್ಯಗಳ ತೆರವುಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

60 ಕೋಟಿಯ ಕಾಮಗಾರಿ ಕೈಗೆತ್ತಿಕೊಂಡಿದ್ದೇವೆ


ಚಂದ್ರಶೇಖರ್

ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಗುಂಡಿ ಬಿದ್ದಿರುವ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಂಡಿದ್ದೇವೆ ಎಂದು ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್ ತಿಳಿಸಿದ್ದಾರೆ. 60 ಕೋಟಿ ರೂ. ವೆಚ್ಚದಲ್ಲಿ 24 ಪ್ಯಾಕೇಜ್‌ನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ. ರಿಂಗ್ ರೋಡ್‌ನಿಂದ ಆಟೋಮೋಟಿವ್ ಆಕ್ಸಲ್‌ವರೆಗೆ 2.3 ಕಿ.ಮೀ ರಸ್ತೆಗೆ 5 ಕೋಟಿ, ರಿಂಗ್ ರಸ್ತೆಯಿಂದ ಹೆಚ್‌ಪಿಸಿಎಲ್ ಗೋಡೌನ್‌ವರೆಗೆ 2 ಕಿ.ಮೀ ರಸ್ತೆಯನ್ನು 4 ಕೋಟಿ, ಭಾರತ್ ಕ್ಯಾನ್ಸರ್ ಆಸ್ಪತ್ರೆಯಿಂದ ಇನ್‌ಫೋಸಿಸ್ ನಡುವೆ 1.5 ಕಿ.ಮೀ ರಸ್ತೆಯನ್ನು 60 ಲಕ್ಷ ಅಂದಾಜು ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಶ್ರಮಿಕ ನಗರ ನಿವಾಸಿಗಳಿಗೆ ಶೀಘ್ರವೇ ಹಕ್ಕುಪತ್ರ

ಶಾಸಕ ರವಿ ಗಣಿಗ ಆಶ್ವಾಸನೆ



ಶಾಸಕ ರವಿ ಗಣಿಗ ಶ್ರಮಿಕನಗರ ನಿವಾಸಿಗಳ ಹಕ್ಕೊತ್ತಾಯ ಸಮಾವೇಶದಲ್ಲಿ ಮಾತನಾಡಿದರು.

ಮಂಡ್ಯ, ಜೂ.17– ಜಿಲ್ಲೆಯ ವಿವಿಧ ಶ್ರಮಿಕ ನಗರಗಳ ನಿವಾಸಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದಲೇ ಹಕ್ಕುಪತ್ರಗಳನ್ನು ವಿತರಿಸಲು ಸದ್ಯದಲ್ಲಿಯೇ ಕಾರ್ಯಕ್ರಮ ರೂಪಿಸಲಾಗುವುದು ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಜಿಲ್ಲಾ ಶ್ರಮಿಕರ ನಗರ ನಿವಾಸಿಗಳ ಒಕ್ಕೂಟ, ಕರ್ನಾಟಕ ಜನಶಕ್ತಿ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಹಾಗೂ ಮಹಿಳಾ ಮುನ್ನಡೆಯಿಂದ ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಶ್ರಮಿಕನಗರ ನಿವಾಸಿಗಳ ಹಕ್ಕೊತ್ತಾಯ ಸಮಾವೇಶದಲ್ಲಿ ಅವರು ಮಾತನಾಡಿ, ನ್ಯೂ ತಮಿಳು ಕಾಲೋನಿಯ 170 ನಿವಾಸಿಗಳ ಹಕ್ಕುಪತ್ರಗಳು ಸಿದ್ಧವಾಗಿದೆ, ಕಾಳಪ್ಪ (ಆರ್.ಟಿ.ಓ) ಬಡಾವಣೆ ನಿವಾಸಿಗಳ ಹಕ್ಕುಪತ್ರಗಳು ರೆಡಿ ಇವೆ. ಶುಗರ್ ಟೌನ್ ಬಳಿ ಇರುವ ಶ್ರಮಿಕ ನಗರದ ಸರ್ವೇ ಕಾರ್ಯ ನಡೆಯುತ್ತಿದೆ, ಈ ಎಲ್ಲಾ ನಿವಾಸಿಗಳಿಗೆ ತಿಂಗಳೊಳಗೆ ಮುಖ್ಯಮಂತ್ರಿಗಳಿಂದಲೇ ಹಕ್ಕುಪತ್ರ ವಿತರಣೆ ಮಾಡಿಸಲಾಗುವುದು ಎಂದರು.

ಮಂಡ್ಯದ ಗುರುಮತ ಶ್ರಮಿಕ ನಗರ ಕೆರೆ ಎಂದು ದಾಖಲಾಗಿದ್ದು, ಅದನ್ನು ಡಿಲೀಟ್ ಮಾಡಿಸಲು ಸರ್ಕಾರದೊಂದಿಗೆ ಜಿಲ್ಲಾಧಿಕಾರಿಗಳು ಪತ್ರ ವ್ಯವಹಾರ ನಡೆಸುತ್ತಿದ್ದಾರೆ. ಈ ಸಮಸ್ಯೆ ಎರಡು–ಮೂರು ತಿಂಗಳಿನಲ್ಲಿ ಬಗೆಹರಿಯುವ ವಿಶ್ವಾಸವಿದೆ. ಕಾಳಿಕಾಂಭ ಸ್ಲಂ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಲು ಪ್ರಯತ್ನ ನಡೆದಿದೆ, ಈ ಬಗ್ಗೆ ಮಾಜಿ ಸಚಿವ ಆತ್ಮಾನಂದ ಅವರೊಂದಿಗೆ ಮಾತುಕತೆ ನಡೆಸಲಾಗಿದೆ ಎಂದು ವಿವರಿಸಿದರು.

ಸಾಮಾಜಿಕ ಹೋರಾಟಗಾರ ಡಾ.ವಾಸು ಸಮಸ್ಯೆಗಳನ್ನು ಬಗೆಹರಿಸಿ, ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಬೇಕೆಂದು ಆಗ್ರಹಿಸಿ, ಚುನಾವಣೆ ಸಂದರ್ಭದಲ್ಲಿ ಮದ್ಯ, ಹಣ ಸೇರಿದಂತೆ ಇತರೆ ಆಮಿಷಗಳಿಗೆ ಬಲಿಯಾಗದೆ ಯೋಗ್ಯರನ್ನು ಬೆಂಬಲಿಸುವ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ವೇದಿಕೆಯಲ್ಲಿ ಕರ್ನಾಟಕ ಜನಶಕ್ತಿ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ರಾಜ್ಯ ಕಾರ್ಯದರ್ಶಿ ಸಿದ್ದರಾಜು, ಕರ್ನಾಟಕ ಜನಶಕ್ತಿ ರಾಜ್ಯ ಕಾರ್ಯದರ್ಶಿ ಪೂರ್ಣಿಮಾ, ಜಾಗೃತ ಕರ್ನಾಟಕದ ಎನ್. ನಾಗೇಶ್, ಕರ್ನಾಟಕ ಜನಾಂದೋಲನ ಸಂಘಟನೆ ರಾಜ್ಯ ಸಂಚಾಲಕ ಮರಿಯಪ್ಪ, ರೈತಸಂಘದ ಲತಾ ಶಂಕರ್, ವಿಮೋಚನ ಜನಾರ್ಧನ್, ಮಹಿಳಾ ಮುನ್ನಡೆ ಶಿಲ್ಪ, ವಿದ್ಯಾರ್ಥಿ ಸಂಘಟನೆಯ ಅಂಜಲಿ, ನಗರಸಭೆ ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿಯ ಎಇಇ ಕುಮಾರ್ ಈಶ್ವರ್, ಎಇ ಕಾವ್ಯ ಸೇರಿದಂತೆ ಅಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿಗಳನ್ನು ಬಾಕಿ ಉಳಿಸಿಕೊಂಡರೆ ಅಧಿಕಾರಿಗಳಿಗೆ ದಂಡ

ಜಿಲ್ಲಾಧಿಕಾರಿ ಡಾ.ಕುಮಾರ್ ಎಚ್ಚರಿಕೆ



ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸಭೆ ನಡೆಸಿದರು.

ಮಂಡ್ಯ, ಜೂ.17– ಸಾರ್ವಜನಿಕರು ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳದೆ ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿ ಡಾ ಕುಮಾರ ಆದೇಶಿಸಿದ್ದಾರೆ

ರಾಜ್ಯ ಮಾಹಿತಿ ಆಯುಕ್ತ ಬದ್ರುದ್ದೀನ್.ಕೆ ಜೂನ್ 21ರ ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾ ರಿಗಳಿಗೆ ತರಬೇತಿ ನೀಡಲಿದ್ದಾರೆ ಎಂದು ತಿಳಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಗಳು ಆಫ್ ಲೈನ್ ಮತ್ತು ಆನ್ ಲೈನ್ ಮೂಲಕ ಮಾಹಿತಿ ಹಕ್ಕು ಕಾಯ್ದೆಯಡಿ ಏಪ್ರಿಲ್ ಮಾಹೆಯವರೆಗೂ ಸ್ವೀಕರಿಸಿ ವಿಲೇವಾರಿ ಮಾಡಿದ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳ ಮಾಹಿತಿಯನ್ನು ನೀಡಬೇಕು ಎಂದರು.

ಜಿಲ್ಲೆಯಲ್ಲಿ ಸಕಾಲ ಅರ್ಜಿಗಳ ಸರಿಯಾಗಿ ವಿಲೇವಾರಿ ಆಗದಿರುವುದು ಗಮನಕ್ಕೆ ಬಂದಿದೆ, ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಸಕಾಲ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಕಾಲ ಅರ್ಜಿಗಳು ನಿಗಧಿತ ಸಮಯದಲ್ಲಿ ವಿಲೇವಾರಿ ಮಾಡದಿದ್ದರೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ದಂಡ ವಿಧಿಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಎಂ.ಬಾಬು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಶಿವರಾಮೇಗೌಡ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕಿ ಡಾ.ಪುಷ್ಪಾ, ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಪುಷ್ಪಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ಮಲಾ ಎಸ್. ಎಚ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ

ಮಂಡ್ಯ: ಜಿಲ್ಲೆಯಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಪಿ.ಇ.ಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಜೂನ್ 21ರಂದು ಆಯೋಜಿಸಲಾಗಿದೆ. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶ್ರೀರಂಗಪಟ್ಟಣದ ಬೇಬಿ ಮಠ ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಕೇಂದ್ರ ಸಚಿವ ಕುಮಾರಸ್ವಾಮಿ ಉಪಸ್ಥಿತಿ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆಯನ್ನು ವಹಿಸುವರು.

ಈಜುವಾಗ ಸಾವನ್ನಪ್ಪಿದ ಯುವಕರ ಕುಟುಂಬಗಳಿಗೆ ಆರ್ಥಿಕ ಸಹಾಯ



ಈಜಲು ಹೋಗಿ ಮೃತಪಟ್ಟ ಕುಟುಂಬಕ್ಕೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸುರೇಶ್‌ಕಂಠಿ ಧನ ಸಹಾಯ ಮಾಡಿದರು.

ಭಾರತೀನಗರ, ಜೂ.17– ಸಮೀಪದ ಕ್ಯಾತಘಟ್ಟ ಹೆಬ್ಬಾಳದಲ್ಲಿ ನೀರು ಈಜಲು ಹೋಗಿ ಸಾವನ್ನಪ್ಪಿದ ಆಲಭುಜನಹಳ್ಳಿ ಗ್ರಾಮದ ಯುವಕರ ಕುಟುಂಬಕ್ಕೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸುರೇಶ್ ಕಂಠಿ ಸಹಾಯ ಧನ ನೀಡಿದರು.

ಆಲಭುಜನಹಳ್ಳಿ ಗ್ರಾಮದ ಸಿದ್ದರಾಜು ಪುತ್ರ 16 ವರ್ಷದ ಎ.ಎಸ್.ಚೇತನ್, ಸ್ವಾಮಿ ಪುತ್ರ 19 ವರ್ಷದ ದರ್ಶನ್ ಈ ಇಬ್ಬರು ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದು ಕ್ಯಾತಘಟ್ಟ ಗ್ರಾಮದ ಬಳಿ ಇರುವ ಹೆಬ್ಬಾಳದಲ್ಲಿ ನೀರು ಈಜಲು ಹೋಗಿದ್ದಾಗ ಸುಳಿಗೆ ಸಿಲುಕಿ ಸಾವನ್ನಪ್ಪಿರುವುದು ನಮ್ಮೆಲ್ಲರಿಗೂ ನೋವು ತರುವಂತಹ ವಿಚಾರ. ಅವರ ಕುಟುಂಬಗಳಿಗೆ ಭಗವಂತ ಧೈರ್ಯ ತುಂಬುವಂತಹ ಕೆಲಸ ಮಾಡಲಿ. ನಮ್ಮ ಶೋಷಿತ ಸಮುದಾಯ ವೇದಿಕೆ ವತಿಯಿಂದ ಎರಡು ಕುಟುಂಬಗಳಿಗೂ ತಲಾ 20 ಸಾವಿರ ಆರ್ಥಿಕ ಸಹಾಯ ನೀಡುತ್ತಿದ್ದೇವೆಂದು ತಿಳಿಸಿದರು.

ವೇದಿಕೆಯ ತಾಲೂಕು ಅಧ್ಯಕ್ಷ ಕರಡಕೆರೆ ಯೋಗೇಶ್, ಮುಖಂಡ ಮುಡೀನಹಳ್ಳಿ ತಿಮ್ಮಯ್ಯ, ಎಸ್ಸಿ, ಎಸ್ಟಿ ವಿಭಾಗದ ಅಧ್ಯಕ್ಷ ಶಿವಲಿಂಗಯ್ಯ, ಕಾಡುಕೊತ್ತನಹಳ್ಳಿ ಮರಿಸ್ವಾಮಿ, ರುದ್ರಯ್ಯ, ಪ್ರಕಾಶ್, ಶಿವಲಿಂಗಯ್ಯ, ಗ್ರಾಮಸ್ಥರಾದ ಸಿದ್ದಯ್ಯ, ಮಹದೇವು, ಸಿದ್ದರಾಜು, ಶಿವಕುಮಾರ್, ಗುಡಿಗೆರೆ ಪ್ರಸಾದ್, ಪರಮೇಶ್, ಪ್ರಸಾದ್, ಶಿವಣ್ಣ ಹಲವರಿದ್ದರು.

ಹೈನುಗಾರಿಕೆಯನ್ನು ಉದ್ಯಮವಾಗಿ ಬೆಳೆಸಲು ಯುವಕರಿಗೆ ಕರೆ



ತಾಲೂಕಿನ ಕೆರೆತೊಣ್ಣೂರು ಹಾಲು ಉತ್ಪಾದಕರ ಸಹಕಾರ ಸಂಘದಿಂದ ಮನ್‌ಮುಲ್ ನಿರ್ದೇಶಕ ಎಸ್.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಪಾಂಡವಪುರ, ಜೂ.17– ಗ್ರಾಮೀಣ ಪ್ರದೇಶದ ಮಹಿಳೆಯರ ಶ್ರಮದಿಂದ ಹೈನುಗಾರಿಕೆ ಯಶಸ್ವಿಯಾಗಿ ನಡೆಯುತ್ತಿದೆ. ಯುವಕರು ಸಹ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಉದ್ಯಮವಾಗಿ ಬೆಳೆಸಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ. ಶಿವಕುಮಾರ್ ಕರೆ ನೀಡಿದ್ದಾರೆ

ತಾಲೂಕಿನ ಕೆರೆತೊಣ್ಣೂರು ಹಾಲು ಉತ್ಪಾದಕರ ಸಹಕಾರ ಸಂಘ ತಮಗೆ ನೀಡಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ರೈತ ಮಹಿಳೆಯರು ಪ್ರತಿನಿತ್ಯ ಬೆಳಿಗ್ಗೆ ಸಂಜೆ ಎದ್ದು ಹಸುಗಳ ಸಗಣಿ ಬಾಚಿ, ಮೇವು ಹಾಕಿ ಹಸು ಸ್ವಚ್ಛಗೊಳಿಸಿ ಹಾಲು ಕರೆದು ಡೇರಿಗೆ ಹಾಕುತ್ತಿರುವುದರಿಂದ ಹೈನುಗಾರಿಕೆ ಚೆನ್ನಾಗಿ ನಡೆಯುತ್ತಿದೆ. ಇದರಿಂದ ಸಾವಿರಾರು ಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ಸಹಕಾರಿಯಾಗಿದೆ ಎಂದರು. ಅಲ್ಪ ಸಂಬಳಕ್ಕಾಗಿ ಉದ್ಯೋಗ ಹರಿಸಿ ನಗರ ಪ್ರದೇಶಗಳಿಗೆ ಹೋಗುತ್ತಿರುವ ಯುವಕರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಅಧಿಕ ಲಾಭಗಳಿಸಬಹುದಾಗಿದೆ ಹಾಗಾಗಿ ಯುವಕರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಹೇಳಿದರು

ಮನ್ ಮುಲ್ ಒಕ್ಕೂಟದಲ್ಲಿ ವಾರ್ಷಿಕ ವಹಿವಾಟು 1300 ಕೋಟಿಗೂ ಅಧಿಕವಿದೆ. ಅಂತಹ ಒಕ್ಕೂಟಗಳು ಅಭಿವೃದ್ಧಿ ಹೊಂದಬೇಕಾದರೆ ರೈತರು ಡೇರಿಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿದಾಗ ಮಾತ್ರ ಡೇರಿಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿ ನಾಗೇಂದ್ರ, ಟೆಕ್ನಿಷಿಯನ್ ಆನಂದ್, ಡೇರಿ ಅಧ್ಯಕ್ಷ ಟಿ.ಎನ್.ರಾಮೇಗೌಡ, ಉಪಾಧ್ಯಕ್ಷ ಟಿ.ಜೆ.ಶಂಕರ, ನಿರ್ದೇಶಕರಾದ ಟಿ.ಎನ್.ಜವರಾಯಿಗೌಡ, ಇಂದ್ರೇಶ್, ಗಾಡಿರಾಮೇಗೌಡ, ಪ್ರಕಾಶ್ ಟಿ.ಜೆ., ಟಿ.ಪಿ.ರಾಮು, ಮರಿಸ್ವಾಮಿ, ಜಯಶೀಲ, ಟಿ.ಎಸ್.ಶೋಭಾ, ಕಾರ್ಯದರ್ಶಿ ಎಸ್. ಡಿ.ಸಿದ್ದಲಿಂಗೇಗೌಡ, ಪರೀಕ್ಷ ಸುಹಾಸ್ ಎಸ್ ಸೇರಿದಂತೆ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ



ನೂತನ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ,ಜೂ.17– ತಾಲೂಕಿನ ಚಟ್ಟಂಗೆರೆ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 1 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ, ರಾಜಘಟ್ಟ ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ 60 ಲಕ್ಷ, ಕೆ.ಜಿ.ಕೋಡಿಹಳ್ಳಿ ಗ್ರಾಮದಲ್ಲಿ ಕೆಆರ್‌ಐಡಿಎಲ್ ಇಲಾಖೆ ವತಿಯಿಂದ 20ಲಕ್ಷ ರೂ ವೆಚ್ಚದಲ್ಲಿ ನೂತನ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಗುತ್ತಿಗೆದಾರರು ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಿಕೊಂಡು ಉತ್ತಮ ಕೆಲಸ ನಿರ್ವಹಿಸಬೇಕು. ಗುಣಮಟ್ಟದಲ್ಲಿ ಯಾವುದೇ ರಾಜೀ ಮಾಡಿಕೊಳ್ಳುವುದಿಲ್ಲ. ಗ್ರಾಮಸ್ಥರು ಗುಣಮಟ್ಟದ ಕಾಮಗಾರಿ ನಡೆಯದೇ ಇದ್ದಲ್ಲಿ ತಕ್ಷಣ ಅದನ್ನು ವಿರೋಧಿಸಿ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಬೇಕು ಎಂದು ಸೂಚಿಸಿದರು. ಗುತ್ತಿಗೆದಾರರು ಕಳಪೆ ಕಾಮಗಾರಿ ಮಾಡಿದರೆ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಗುತ್ತಿಗೆದಾರ ಕಪ್ಪು ಪಟ್ಟಿಗೆ ಸೇರಿಸುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ತಾಲೂಕು ಜೆಡಿಎಸ್ ಯುವ ಮುಖಂಡ ಅಜಯ್ ರಾಮೇಗೌಡ, ಬೇಲದಕೆರೆ ಮರೀಗೌಡ, ಕೃಷ್ಣೇಗೌಡ, ಶೀಳನೆರೆ ಪಿಡಿಓ ನವೀನ್‌ಕುಮಾರ್, ಶೀಳನೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಸ್ವಾಮೀಗೌಡ, ಪುರಸಭಾ ಸದಸ್ಯ ಕೆ.ಕೆ.ರಮೇಶ್, ಗ್ರಾಮ ಪಂಚಾಯತ್ ಸದಸ್ಯರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಉನ್ನತ ಶಿಕ್ಷಣದಲ್ಲಿ ಪರಿಸರ ಪಠ್ಯಕ್ರಮ

ತಮ್ಮ ಕರ್ತವ್ಯ ಅರಿತು ನನ್ನ ಜೀವ ನನ್ನ ಮರ ಎನ್ನುವ ಮೂಲಕ ಗಿಡ–ಮರಗಳನ್ನು ನೆಟ್ಟು ಬೆಳೆಸೋಣ ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಪರಿಸರಕ್ಕೆ ಮಾರಕವಾದ ನೀರಿನ ಪ್ಲಾಸ್ಟಿಕ್ ಬಾಟಲಿ ತ್ಯಾಜ್ಯ ನಿರ್ವಹಣೆ ನಿಯಮಗಳ ಜಾರಿ ಮತ್ತು ಮೇಲ್ವಿಚಾರಣೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಆದೇಶ ಹೊರಡಿಸಲಾಯಿತು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತವಾಗಿ ಆದೇಶ ಅನಾವರಣ ಮಾಡಿದರು.

ಇದೇ ವೇಳೆ ಬೀದಿ ಬದಿಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ನೆಡುವ ಸಸಿಯ ಸುತ್ತ ಒಂದು ಮೀಟರ್ ಸುತ್ತಳತೆಯಲ್ಲಿ ಕಾಂಕ್ರೀಟ್ ತೆರವು ಆದೇಶವನ್ನೂ ಬಿಡುಗಡೆ ಮಾಡಲಾಯಿತು.

ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಮೊದಲು ನೀರಿನ ಬಾಟಲಿಗಳ ವೈಜ್ಞಾನಿಕ ವಿಲೇವಾರಿಗೆ ವಿಶೇಷ ಗಮನ ನೀಡಬೇಕು, ಜಿಲ್ಲೆಯೊಳಗೆ ಉತ್ಪಾದಿಸುವ, ಬಳಸುವ ಮತ್ತು ಮಾರಾಟವಾಗುವ ಪೆಟ್ ಬಾಟಲಿಗಳ ಪ್ರಮಾಣದ ದತ್ತಾಂಶ ಕ್ರೋಢೀಕರಿಸಿ ತ್ಯಾಜ್ಯ ನಿರ್ವಹಣೆ ಮೇಲೆ ನಿಗಾ ಇಡಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಉಪನಿರ್ದೇಶಕರು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲು ಸರ್ಕಾರ ಆದೇಶಿಸಿದೆ.

ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ನಿಯಮ ಜಾರಿ ಪರಿಣಾಮ ಪರಿಶೀಲಿಸಲಿರುವ ಈ ಸಮಿತಿಗಳು, ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬಾಟಲಿಗಳ ವೈಜ್ಞಾನಿಕ ವಿಲೇವಾರಿ, ಪ್ಲಾಸ್ಟಿಕ್ ತ್ಯಾಜ್ಯದಿಂದ ಆಗಬಹುದಾದ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡಲಿವೆ. ಖನಿಜಯುಕ್ತ ಕುಡಿಯುವ ನೀರು ತಯಾರಿಕಾ ಕಂಪನಿಗಳು, ಉತ್ಪಾದಕರ ವಿಸ್ತರಿತ ಹೊಣೆಗಾರಿಕೆ ನಿಯಮದಡಿ, ಖಾಲಿ ಬಾಟಲಿಗಳ ವೈಜ್ಞಾನಿಕ ವಿಲೇವಾರಿ ಆದೇಶ ಹೊರಡಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದ್ದರು.

ಈ ಬಾರಿಯ ವಿಶ್ವ ಪರಿಸರ ದಿನದ ಧ್ಯೇಯವಾಕ್ಯ 'ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸೋಣ' ಎಂಬುದಾಗಿದೆ.

ವೈಫಲ್ಯ ಖಂಡಿಸಿ ಬಿಜೆಪಿ ಪ್ರತಿಭಟನೆ



ಕಿಕ್ಕಿರಿದು ಸೇರಿದ್ದ ಯುವಜನಸ್ತೋಮದ ದಾರಿ ತಪ್ಪಿಸಿ, ಸರ್ಕಾರವೇ ಕ್ರೀಡಾಂಗಣಕ್ಕೆ ಕಳುಹಿಸಿದ್ದರಿಂದ ಈ ದುರಂತ ಸಂಭವಿಸಿತು. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ವೈಯಕ್ತಿಕ ಪ್ರತಿಷ್ಠೆಗಾಗಿ ಎರಡು ಕಡೆ ವಿಜಯೋತ್ಸವ ಆಚರಿಸಿ ಅಮಾಯಕರ ಬಲಿ ತೆಗೆದುಕೊಂಡರು.

ಕಾಲ್ತುಳಿತದಿಂದ ಸಾವು–ನೋವುಗಳಾಗಿವೆ ಎಂಬ ಮಾಹಿತಿ ನಂತರವೂ ಸಿದ್ದರಾಮಯ್ಯ ಹೋಟೆಲ್‌ಗೆ ತೆರಳಿ ಮಸಾಲೆ ದೋಸೆ ಸವಿಯುತ್ತಿದ್ದರೆ, ಉಪಮುಖ್ಯಮಂತ್ರಿ ಕ್ರೀಡಾಂಗಣದೊಳಗೆ ತಾವೇ ಆಟವಾಡಿ, ಗೆದ್ದವರಂತೆ ಕಪ್ ಎತ್ತಿ ಹಿಡಿದು ಮುತ್ತಿಡುತ್ತಿದ್ದರು.

ಇನ್ನು ಗೃಹ ಸಚಿವರಿಗೆ, ಎಲ್ಲಿ, ಏನಾಗುತ್ತಿದೆ ಎಂಬ ಅರಿವಿಲ್ಲದೆ ವಿಧಾನಸೌಧದ ಮೆಟ್ಟಿಲ ಮೇಲೆ ನಿಂತಿದ್ದರು, ಇಂತಹವರಿಂದ ನಾವು ಕಾನೂನು–ಸುವ್ಯವಸ್ಥೆ ನಿರೀಕ್ಷೆ ಮಾಡಲಾಗದು.

ಅಮಾಯಕರ ಸಾವಿಗೆ ಕಾರಣರಾದ ಈ ಮೂರು ಮಂದಿ ರಾಜೀನಾಮೆ ನೀಡಬೇಕು, ಇಲ್ಲದಿದ್ದರೆ, ರಾಜ್ಯಾದ್ಯಂತ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಬಿಜೆಪಿ ನಾಯಕರು ಎಚ್ಚರಿಸಿದರು. ಪ್ರತಿಭಟನಾ ವೇದಿಕೆಯಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಮುಖವಾಡ ಧರಿಸಿದ ಬಿಜೆಪಿ ಕಾರ್ಯಕರ್ತರು, ಕಪ್ ಎತ್ತಿ ಹಿಡಿಯುವ ಅಣಕು ಪ್ರದರ್ಶನ ಮಾಡಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಹೆಣಗಳ ಮೇಲೆ ರಾಜಕೀಯ ಬಿಜೆಪಿಗೆ ಹೊಸದಲ್ಲ...

ಪ್ರಕರಣದ ಸಮಗ್ರ ತನಿಖೆಗೆ ನಿವೃತ್ತ ನ್ಯಾಯಾಧೀಶ ಜಾನ್ ಮೈಕೆಲ್ ಕುನ್ಹಾ ನೇತೃತ್ವ ಏಕಸದಸ್ಯ ಆಯೋಗ ರಚಿಸಲಾಗಿದೆ ಎಂದಿದ್ದಾರೆ. ಇಷ್ಟೆಲ್ಲ ಕ್ರಮಕೈಗೊಂಡ ನಂತರವೂ ರಾಜ್ಯ ಬಿಜೆಪಿ ನಾಯಕರು ಪ್ರತಿಭಟನೆ ನಡೆಸುತ್ತಿರುವುದು ರಾಜಕೀಯ ದುರುದ್ದೇಶದಿಂದಲೇ ಹೊರತು ಜನರ ಬಗೆಗಿನ ಕಾಳಜಿಯಿಂದ ಅಲ್ಲ ಎನ್ನುವುದು ಸ್ಪಷ್ಟವಾಗಿದೆ. ಹೆಣಗಳ ಮೇಲೆ ರಾಜಕೀಯ ಮಾಡುವುದು ಬಿಜೆಪಿಗೆ ಹೊಸದೇನಲ್ಲ, ಅಪಘಾತ, ಹತ್ಯೆ, ದೌರ್ಜನ್ಯಗಳು ನಡೆದ ತಕ್ಷಣ ಸತ್ತ ಜೀವಗಳನ್ನು ಹುಡುಕಿಕೊಂಡು ಹೋಗುವ ರಣಹದ್ದುಗಳಂತೆ ಎರಗಿ ಬೀಳುವುದು ಆ ಪಕ್ಷದ ರಕ್ತದಲ್ಲಿಯೇ ಇದೆ.

ತಮ್ಮ ಊಟದ ಎಲೆಯಲ್ಲಿ ಆನೆ ಸತ್ತುಬಿದ್ದಿದ್ದರೂ, ಅದನ್ನು ನೋಡದೆ, ಎದುರಿಗಿದ್ದವರ ಎಲೆಯಲ್ಲಿ ಸತ್ತು ಬಿದ್ದ ನೊಣದ ಕಡೆ ಬೊಟ್ಟು ಮಾಡುವುದು ಬಿಜೆಪಿಯ ಹಳೇ ಚಾಳಿ ಎಂಬುದನ್ನು ಜನತೆ ಅರ್ಥಮಾಡಿಕೊಂಡಿದ್ದಾರೆ. ಅವಘಡಗಳಲ್ಲಿ ಸಾವು–ನೋವಿಗೆ ಒಳಗಾಗುವ ಕುಟುಂಬದ ದುಃಖ, ಸಂಕಟ ಅರ್ಥಮಾಡಿಕೊಂಡಿದ್ದೇವೆ, ಇದಕ್ಕಾಗಿಯೇ ಇಂತಹ ಪ್ರಕರಣಗಳನ್ನು ನಾವು ರಾಜಕೀಯಕ್ಕೆ ಬಳಸುವುದಿಲ್ಲ. ರಾಜ್ಯ ಬಿಜೆಪಿ ನಾಯಕರು ಆಗಿಂದಾಗ್ಯೆ ಇಂತಹ ಪ್ರಕರಣಗಳನ್ನು ಕೆದಕಿ ಜನರನ್ನು ಪ್ರಚೋದಿಸುತ್ತಿರುವ ಆತ್ಮವಂಚಕ ನಡವಳಿಕೆ ಬಯಲು ಮಾಡಲು ಆ ಪಕ್ಷದ ಆಡಳಿತದಲ್ಲಿನ ಕೆಲವು ಪ್ರಕರಣಗಳನ್ನು ಜನತೆ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಗುಜರಾತ್‌ನ 2002ರ ಹತ್ಯಾಕಾಂಡದಲ್ಲಿ ಎಲ್ಲ ಧರ್ಮಗಳಿಗೆ ಸೇರಿದ ಅಂದಾಜು ಎರಡು ಸಾವಿರ ಅಮಾಯಕರು ಪ್ರಾಣ ಕಳೆದುಕೊಂಡರು, ಆ ಘಟನೆ ಹೊಣೆ ಹೊತ್ತು ರಾಜೀನಾಮೆ ನೀಡುವಂತೆ ಬಿಜೆಪಿ ಹಿರಿಯ ನಾಯಕ ಹಾಗೂ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸೂಚನೆ ನೀಡಿದರೂ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ರಾಜೀನಾಮೆ ನೀಡಲಿಲ್ಲ. ಘಟನೆಗೆ ಇದುವರೆಗೆ ಕನಿಷ್ಠ ವಿಷಾದವನ್ನೂ ವ್ಯಕ್ತಪಡಿಸಿಲ್ಲ, ನಮ್ಮ ರಾಜೀನಾಮೆ ಕೇಳುವವರು ಮೊದಲು ಇದಕ್ಕೆ ಉತ್ತರಿಸಿ.

ಏಪ್ರಿಲ್‌ನಲ್ಲಿ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಭಯೋತ್ಪಾದಕರು ನಡೆಸಿದ ಹತ್ಯಾಕಾಂಡದಲ್ಲಿ 26 ಭಾರತೀಯರು ಪ್ರಾಣ ಕಳೆದುಕೊಂಡರು, ಘಟನೆ ಹೊಣೆ ಹೊತ್ತು ಪ್ರಧಾನಿ ರಾಜೀನಾಮೆ ನೀಡಬೇಕೆಂದು ಕಾಂಗ್ರೆಸ್ ಒತ್ತಾಯಿಸಲಿಲ್ಲ. ಘಟನೆ ಕುರಿತ ಚರ್ಚೆಗೆ ಕನಿಷ್ಠ ಸಂಸತ್‌ನ ವಿಶೇಷ ಅಧಿವೇಶನ ಕರೆಯಬೇಕೆಂಬ ಕಾಂಗ್ರೆಸ್ ಬೇಡಿಕೆಯನ್ನೂ ಒಪ್ಪಿಕೊಂಡಿಲ್ಲ, ದೇಶಕ್ಕೆಲ್ಲ ಸಿಂಧೂರ ಹಂಚಲು ಹೊರಟಿರುವ ಪ್ರಧಾನಿಗೆ 26 ಅಮಾಯಕರ ಸಾವಿಗೆ ಕಾರಣರಾದ ನಾಲ್ವರು ದುರುಳರನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ.

ಇದು ಕೇಂದ್ರ ಸರ್ಕಾರದ ವೈಫಲ್ಯವಲ್ಲವೇ, ಇದರ ಹೊಣೆ ಯಾರು ಹೊರಬೇಕು, ಪಂಡಿತ ಜವಾಹರಲಾಲ್ ನೆಹರೂನಾ, ರಾಹುಲ್ ಗಾಂಧೀನಾ, ಪ್ರಧಾನಿ ನರೇಂದ್ರ ಮೋದೀನಾ ಎಂದು ಪ್ರಶ್ನಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಮಣಿಪುರ ಬೆಂಕಿಯಲ್ಲಿ ಹೊತ್ತಿ ಉರಿಯುತ್ತಿದೆ, ನೂರಾರು ಮಂದಿ ಸಾವಿಗೀಡಾಗಿದ್ದಾರೆ, ಆದರೂ, ಆ ರಾಜ್ಯದ ಬಿಜೆಪಿ ಮುಖ್ಯಮಂತ್ರಿ ಬಿರೇನ್ ಸಿಂಗ್ 20 ತಿಂಗಳು ಕುರ್ಚಿಗೆ ಅಂಟಿ ಕುಳಿತಿದ್ದರು, ಸುಪ್ರೀಂಕೋರ್ಟ್ ಚಾಟಿ ಬೀಸಿದ ನಂತರ ರಾಜೀನಾಮೆ ನೀಡಿದರು. ಈಗಲೂ ಅಲ್ಲಿ ಹಿಂಸಾಚಾರ ಮುಂದುವರಿದಿದೆ. ಇದರ ಹೊಣೆ ಕೇಂದ್ರ ಗೃಹ ಸಚಿವರು ಹೊರುವುದು ಬೇಡವೇ.

ಗುಜರಾತ್‌ನ ಮೋರ್ಬಿ ಸೇತುವೆ ಕುಸಿದು ಬಿದ್ದು 140 ಮಂದಿ ಮೃತಪಟ್ಟರು, ಜನವರಿಯಲ್ಲಿ ಉತ್ತರ ಪ್ರದೇಶದ ಪ್ರಯಾಗರಾಜ್ ಮಹಾಕುಂಭದಲ್ಲಿ 30 ಯಾತ್ರಿಕರು ಪ್ರಾಣ ಕಳೆದುಕೊಂಡರು, ಆ ರಾಜ್ಯಗಳ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದರೇ, ಘಟನೆಗಳ ಬಗ್ಗೆ ಕನಿಷ್ಠ ಸೂಕ್ತ ತನಿಖೆಯನ್ನೂ ನಡೆಸಿಲ್ಲ. ಇಷ್ಟೆಲ್ಲಾ ಇದ್ದರೂ ನಮ್ಮ ರಾಜೀನಾಮೆ ಕೇಳಲು ರಾಜ್ಯ ಬಿಜೆಪಿ ನಾಯಕರಿಗೆ ಯಾವ ನೈತಿಕತೆ ಇದೆ.

ನಮ್ಮ ಸರ್ಕಾರ ರಾಜ್ಯದ ಏಳು ಕೋಟಿ ಜನರಿಗೆ ಉತ್ತರದಾಯಿಯಾಗಿದೆ. ಕಾಲ್ತುಳಿತ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕರ್ತವ್ಯಭ್ರಷ್ಟ ಅನಿಸಿದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡಿದ್ದು, ಆಮೂಲಾಗ್ರ ಮತ್ತು ನಿಷ್ಪಕ್ಷಪಾತ ತನಿಖೆಗೆ ಆಯೋಗ ರಚಿಸಿದ್ದು, ವರದಿ ಆಧರಿಸಿ ತಪ್ಪಿತಸ್ಥರ ಮೇಲೆ ಯಾವುದೇ ಮುಲಾಜಿಲ್ಲದೆ ಕ್ರಮಕೈಗೊಳ್ಳಲಾಗುವುದು. ರಾಜ್ಯ ಬಿಜೆಪಿ ನಾಯಕರು ಇನ್ನಾದರೂ ಪ್ರತಿಭಟನೆ ಯಂತಹ ಬೀದಿ ಪ್ರಹಸನ ಕೈಬಿಟ್ಟು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಲಿ ಎಂದು ಕಿವಿಮಾತು ಹೇಳಿದ್ದಾರೆ.

ಮೈಸೂರಲ್ಲಿ ಬಿಜೆಪಿ ಭಾರಿ ಪ್ರತಿಭಟನೆ

ಅವರು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಪೊಲೀಸ್ ಆಯುಕ್ತರು ಸೇರಿದಂತೆ ಐವರು ಪ್ರಾಮಾಣಿಕ ಅಧಿಕಾರಿಗಳನ್ನು ಅಮಾನತು ಪಡಿಸಿದ್ದಾರೆ. ದಕ್ಷ ಪೊಲೀಸ್ ಆಯುಕ್ತ ಬಿ.ದಯಾನಂದ ಅವರನ್ನು ಸರ್ಕಾರ ಬಲಿಪಶು ಮಾಡಿದೆ ಎಂದು ಕಿಡಿಕಾರಿದರು.

ರಾಜ್ಯದ ಹಣಕಾಸು ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದೆ. ಜನ ಸಾಮಾನ್ಯರು ಬಳಸುವ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಸರ್ಕಾರ ನಿನ್ನೆ ಇಂಧನ ಇಲಾಖೆ ನೌಕರರ ಪಿಂಚಣಿ,ಗ್ರಾಚ್ಯುಟಿಗಾಗಿ ವಿದ್ಯುತ್ ಬಿಲ್‌ನಲ್ಲಿ ಸರ್‌ಚಾರ್ಜ್ ಸಂಗ್ರಹಿಸುತ್ತಿದೆ. ಆಷಾಢ ಶುಕ್ರವಾರಗಳಲ್ಲಿ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತರಿಗೆ 2000 ವಿಶೇಷ ಪ್ರವೇಶ ಶುಲ್ಕ ವಿಧಿಸಲಾಗಿದೆ. ಇದು ನಾಚಿಕೆಗೇಡಿನ ಸಂಗತಿ. ಸರ್ಕಾರ ಕೂಡಲೇ ಇದನ್ನು ಕೈಬಿಡಬೇಕು ಎಂದು ಆಗ್ರಹಿಸಿದರು. ಹಾಲು, ವಿದ್ಯುತ್, ಕುಡಿಯುವ ನೀರು, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ್ದರೂ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಒದಗಿಸಲಾಗದೆ ಪರದಾಡುತ್ತಿರುವ ಸರ್ಕಾರ, ಈಗ ಎಲ್ಲದರಲ್ಲೂ ತೆರಿಗೆ ವಿಧಿಸಲು ಮುಂದಾಗಿದೆ. ವಿದ್ಯುತ್ ದರ ಹೆಚ್ಚಿಸುವ ಜತೆಗೆ, ಪಿಂಚಣಿ, ಗ್ರಾಚ್ಯುಟಿಗೆ ಸರ್‌ಚಾರ್ಜ್ ಹಾಕುವುದರಿಂದ ಮತ್ತೆ ಹೊರೆಯಾಗಲಿದೆ ಎಂದರು.

ಹೋರಾಟ ನಿಲ್ಲಲ್ಲ: ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಜ್ಯ ಸರ್ಕಾರದ ತಪ್ಪಿನಿಂದ ಹನ್ನೊಂದು ಜನರ ಅಮಾಯಕರ ಸಾವಾಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡುವ ತನಕವೂ ಹೋರಾಟ ನಿಲ್ಲಲ್ಲ ಎಂದರು. ಗೃಹ ಸಚಿವರು ಸ್ವಯಂಪ್ರೇರಿತವಾಗಿ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ. ಅವರು ಗೃಹ ಇಲಾಖೆ ನಿರ್ವಹಿಸುವಲ್ಲಿ ವಿಫಲವಾಗಿ ದ್ದಾರೆ ಎಂದು ಟೀಕಿಸಿದರು. ಸರ್ಕಾರ ತುಘ ಲಕ್ ಆಡಳಿತ ನಡೆಸುತ್ತಿದೆ. ಎರಡು ವರ್ಷಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಗ್ಯಾರಂಟಿ ಯೋಜನೆಗಳನ್ನು ಕೊಡುತ್ತೇವೆಂದು ಹೇಳುತ್ತಿರುವ ಸರ್ಕಾರ ಅಭಿವೃದ್ಧಿ ಕಾರ್ಯವನ್ನು ಸಂಪೂರ್ಣ ಮರೆತುಬಿಟ್ಟಿದೆ ಎಂದು ಕಿಡಿಕಾರಿದರು.

ಮಾಜಿ ಮೇಯರ್ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಎಸ್.ಸೋಮಶೇಖರ್, ಮಾಜಿ ಸದಸ್ಯರಾದ ರಮೇಶ್, ಎಸ್.ಲಕ್ಷ್ಮೀದೇವಿ, ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ನಗರಪಾಲಿಕೆ ಮಾಜಿ ಸದಸ್ಯರಾದ ರಂಗಸ್ವಾಮಿ, ಎಂ.ಯು.ಸುಬ್ಬಯ್ಯ, ಎಂ.ಕೆ.ಶಂಕರ್, ರವೀಂದ್ರ, ಲಕ್ಷ್ಮೀ ಕಿರಣ್ ಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್, ಬಿ.ಎಂ.ರಘು, ಮೋನಿಕಾ, ಕೇಬಲ್ ಮಹೇಶ್ , ಜೋಗಿ ಮಂಜು, ರೇಣುಕಾರಾಜ್, ನಾಗರತ್ನಮ್ಮ, ಎಸ್. ಬಾಲಕೃಷ್ಣ, ವಿಶ್ವೇಶ್ವರಯ್ಯ, ಜಯಪ್ರಕಾಶ್ (ಜೆಪಿ), ಡಾ.ಭಾನುಪ್ರಕಾಶ್, ರಾಕೇಶ್ ಭಟ್, ವಕ್ತಾರ ಎಂ.ವಿ.ಮೋಹನ್, ಗೋಪಾಲರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಪ್ರದೀಪ್ ಕುಮಾರ್, ಕಿರಣ್‌ಗೌಡ, ರಾಕೇಶ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಇಡಿ ಸಮನ್ಸ್

ಯಾವುದೇ ಸಂಬಂಧವಿಲ್ಲ, ಅವರು ನಮ್ಮ ಕ್ಷೇತ್ರದವರಾಗಿದ್ದರಿಂದ ಒಂದೆರಡು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೆ ಎಂದರು.

ಐಶ್ವರ್ಯಗೌಡ ಮತ್ತು ತಮ್ಮ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ. ಇಡಿ ವಿಚಾರಣೆಗೆ ಕರೆದಿದ್ದು, ಏನು ಕೇಳುವರೆಂಬುದನ್ನು ಈಗಲೇ ಹೇಳಲಾಗದು.

ಇ.ಡಿ. ವಿಚಾರಣೆಗೆ ಹಾಜರಾಗುವೆ, ಅವರು ಪ್ರಶ್ನೆಗಳನ್ನು ಕೇಳಿದ ನಂತರವಷ್ಟೇ ವಿಷಯ ಏನೆಂದು ತಿಳಿಯಲಿದೆ. ಅಲ್ಲಿವರೆಗೆ ಏನನ್ನೂ ಹೇಳಲಾಗದು ಎಂದರು.

ವಿಚಾರಣೆಗೆ ಸಹಕರಿಸುತ್ತೇವೆ: ಈ ಮಧ್ಯೆ, ಸಹೋದರ ಡಿ.ಕೆ.ಸುರೇಶ್ ಅವರಿಗೆ ಇ.ಡಿ. ಸಮನ್ಸ್ ಕುರಿತು ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇ.ಡಿ. ಸಮನ್ಸ್ ಬಂದಾಗ ನಮ್ಮ ಬ್ರದರ್ ಇರಲಿಲ್ಲ, ಮನೆಗೆ ಅಂಟಿಸಿ ಹೋಗ್ತೀವಿ ಎಂದರಂತೆ. ನಾನು ರಿಸೀವ್ ಮಾಡಿಕೊಳ್ಳಿ ಎಂದಿದ್ದೇನೆ. ನಮ್ಮ ಬ್ರದರ್ ಮತ್ತು ನಮ್ಮ ಹೆಸರು ಮಿಸ್‌ಯ್ಯೂಸ್ ಆಗ್ತಿದೆ ಅಂತ ಹೇಳಿದ್ರು, ಇದರ ಇನ್ವೆಸ್ಟಿಗೇಷನ್ ಆಗಬೇಕು ಅಂತ ರಿಕ್ವೆಸ್ಟ್ ಲೆಟರ್ ಕೊಟ್ಟಿದ್ದಾರೆ. ಪೊಲೀಸ್‌ನವರಿಗೆ ಕಂಪ್ಲೈಂಟ್ ಕೂಡ ಕೊಟ್ಟಿದ್ದಾರೆ.

ನಮ್ಮ ಬ್ರದರ್ ಇ.ಡಿ. ಮುಂದೆ ಹಾಜರಾಗಿ ತನಿಖೆಗೆ ಸಹಕರಿಸುತ್ತಾರೆ. ಇದೇ ರೀತಿ ಮೂರ್ನಾಲ್ಕು ಜನರಿಗೆ ಮೋಸ ಆಗಿದೆ. ನಮ್ಮ ಹೆಸರು ಹೇಳಿ, ಸಿಸ್ಟರ್ ಅಂತ ಹೇಳಿ ದ್ದಾರೆ. ಇದರ ತನಿಖೆ ಆಗಬೇಕು ಅಂತಲೂ ಹೇಳಿದ್ದೇವೆ. ನಾವು ಇ.ಡಿ.ಗೆ ಸಹಕಾರ ಕೊಡಲು ಸಿದ್ಧರಿದ್ದೇವೆ. ಈ ದೇಶದ ಕಾನೂನಿಗೆ ಗೌರವ ಕೊಡುತ್ತೇವೆ, ವಿಚಾರಣೆಗೆ ಸಹಕಾರ ಕೊಡುತ್ತೇವೆ. ಸಮಾಜಕ್ಕೆ ಮೋಸ ಮಾಡುವ ಜನರ ವಿರುದ್ಧ ಕ್ರಮಕ್ಕೆ ಸಹಕಾರ ನೀಡಲು ಬದ್ಧರಾಗಿದ್ದೇವೆ. ಜನರಿಗೆ ನ್ಯಾಯ ಒದಗಿಸೋದು ನಮ್ಮ ಕರ್ತವ್ಯ ಎಂದರು.

ಐಶ್ವರ್ಯಗೆ ಜಾಮೀನು

ಐಶ್ವರ್ಯ ಗೌಡ ಪರ ವಾದ ಮಂಡಿಸಿದ ಎಸ್. ಸುನೀಲ್ ಕುಮಾರ್ ಅವರು, ಅನುಸೂಚಿತ ಪ್ರಕರಣವಿಲ್ಲದಿದ್ದರೂ ಇಡಿ ಅವರನ್ನು ಬಂಧಿಸಿದೆ. ಮಹಿಳೆಗೆ ಬಂಧನದಿಂದ ವಿಶೇಷ ವಿನಾಯಿತಿ ಇದೆ ಎಂದು ಹೇಳಿದರು. ಐಶ್ವರ್ಯಗೌಡ ಅವರು ಸುಮಾರು 9 ಕೋಟಿ ರೂ. ಮೌಲ್ಯದ ಚಿನ್ನ ಖರೀದಿಸಿ ವಂಚಿಸಿದ ಆರೋಪ ಎದುರಿಸುತ್ತಿದ್ದಾರೆ.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಜುವೆಲ್ಲರಿಯ ಮಾಲೀಕರಿಗೆ ಐಶ್ವರ್ಯಗೌಡ ವಂಚಿಸಿದ್ದಾರೆ ಎಂಬ ಆರೋಪವಿದೆ. ಇಷ್ಟೇ ಅಲ್ಲದೆ, ಮಾಜಿ ಸಂಸದ ಡಿಕೆ ಸುರೇಶ್ ಹೆಸರಿನಲ್ಲಿ ವಂಚನೆ ಎಸಗಿದ್ದರು ಎನ್ನಲಾಗಿದೆ. ಈ ವಿಚಾರವಾಗಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ 2024ರ ಡಿಸೆಂಬರ್‌ನಲ್ಲೇ ಡಿಕೆ ಸುರೇಶ್ ದೂರು ನೀಡಿದ್ದರು.

ಮಳೆ; ಹಲವೆಡೆ ಸಂಚಾರ ಬಂದ್



ಮೇಲೆ ಸೋಮವಾರ ರಾತ್ರಿ ಸುರಿದ ಮಳೆಯಿಂದ ಗೋಡೆ ಕುಸಿದು ಹಾನಿ ಸಂಭವಿಸಿದೆ. ಎಮ್ಮೆಮಾಡು ಗ್ರಾಮದ ನಿವಾಸಿ ನಬೀಸ ಎಂಬುವರ ವಾಸದ ಮನೆಯ ಮೇಲೆ ಗಾಳಿ ಮಳೆಗೆ ಮನೆ ಪಕ್ಕದಲ್ಲಿದ್ದ ಭಾರೀ ಗಾತ್ರದ ಮರ ಬಿದ್ದು ಮನೆಯ 5 ಶೀಟ್ ಹಾಗೂ ಗೋಡೆ ಬಿರುಕು ಬಿಟ್ಟಿದ್ದು ಅಪಾರ ನಷ್ಟ ಸಂಭವಿಸಿದೆ. ಸ್ಥಳಕ್ಕೆ ನಾಪೋಕ್ಲು ಕಂದಾಯ ಪರಿವೀಕ್ಷಕ ರವಿಕುಮಾರ್, ಗ್ರಾಮ ಲೆಕ್ಕಿಗರು ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಮಳೆ ಹಾನಿ ಪರಿಶೀಲನೆ ನಡೆಸಿದ್ದಾರೆ.

ತೂಗು ಸೇತುವೆಗೆ ಬೀಗ: ಕಣಿವೆ ರಾಮಲಿಂಗೇಶ್ವರ ದೇವಾಲಯದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ತೂಗು ಸೇತುವೆಯನ್ನು ತಹಶೀಲ್ದಾರ್ ಕಿರಣ್ ಗೌರಯ್ಯ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು. ಮುಂಜಾಗ್ರತಾ ಕ್ರಮವಾಗಿ ತೂಗು ಸೇತುವೆಯ ಎರಡೂ ಭಾಗಗಳನ್ನು ಬಂದ್ ಮಾಡಲಾಗಿದೆ. ಇತ್ತ ಕಡೆ ರಾಮೇಶ್ವರ ದೇವಾಲಯದ ಬಳಿ ಕಾವೇರಿ ನದಿಗೆ ಇಳಿಯುವ ಮೆಟ್ಟಿಲುಗಳ ಗೇಟ್‌ಗೂ ಬೀಗ ಅಳವಡಿಸಲಾಗಿದೆ.

ಜಾತಿಗಣತಿ ಮಾಡದಿದ್ದರೂ ನಮ್ಮಪ್ಪನ ಕುರ್ಚಿ ಭದ್ರವಾಗಿಯೇ ಇರುತ್ತೆ...


ಯತೀಂದ್ರ

ಮೈಸೂರು, ಜೂ.17(ಬಿಎಲ್‌ಯು)– ಜಾತಿ ಗಣತಿ ಮಾಡದಿದ್ದರೆ ನಮ್ಮಪ್ಪನ ಕುರ್ಚಿಯೇನು ಹೋಗಿ ಬಿಡಲ್ಲ. ಇನ್ನು ನಮ್ಮಪ್ಪನ ಕುರ್ಚಿ ಭದ್ರವಾಗಿಯೇ ಇರುತ್ತೆ. ಮೊದಲು ಮಾಡಿದ್ದ ಜಾತಿಗಣತಿಯನ್ನು ಕೆಲವರು ವಿರೋಧ ಮಾಡಿದ ಕಾರಣಕ್ಕೆ ಈಗ ಮತ್ತೊಮ್ಮೆ ಮರು ಸಮೀಕ್ಷೆ ನಡೆಸಲಾಗುತ್ತಿದೆ.

ಜಾತಿಗಣತಿ ಮರು ಸಮೀಕ್ಷೆ ಬಗ್ಗೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರ ಆರೋಪಗಳಿಗೆ ವಿಧಾನಪರಿಷತ್ ಸದಸ್ಯ ಯತೀಂದ್ರ ತಿರುಗೇಟು ನೀಡಿದರು. ಮತ್ತೊಮ್ಮೆ ಜಾತಿ ಗಣತಿ ಮಾಡುತ್ತಿರುವುದರಿಂದ ದುಂದು ವೆಚ್ಚವೇನು ಆಗಲ್ಲ. ಸಮಾಜಕ್ಕೆ ಇದು ಅತ್ಯಗತ್ಯವಾಗಿತ್ತು. ಈ ಮೊದಲು ಮಾಡಿದ್ದ ಜಾತಿಗಣತಿ ಸರಿ ಇಲ್ಲ ಎಂದು ಕೆಲವರು ಆಕ್ಷೇಪಣೆ ವ್ಯಕ್ತಪಡಿಸಿದ ಕಾರಣಕ್ಕೆ ಈಗ ಮರು ಸಮೀಕ್ಷೆ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಜಾತಿ ಗಣತಿ ಮರು ಸಮೀಕ್ಷೆಗೆ ನಿರ್ಧಾರ ಮಾಡದೇ ಇದ್ದಿದ್ದರೆ, ಹಿಂದೆ ಮಾಡಿಸಿದ್ದ ಜಾತಿ ಗಣತಿಯೇ ಜಾರಿಯಾಗುತ್ತಿತ್ತು. ಆದರೆ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕಾದ ಕಾರಣ ಈಗ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಜಾತಿಗಣತಿ ವಿಚಾರದಲ್ಲಿ ಹೈಕಮಾಂಡ್ ಮಟ್ಟದಲ್ಲಿ ಸಿದ್ದರಾಮಯ್ಯಗೆ ಹಿನ್ನಡೆಯಾಗಿದೆ ಎಂಬ ಹೇಳಿಕೆಗಳಿಗೆ ಸ್ಪಷ್ಟನೆ ನೀಡಿದ ಯತೀಂದ್ರ, ಜಾತಿಗಣತಿ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮರು ಸಮೀಕ್ಷೆ ಮಾಡುವಂತೆ ಹೈಕಮಾಂಡ್ ಕೂಡ ಸೂಚನೆ ನೀಡಿದೆ ಎಂದರು.

> **ಜಾತಿ ಗಣತಿ ಮಾಡದಿದ್ದರೆ ನಮ್ಮ ಅಪ್ಪನ ಕುರ್ಚಿಯೇನು ಹೋಗಿ ಬಿಡಲ್ಲ. ನಮ್ಮಪ್ಪನ ಕುರ್ಚಿ ಭದ್ರವಾಗಿಯೇ ಇರುತ್ತೆ ಎಂದ ಯತೀಂದ್ರ, ಏನೇ ತೀರ್ಮಾನ ಕೈಗೊಂಡರೂ ಬಿಜೆಪಿಯವರು ಟೀಕೆ ಮಾಡುತ್ತಾರೆ. ಇದಕ್ಕೆ ನಾವು ಪ್ರತಿಕ್ರಿಯೆ ನೀಡುವುದಿಲ್ಲ.**
> –ಡಾ.ಯತೀಂದ್ರ, ಎಂಎಲ್‌ಸಿ

ತೆಲಂಗಾಣ ಮತ್ತು ಬಿಹಾರದಲ್ಲಿ ಜಾತಿ ಗಣತಿಯನ್ನು ಬೇಗ ಮಾಡಿ ಮುಗಿಸಲಾಗಿದೆ. ಅದರಂತೆ ಕರ್ನಾಟಕದಲ್ಲಿ ಕೂಡ ಶೀಘ್ರವೇ ಇದನ್ನು ಮಾಡುತ್ತೇವೆ. ಸಮೀಕ್ಷೆ ಮಾಡುವುದು ಸರ್ಕಾರಕ್ಕೆ ದೊಡ್ಡ ಸವಾಲೇನು ಅಲ್ಲ ಎಂದು ಹೇಳಿದರು.

ನವೆಂಬರ್ ಅಥವಾ ಡಿಸೆಂಬರ್ ವೇಳೆಗೆ ಸಿದ್ದರಾಮಯ್ಯ ಬದಲಾವಣೆ ಆಗುತ್ತಾರೆ ಎಂಬ ಬಿಜೆಪಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಯತೀಂದ್ರ, ಈ ಸರ್ಕಾರ ಬಂದ ದಿನದಿಂದ ಇದೇ ರೀತಿ ಹೇಳುತ್ತಿದ್ದಾರೆ. ಆದರೆ ಅವರು ಹೇಳಿದಂತೆ ಆಯಿತೆ ಎಂದು ಕೇಳಿದರು. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ. ಇದರಿಂದ ಮುಖ್ಯಮಂತ್ರಿ ಬದಲಾವಣೆಗೆ ಯಾವುದೇ ಕಾರಣಗಳಿಲ್ಲ ಎಂದು ಯತೀಂದ್ರ ಹೇಳಿದರು.

ವಿಟಿಯು ಹೊಸ ಪಠ್ಯಕ್ರಮದಲ್ಲಿ ಎಐ, ಕೌಶಲಕ್ಕೆ ಆದ್ಯತೆ

ಮೈಸೆಮ್‌ನಲ್ಲಿ ಪದವೀಧರ ದಿನಾಚರಣೆ, 179 ಮಂದಿಗೆ ಪದವಿ ಪ್ರದಾನ


ಮೈಸೂರು ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ 2025ನೇ ಸಾಲಿನ ಪದವೀಧರ ದಿನಾಚರಣೆಯನ್ನು ವಿಟಿಯು ಡೀನ್, ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಥೆಯ ಅಧ್ಯಕ್ಷ ಬಿ.ಶಿವಪ್ಪ, ಟ್ರಸ್ಟಿ ಕೆ.ಎನ್.ಪುಟ್ಟಬುದ್ಧಿ, ಕಾರ್ಯದರ್ಶಿ ಪ್ರೊ.ಮಂಜುನಾಥ್, ಖಜಾಂಚಿ ಪೂರ್ಣಿಮಾ ಬಿ.ಕಿರಣ್, ಪ್ರಾಂಶುಪಾಲ ಡಾ.ಟಿ.ಎಸ್.ಮಂಜುನಾಥ್ ಇದ್ದಾರೆ.


ಮೈಸೂರು ಕಾಲೇಜ್ ಆಫ್ ಎಂಜಿನಿಯರಿಂಗ್–ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದ ವಿದ್ಯಾರ್ಥಿ ಸಮೂಹವನ್ನು ಕಾಣಬಹುದು.

ಮೈಸೂರು, ಜೂ. 17– ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2025–26ನೇ ಸಾಲಿನ ಹೊಸಪಠ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಹಾಗೂ ಕೌಶಲಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ವಿಟಿಯು ಡೀನ್ ಹಾಗೂ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಹೇಳಿದರು.

ನಗರದ ಟಿ.ನರಸೀಪುರ ರಸ್ತೆಯ ದೊಡ್ಡ ಆಲದಮರದ ಬಳಿ ಇರುವ ಮೈಸೂರು ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್‌ನಲ್ಲಿ (ಮೈಸೆಮ್) ಮಂಗಳವಾರ ಪದವೀಧರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲೆಡೆ ಎಐ ಸದ್ದು ಮಾಡುತ್ತಿದೆ. ಅದಕ್ಕಾಗಿ ನಾವು ಕೂಡ ಅಪ್‌ಡೇಟ್ ಆಗಬೇಕಾಗಿದೆ. ಜೊತೆಗೆ ಥಿಯರಿಗಿಂತ ಕೌಶಲ ಮುಖ್ಯ. ಆದ್ದರಿಂದ ಆ ಕಡೆಗೂ ಗಮನ ಹರಿಸಿದ್ದೇವೆ ಎಂದರು.

ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ 35 ವರ್ಷದೊಳಗಿರುವ ಶೇ.85 ರಷ್ಟು ಜನರ ಕೊಡುಗೆ ಅಪಾರವಾದುದು. ಅಮೆರಿಕಾ, ಚೀನಾ, ಜರ್ಮನಿ ನಂತರ ಭಾರತವು ಆರ್ಥಿಕತೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಪ್ರತಿವರ್ಷ ಜಿಡಿಪಿ ಹೆಚ್ಚುತ್ತಲೇ ಇದೆ ಎಂದು.


19 ವರ್ಷಗಳ ಕಾಲ ಓದಿ ಪದವೀಧರರಾಗಿದ್ದೀರಿ. ಇಲ್ಲಿಗೆ ಓದು ನಿಲ್ಲಿಸಬೇಡಿ. ಕಲಿಕೆ ಎಂಬುದು ನಿರಂತರವಾದುದು. ಅದು ಜೀವನದ ಒಂದು ಭಾಗ. ಸದಾ ಕಲಿಯುತ್ತಿರಬೇಕು ಎಂದು ನೂತನ ಪದವೀಧರರಿಗೆ ಕಿವಿಮಾತು ಹೇಳಿದರು.

ಥಾಮಸ್ ಆಲ್ವಾ ಎಡಿಸನ್ ಬಲ್ಬ್ ಕಂಡು ಹಿಡಿಯಬೇಕಾದರೆ ನೂರು ಸಾರಿ ವಿಫಲನಾಗಿದ್ದ, ನಂತರ ಯಶಸ್ಸು ಸಾಧಿಸಿದ. ಆದ್ದರಿಂದ ಯಶಸ್ಸಿಗೆ ಯಾವುದೇ ಅಡ್ಡದಾರಿ ಹಿಡಿಯದೇ ಮೌಲ್ಯಗಳನ್ನು ಇಟ್ಟುಕೊಂಡು, ಆತ್ಮವಿಶ್ವಾಸವನ್ನು ಹೊಂದಿ ಮುಂದೆ ಸಾಗಿ ಎಂದು ಸಲಹೆ ಮಾಡಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ವೈದ್ಯಕೀಯ ಪದವೀಧರರು ಆರೋಗ್ಯ ಕ್ಷೇತ್ರಕ್ಕೆ ಸೀಮಿತವಾದರೆ ಎಂಜಿನಿಯರಿಂಗ್ ಪದವೀಧರರು ಭೂಮಿಯಿಂದ ಬಾಹ್ಯಾಕಾಶದವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಸಿವಿಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್, ಮೆಕಾನಿಕಲ್, ಕಂಪ್ಯೂಟರ್ ಸೈನ್ಸ್, ಇನ್‌ಫರ್ಮೇಷನ್ ಟೆಕ್ನಾಲಜಿ, ಇಂಡಸ್ಟ್ರೀಯಲ್ ಪ್ರೊಡಕ್ಷನ್ ಸೇರಿದಂತೆ ಎಂಜಿನಿಯರಿಂಗ್‌ನ ಎಲ್ಲಾ ಕೋರ್ಸುಗಳು ದೇಶದ ವಿಜ್ಞಾನ–ತಂತ್ರಜ್ಞಾನ, ಮೂಲಸೌಕರ್ಯ, ಕೈಗಾರಿಕಾ ಕ್ಷೇತ್ರಕ್ಕೆ ಬಹು ಮುಖ್ಯವಾದವು. ದೇಶದ ಅಭಿವೃದ್ಧಿಗೆ ಪೂರಕವಾದವು ಎಂದು ಹೇಳಿದರು.

ಜೆವಿಎಸ್‌ಎಂ ಸಂಸ್ಥೆಯ ಅಧ್ಯಕ್ಷ ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟಿ ಹಾಗೂ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ, ಕಾರ್ಯದರ್ಶಿ ಪ್ರೊ.ಮಂಜುನಾಥ್, ಖಜಾಂಚಿ ಪೂರ್ಣಿಮಾ ಕಿರಣ್ ಉಪಸ್ಥಿತರಿದ್ದರು. ಪ್ರಾಂಶುಪಾಲ ಡಾ.ಮಂಜುನಾಥ್ ಸ್ವಾಗತಿಸಿದರು. ವಿಜಯಶ್ರೀ ನಿರೂಪಿಸಿದರು. ಕಾವ್ಯಾ ಪ್ರಾರ್ಥಿಸಿದರು. ಅಶ್ವಿನಿ ಅತಿಥಿಗಳನ್ನು ಪರಿಚಯಿಸಿದರು. 2025ನೇ ಸಾಲಿನಲ್ಲಿ ಪದವಿ ಪೂರೈಸಿದ 179 ವಿದ್ಯಾರ್ಥಿಗಳಿಗೂ ಪ್ರಮಾಣಪತ್ರ ವಿತರಿಸಲಾಯಿತು. ಅತಿ ಹೆಚ್ಚು ಅಂಕಗಳನ್ನು ಪಡೆದವರಿಗೆ ನಗದು ಬಹುಮಾನ ನೀಡಲಾಯಿತು.

ಇಂದು, ನಾಳೆ ವಿದ್ಯುತ್ ವ್ಯತ್ಯಯ



ಮೈಸೂರು,ಜೂ.17– ಜೂನ್ 18ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಕಾಮಗಾರಿ ನಿಮಿತ್ತ ಮರಡಿಹುಂಡಿ, ತುಂಬನೇರಳೆ, ಮಹದೇವನಹುಂಡಿ, ಹೊಸಕೋಟೆ, ನಂದಗುಂದ, ನಂದಕುಂದಪುರ, ಕಡವೆಕಟ್ಟೆಹುಂಡಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹಾಗೆಯೇ ಜೂನ್ 19ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿಜಯನಗರ 2ನೇ ಹಂತ, ಸ್ನೇಕ್ ಶ್ಯಾಮ್ ರಸ್ತೆ, ಹಂಪಿ ಸರ್ಕಲ್, ಕೆ.ಡಿ ಸರ್ಕಲ್, ಹೊಯ್ಸಳ ಸರ್ಕಲ್, ರೈಲ್ವೇ ಬಡಾವಣೆ, ವಿಜಯನಗರ ವಾಟರ್ ಟ್ಯಾಂಕ್ ಸರ್ಕಲ್, ಪೊಲೀಸ್ ಸ್ಟೇಷನ್ ಏರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗಲಿದೆ. ಜೂನ್ 19 ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಗುಂಡೂರಾವ್ ನಗರ, ಮುನೇಶ್ವರನಗರ, ಗೌರಿಶಂಕರನಗರ, ಜಾಕಿ ಕ್ವಾಟ್ರಸ್, ಚಾಮುಂಡಿಬೆಟ್ಟ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.17–ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಎನ್‌ಆರ್ ಮೊಹಲ್ಲಾ, ಮೈಸೂರು, ಇಲ್ಲಿನ 2025–26ನೇ ಸಾಲಿನ ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಹಾಗೂ 8ನೇ ತರಗತಿ ಪಾಸಾದ (10ನೇ ತರಗತಿ ಫೇಲ್ ಆದ ಅಭ್ಯರ್ಥಿಗಳು) ವೆಲ್ಡರ್ ವೃತ್ತಿಗೆ ಅವಕಾಶವಿರುತ್ತದೆ. ಮೆರಿಟ್ ಆಧಾರದಲ್ಲಿ ಪ್ರಾಚಾರ್ಯರ ಹಂತದಲ್ಲಿಯೇ ಆಫ್‌ಲೈನ್ (ನೇರ ಪ್ರವೇಶ) ಪ್ರವೇಶ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳಿಗೆ ಐಟಿಐಗೆ ನೇರವಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, (ಐಟಿಐ) ಎನ್ ಆರ್ ಮೊಹಲ್ಲಾ, ಮೈಸೂರು–7 ಅನ್ನು ನೇರವಾಗಿ ಅಥವಾ ದೂರವಾಣಿ ಸಂ: 0821–2498456/ 9945616088 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ದರ್ಜೆ–1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕುಮುಕ್ತ ವಲಯ ಜಾಗೃತಿ ಮೂಡಿಸಿದ ಗೋಡೆ ಬರಹ!

ಮೈಸೂರು, ಜೂ.17– ಮೈಸೂರು ನಗರದ ಹೆಬ್ಬಾಳ್ ಕಾಲೋನಿಯ ಬಸವನಗುಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಗೋಡೆಯ ಮೇಲೆ ತಂಬಾಕು ಮುಕ್ತ ವಲಯ ಜಾಗೃತಿ ಸಂದೇಶ ಬರೆಸುವ ಮೂಲಕ ಶಾಲೆಯ ಶಿಕ್ಷಕ ದತ್ತಾತ್ರೇಯ ಜನರಲ್ಲಿ ಅರಿವು ಮೂಡಿಸಿದ್ದಾರೆ.



ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಜಾಹೀರಾತು ಮತ್ತು ವ್ಯಾಪಾರ ಹಾಗೂ ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆ ನಿಷೇಧ ನಿಯಂತ್ರಣ ಕಾಯಿದೆ, 2003ರ ಪ್ರಕಾರ ಶಾಲೆಯ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ತಂಬಾಕು ಉತ್ಪನ್ನವನ್ನು ಕಾನೂನುಬಾಹಿರ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಶಿಕ್ಷಕ ದತ್ತಾತ್ರೇಯ ಹೇಳುವುದರ ಜೊತೆಗೆ ತಮ್ಮ ನೇತೃತ್ವದಲ್ಲಿ ವರ್ಣಚಿತ್ರಕಾರ ಶಿವರಾಮು ಆರ್ಟ್ಸ್ ಗುರು ಅವರಿಂದ ಶಾಲೆಯ ಗೋಡೆಯ ಮೇಲೆ ಬರೆಸಿದ್ದು ಅದು ಈಗ ಜನರಲ್ಲಿ ಎಚ್ಚರಿಕಾ ಸಂದೇಶದಂತಿದೆ. ಶಿಕ್ಷಕರ ಈ ಕ್ರಮವನ್ನು ಸ್ಥಳೀಯ ಜನರು ಪ್ರಶಂಸಿಸಿದ್ದಾರೆ.

ಪರಿವರ್ತನ ಬಿಸಿನೆಸ್ ಸ್ಕೂಲ್‌ನಲ್ಲಿ ಪಿಜಿಸಿಇಟಿ ಉಚಿತ ತರಬೇತಿ ಆರಂಭ


ಪರಿವರ್ತನ ಬಿಸಿನೆಸ್ ಸ್ಕೂಲ್‌ನಲ್ಲಿ ಪಿಜಿಸಿಇಟಿ ಉಚಿತ ತರಬೇತಿಗೆ ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟೇಗೌಡ ಚಾಲನೆ ನೀಡಿದರು.

ಮೈಸೂರು, ಜೂ. 17– ಓಂ ಶ್ರೀನಿಕೇತನ ಟ್ರಸ್ಟ್ ಅಡಿಯಲ್ಲಿ ಪ್ರಾರಂಭವಾಗಿರುವ ಪರಿವರ್ತನ ಬಿಸಿನೆಸ್ ಸ್ಕೂಲ್, ಕರ್ನಾಟಕದಲ್ಲಿ ಎಂಬಿಎ ಮತ್ತು ಎಂಸಿಎ ಸೇರಿದಂತೆ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ (ಪಿಜಿಸಿಇಟಿ)ಗೆ ತಯಾರಿ ನಡೆಸುತ್ತಿರುವ ಆಕಾಂಕ್ಷಿಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಉಚಿತ ಪಿಜಿಸಿಇಟಿ ತರಬೇತಿ ಆಯೋಜಿಸಲಾಗಿತ್ತು.


ಓಂ ಶ್ರೀನಿಕೇತನ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಪುಟ್ಟೇಗೌಡ ತರಬೇತಿ ಶಿಬಿರ ಉದ್ಘಾಟಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ರಚನಾತ್ಮಕ ಸಿದ್ಧತೆಯ ಮಹತ್ವವನ್ನು ಒತ್ತಿ ಹೇಳಿದರು.

ತರಬೇತಿ ಕಾರ್ಯಕ್ರಮವು ಬಿ.ಕಾಂ, ಬಿಬಿಎ, ಬಿಸಿಎ ಮತ್ತು ಬಿಎಸ್ಸಿ ಅಂತಿಮ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಿದೆ. ಉನ್ನತ ಶಿಕ್ಷಣ ಪಡೆಯಲು ಇಚ್ಛಿಸುವ ಆಕಾಂಕ್ಷಿಗಳಿಗೆ ಈ ಕಾಲೇಜಿನಲ್ಲಿ 14 ದಿನಗಳ ಉಚಿತ ತರಬೇತಿ ತರಗತಿಯನ್ನು ನಡೆಸಲು ತೀರ್ಮಾನಿಸಲಾಗಿದೆ. ಇದರ ಉದ್ದೇಶ ಸಮಗ್ರ ಅಧ್ಯಯನ ಕಾರ್ಯಕ್ರಮ, ತಜ್ಞರ ಮಾರ್ಗದರ್ಶನ ಮತ್ತು ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಯಶಸ್ವಿಯಾಗಲು ಸಹಾಯ ಮಾಡುವ ತಂತ್ರಗಳನ್ನು ಒದಗಿಸುವುದು. ಒಟ್ಟು 127 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ಪರಿವರ್ತನ ಬಿಸಿನೆಸ್ ಸ್ಕೂಲ್‌ನ ನಿರ್ದೇಶಕ ಪ್ರೊ.ರಾಮು, ಪರೀಕ್ಷೆಯ ಸಮಯದಲ್ಲಿ ಬಳಸಬಹುದಾದ ಕೆಲವು ವಿಧಾನಗಳು ಮತ್ತು ತಂತ್ರಗಳನ್ನು ಹಂಚಿಕೊಂಡರು. ಪರಿವರ್ತನ ಕಾನೂನು ಶಾಲೆಯ ನಿರ್ದೇಶಕ ಪ್ರೊ. ವಾಸುದೇವ್ ಮತ್ತು ಪರಿವರ್ತನ ಬಿಸಿನೆಸ್ ಸ್ಕೂಲ್‌ನ ಪ್ರಾಂಶುಪಾಲ ಡಾ.ಕೃಷ್ಣ ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮವು; ಆಪ್ಟಿಟ್ಯೂಡ್, ಲಾಜಿಕಲ್ ರೀಸನಿಂಗ್, ಡೇಟಾ ಇಂಟರ್ಪ್ರಿಟೇಷನ್, ಕಂಪ್ಯೂಟರ್ ಅವೇರ್ನೆಸ್, ವರ್ಬಲ್ ಎಬಿಲಿಟಿ, ಜನರಲ್ ಅವೇರ್ನೆಸ್, ಗಣಿತ ಮತ್ತು ಜನರಲ್ ಇಂಗ್ಲಿಷ್ ವಿಷಯಗಳನ್ನು ಸಹ ಬೋಧಿಸಲಾಯಿತು. ಪಿಜಿಸಿಇಟಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡಲು ಕೇಂದ್ರೀಕೃತ ತರಬೇತಿ, ಅಧ್ಯಾಪಕರ ಮಾರ್ಗದರ್ಶನ ಮತ್ತು ಅಣಕು ಪರೀಕ್ಷಾ ಬೆಂಬಲವನ್ನು ಒದಗಿಸುವ ಗುರಿಯನ್ನು ತರಬೇತಿ ತರಗತಿಗಳು ಹೊಂದಿವೆ. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದು ಶೈಕ್ಷಣಿಕ ಅಂಗವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನವಾಗಲಿದೆ.

ಈಜು ಸ್ಪರ್ಧೆಯಲ್ಲಿ ಪದಕ ವಿಜೇತರು


ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಈಜುಕೊಳದಲ್ಲಿ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಈಜು ಸ್ಪರ್ಧೆಯಲ್ಲಿ ಕಾಸ್ಮೋಪಾಲಿಟನ್ ಕ್ಲಬ್‌ನಿಂದ ಸ್ಪರ್ಧಿಸಿದ್ದ ಅಮೋಘವರ್ಷ ಹೆಚ್. ಅವರು 50 ಮೀಟರ್ ಬೆಸ್ಟ್ ಸ್ಟ್ರೋಕ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಟಿ.ಎಸ್.ಪ್ರದೀಪ್ ಕಶ್ಯಪ್ ಅವರು 500 ಮೀಟರ್ಸ್ ಬಟರ್‌ಫ್ಲೈ ಹಾಗೂ 500 ಮೀಟರ್ ಬ್ಯಾಕ್ ಸ್ಟ್ರೋಕ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

'ಪ್ರಸಾದ' ಲೇಖನ ಸ್ಪರ್ಧೆ

ಮೈಸೂರು, ಜೂ. 17– ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಪ್ರಯುಕ್ತ ಕಳೆದ 13 ವರ್ಷಗಳಿಂದ ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಸಾದ ಲೇಖನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. 2024–25ನೇ ಸಾಲಿನಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಮಡಿಕೇರಿ ಜಿಲ್ಲೆಗಳ (ಪದವಿಪೂರ್ವ, ಪದವಿ, ಸ್ನಾತಕೋತ್ತರ ಕೇಂದ್ರಗಳು) ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಕೃತಕ ಬುದ್ಧಿಮತ್ತೆ ಮತ್ತು ಶಿಕ್ಷಣ ವಿಷಯ ಕುರಿತು ಲೇಖನ ಸ್ಪರ್ಧೆ ಏರ್ಪಡಿಸಿದೆ. ಈ ಸಾಲಿನಿಂದ ಪ್ರಶಸ್ತಿ ನೀಡಿಕೆಯನ್ನು ಪದವಿಪೂರ್ವ, ಪದವಿ, ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರತ್ಯೇಕವಾಗಿ ನೀಡಲಾಗುತ್ತದೆ. ಲೇಖನ ಸ್ವಂತದ್ದಾಗಿದ್ದು 6ರಿಂದ 8 ಪುಟಗಳಷ್ಟು ವಿಸ್ತಾರವಾಗಿರಬೇಕು. ಲೇಖನ ಕಳುಹಿಸುವ ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಮುಖ್ಯಸ್ಥರಿಂದ ಫೋಟೋ ಸಮೇತ ತಮ್ಮ ಹೆಸರನ್ನು ದೃಢೀಕರಿಸಿರಬೇಕು. ಪ್ರತಿ ಕಾಲೇಜಿನಿಂದ ಗರಿಷ್ಠ ಮೂರು ಲೇಖನಗಳನ್ನು ಮಾತ್ರ ಜುಲೈ 16ರೊಳಗೆ ನಿರ್ದೇಶಕರು, ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004 ಇಲ್ಲಿಗೆ ಕಳುಹಿಸಬೇಕಿದೆ. ಹೆಚ್ಚಿನ ಮಾಹಿತಿಗಾಗಿ (0821–2548211/ 223 ಮತ್ತು 2548212/224) ಸಂಪರ್ಕಿಸಬಹುದು.

ಪಡಿತರ ಚೀಟಿದಾರರು e-Kyc ಮಾಡಿಸಲು ಜೂ.30ರ ಗಡುವು



ಮೈಸೂರು,ಜೂ.17–ರೇಷನ್ ಕಾರ್ಡ್ ಹೊಂದಿದ ಪಡಿತರ ಚೀಟಿದಾರರು ತಮ್ಮ ಕುಟುಂಬದ ಎಲ್ಲಾ ಸದಸ್ಯರ ಇ–ಕೆವೈಸಿ (e-Kyc ಆಧಾರ್ ಆಧಾರಿತ ಹೆಬ್ಬೆಟ್ಟಿನ ದೃಢೀಕರಣ) ಮಾಡಿಸುವುದು ಕಡ್ಡಾಯ. ಮೈಸೂರು ಜಿಲ್ಲೆಯಲ್ಲಿ ಒಟ್ಟು–23,00,380 ಸದಸ್ಯರ ಪೈಕಿ 47, 334 ಸದಸ್ಯರು e-Kyc ಮಾಡಿಸಲು ಬಾಕಿ ಇದೆ. ಇ–ಕೆವೈಸಿ ಆಗಿರದ ಸದಸ್ಯರ ಪಟ್ಟಿಯನ್ನು ನ್ಯಾಯಬೆಲೆ ಅಂಗಡಿ ಮುಂದೆ ಪ್ರದರ್ಶನ ಮಾಡಿದ್ದು, ಪಡಿತರ ಚೀಟಿಯಲ್ಲಿ e-Kyc ಮಾಡಿಸದ ಸದಸ್ಯರಿಗೆ ಜೂ.30ರವರೆಗೆ ಕೊನೆ ಅವಕಾಶ ನೀಡಲಾಗಿದೆ. ಮೈಸೂರು ಜಿಲ್ಲೆಯ ಪಡಿತರ ಚೀಟಿದಾರರ ಪೈಕಿ ಈವರೆಗೆ ಇ–ಕೆವೈಸಿ ಮಾಡಿಸಿರದ ಕುಟುಂಬದ ಸದಸ್ಯರು ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಪಡಿತರ ಚೀಟಿ, ಜಾತಿ ಪ್ರಮಾಣ ಪತ್ರ(ಎಸ್.ಸಿ, ಎಸ್.ಟಿ ಯವರಾಗಿದ್ದಲ್ಲಿ ಮಾತ್ರ), ಗ್ಯಾಸ್ ಕನೆಕ್ಷನ್ ಪುಸ್ತಕ, ಆಧಾರ್ ದಾಖಲೆಗಳೊಂದಿಗೆ ತೆರಳಿ ಬಯೋ ದೃಢೀಕರಣ ನೀಡಲು ತಿಳಿಸಲಾಗಿದ್ದು, ಈ ಆಧಾರ್ ದೃಢೀಕರಣ (e-Kyc) ಮಾಡಿಸುವುದು ಸಂಪೂರ್ಣವಾಗಿ ಉಚಿತವಾಗಿರುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.17–ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಶಾಲೆಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ಪೂರ್ವ (1ರಿಂದ 10ನೇ ತರಗತಿ) ವಿದ್ಯಾರ್ಥಿವೇತನಕ್ಕೆ 2025–26ನೇ ಸಾಲಿಗೆ ಎಸ್.ಎಸ್.ಪಿ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಇದುವರೆಗೂ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು, ಹೊಸ ವಿದ್ಯಾರ್ಥಿಗಳು ಮತ್ತು 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳು ಕಡ್ಡಾಯವಾಗಿ ಹೊಸದಾಗಿ ವಿದ್ಯಾರ್ಥಿವೇತನಕ್ಕೆ ವೆಬ್‌ಸೈಟ್ https://ssp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಕಚೇರಿ ಮೈಸೂರು ತಾಲೂಕು, ನಂ.40. ಶ್ರೀ.ಮಹರ್ಷಿ ವಾಲ್ಮೀಕಿ ಭವನ, ಕರ್ನಾಟಕ ಗ್ರಾಮೀಣ ಬ್ಯಾಂಕ್ (ಕೇಂದ್ರ ಕಚೇರಿ) ಎದುರು, ವಿಜಯನಗರ, 2ನೇ ಹಂತ ಮೈಸೂರು. ದೂ.ಸಂ: 0821–2543076/ 8105763300 ಹಾಗೂ ಇ–ಮೇಲ್ ttwomys@gmail.com ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇಶ – ವಿದೇಶ

ನೇರ ಪ್ರಸಾರದ ವೇಳೆ ಇರಾನ್ ಟಿವಿ ಚಾನೆಲ್ ಕಟ್ಟಡಕ್ಕೆ ಬಡಿದ ಇಸ್ರೇಲ್ ಕ್ಷಿಪಣಿ




ಟೆಹರಾನ್: ಇಸ್ರೇಲ್ ಹಾಗೂ ಇರಾನ್ ನಡುವಣ ಸಂಘರ್ಷ 4ನೇ ದಿನಕ್ಕೆ ಕಾಲಿಟ್ಟಿದ್ದು, ಸೋಮವಾರ ನೇರ ಪ್ರಸಾರ ಮಾಡುತ್ತಿದ್ದ ಇರಾನ್‌ನ ಟಿವಿ ಚಾನೆಲ್‌ನ ಕಾಂಪೌಂಡ್‌ಗೆ ಇಸ್ರೇಲ್‌ನ ಕ್ಷಿಪಣಿ ಬಡಿದಿದೆ. ಇದರ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಆ ಸಮಯದಲ್ಲಿ ಸುದ್ದಿಗಳನ್ನು ಓದುತ್ತಿದ್ದ ನ್ಯೂಸ್ ಆಂಕರ್ ಸಹಾರ್ ಇಮಾಮಿ, ನಡುಗುತ್ತಿದ್ದಂತೆ ಕಂಡುಬಂದ ಸ್ಟುಡಿಯೋದಲ್ಲಿನ ತನ್ನ ಸೀಟಿನಿಂದ ಥಟ್ಟನೆ ಏಳುವಂತೆ ಕಾಣಿಸುತ್ತದೆ. ತದನಂತರ ಆಕೆ ಅಲ್ಲಿಂದ ಪರಾರಿಯಾಗುವಾಗ ಅಲ್ಲಾಹು ಅಕ್ಬರ್ ಘೋಷಣೆಗಳು ಪ್ರತಿಧ್ವನಿಸುತ್ತವೆ. ಈ ಇಡೀ ದೃಶ್ಯಗಳು ವಿಡಿಯೋದಲ್ಲಿ ಸೆರೆಯಾಗಿವೆ. ಇರಾನ್ ಆಡಳಿತದ ಮಿಲಿಟರಿ ಮೂಲಸೌಕರ್ಯವನ್ನು ಗುರಿಯಾಗಿಟ್ಟುಕೊಂಡ ಯೋಜಿತ ವಾಯುದಾಳಿಗೂ ಮುನ್ನ ಇಸ್ರೇಲ್ ಎಚ್ಚರಿಕೆ ನೀಡಿತ್ತು. ಟೆಹರಾನ್‌ನ ಉತ್ತರ ಜಿಲ್ಲೆ 3ರ ಸ್ಥಳಾಂತರವನ್ನು ದೃಢಪಡಿಸಿತ್ತು. ಇದು ಟೆಹರಾನ್‌ನ ಉನ್ನತ, ಕಾರ್ಯತಂತ್ರದ ಭಾಗವಾಗಿದೆ. ಇರಾನ್‌ನ ಪ್ರಸಾರ ಸಂಸ್ಥೆ IRIB, ನಾಲ್ಕು ಆಸ್ಪತ್ರೆಗಳು, ದೊಡ್ಡ ಪೊಲೀಸ್ ಕಟ್ಟಡಗಳು, ಕತಾರ್, ಒಮನ್ ಮತ್ತು ಕುವೈತ್‌ನ ರಾಯಭಾರ ಕಚೇರಿಗಳು ಮತ್ತು ವಿಶ್ವಸಂಸ್ಥೆ ಕಚೇರಿಗಳು ಇಲ್ಲಿವೆ. ಟೆಹರಾನ್‌ನಲ್ಲಿ ಈಗಾಗಲೇ ಸ್ಥಳಾಂತರ ನಡೆಯುತ್ತಿದೆ.

ಗಂಡ ಸಾಲ ವಾಪಸ್ ಕೊಡದಿದ್ದಕ್ಕೆ ಹೆಂಡತಿಯನ್ನ ಮರಕ್ಕೆ ಕಟ್ಟಿದ ಕಟುಕ



ಚಿತ್ತೂರು: ಗಂಡ ಸಾಲ ವಾಪಸ್ ಕೊಡದಿದ್ದಕ್ಕೆ ಹೆಂಡತಿಯನ್ನು ಮರಕ್ಕೆ ಕಟ್ಟಿಹಾಕಿ ಚಿತ್ರಹಿಂಸೆ ಕೊಟ್ಟಿರುವ ಘಟನೆ ಚಿತ್ತೂರಿನ ನಾರಾಯಣಪುರಂನಲ್ಲಿ ನಡೆದಿದೆ. ಸಿರಿಶಾ ಎಂಬ ಮಹಿಳೆ ತನ್ನ ಮಗುವಿನ ಟಿಸಿ ಪಡೆಯಲು ಗ್ರಾಮಕ್ಕೆ ಹಿಂತಿರುಗಿದ್ದಾಗ ಸಾಲಕೊಟ್ಟ ಮುನಿಕಣ್ಣಪ್ಪ ಗಮನಿಸಿದ್ದಾನೆ. ಸಿರಿಶಾ ಪತಿ ತಿಮ್ಮರಾಯಪ್ಪ 3 ವರ್ಷದ ಹಿಂದೆ ಮುನಿಕಣ್ಣಪ್ಪನಿಂದ 80,000 ರೂ. ಸಾಲ ಪಡೆದಿದ್ದ. ಸಾಲ ಮರು ಪಾವತಿಸಲು ಸಾಧ್ಯವಾಗದೆ ದಂಪತಿ ತಮ್ಮ ಮಕ್ಕಳೊಂದಿಗೆ ಕುಪ್ಪಂ ಮಂಡಲದ ನಾರಾಯಣಪುರಂ ಗ್ರಾಮ ತೊರೆದಿದ್ದರು. ಆಕೆಯನ್ನು ನೋಡಿದ ಕೂಡಲೇ ಮುನಿಕಣ್ಣಪ್ಪ ನಿಂದಿಸಿ, ಬೇವಿನಮರಕ್ಕೆ ಎಳೆದು ತಂದು, ಹಗ್ಗಗಳಿಂದ ಕಟ್ಟಿ, ಥಳಿಸಿದ್ದಾನೆ. ಸಾಲ ಪಾವತಿಸದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ. ಘಟನೆಯನ್ನು ವೀಕ್ಷಿಸಿದವರು ವಿಡಿಯೋದಲ್ಲಿ ದಾಖಲಿಸಲು ಪ್ರಯತ್ನಿಸಿದಾಗ, ಅವರ ಮೇಲೂ ಹಲ್ಲೆ ನಡೆಸಿದ್ದಾನೆ. ಸ್ಥಳೀಯ ಪೊಲೀಸರು ಮುನಿಕಣ್ಣಪ್ಪನನ್ನು ಬಂಧಿಸಿದ್ದಾರೆ. ಘಟನೆ ಸಂಬಂಧ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವಂತೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪೊಲೀಸರಿಗೆ ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ.

500 ರೂ. ನೋಟುಗಳ ಬಂಡಲ್ ಎಗರಿಸಿದ ಹನುಮಂತ



ಚೆನ್ನೈ: ಇತ್ತೀಚೆಗೆ ವೃಂದಾವನದಲ್ಲಿ ಕೋತಿಗಳು ಭಕ್ತರ ವಸ್ತುಗಳನ್ನು ಕಸಿದುಕೊಂಡು ಫ್ರೂಟಿ ಕುಡಿದ ನಂತರವೇ ಅವುಗಳನ್ನು ಹಿಂದಿರುಗಿಸಿದ ಘಟನೆ ಎಲ್ಲ ಕಡೆ ಸುದ್ದಿಯಾಗಿತ್ತು. ಇದೀಗ ತಮಿಳುನಾಡಿನ ಜನಪ್ರಿಯ ಪ್ರವಾಸಿ ತಾಣವಾದ ಕೊಡೈಕೆನಾಲ್‌ನಲ್ಲಿ ಕೋತಿಯೊಂದು ಪ್ರವಾಸಿಗರಿಂದ 500 ರೂ. ನೋಟುಗಳ ಬಂಡಲ್ ಅನ್ನು ಕಸಿದುಕೊಂಡು ಹೋಗಿ ಹತ್ತಿರದ ಮರ ಏರಿ ಕುಳಿತಿದೆ. ಅಷ್ಟೇ ಅಲ್ಲದೇ ಆ ಕೋತಿ ಒಂದರ ನಂತರ ಒಂದರಂತೆ ನೋಟುಗಳನ್ನು ಹೊರತೆಗೆದಿದೆ. ಇದರಿಂದಾಗಿ ಕೋತಿ ಕೈಯಿಂದ ಜಾರಿದ ನೋಟುಗಳು ಎಲ್ಲಾ ಕಡೆ ಹರಿದಾಡಿದೆ. ಈ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗಿದೆ. ವೈರಲ್ ವಿಡಿಯೊದಲ್ಲಿ ಕೋತಿಯು ಕದ್ದ ಹಣದ ಬಂಡಲ್ ಅನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ನಂತರ ಅದನ್ನು ಒಂದೊಂದಾಗಿ ತೆಗೆಯುವುದು ಸೆರೆಯಾಗಿದೆ. ಕೊಡೈಕೆನಾಲ್‌ನ ಗುಣ ಗುಹೆಯ ಬಳಿ ಈ ಘಟನೆ ನಡೆದಿದೆ. ಕರ್ನಾಟಕ ಮೂಲದ ಪ್ರವಾಸಿಗರಿಂದ ಕೋತಿ ಹಣವನ್ನು ಕದ್ದಿದ್ದು, ಇದರಿಂದ ಹಣದ ಮಾಲೀಕ ಚಿಂತೆಗೀಡಾಗಿದ್ದಾನಂತೆ. ಈ ಪ್ರದೇಶದಲ್ಲಿನ ಕೋತಿಗಳನ್ನು ಹಿಡಿದು ದಟ್ಟವಾದ ಕಾಡಿಗೆ ಕರೆದೊಯ್ಯಬೇಕು ಎಂದು ಪ್ರವಾಸಿಗರು ವಿನಂತಿ ಮಾಡಿದ್ದಾರೆ.

ಅಮರನಾಥ ಯಾತ್ರೆಯ ಮಾರ್ಗಗಳು ಇನ್ನು 'ಹಾರಾಟ ನಿಷೇಧ ವಲಯ'



ಶ್ರೀನಗರ: ವಾರ್ಷಿಕ ಯಾತ್ರೆಗಾಗಿ ಬಿಗಿ ಭದ್ರತಾ ಕ್ರಮಗಳ ಭಾಗವಾಗಿ ಜಮ್ಮು– ಕಾಶ್ಮೀರ ಸರ್ಕಾರ ಮಂಗಳವಾರ ಅಮರನಾಥ ಯಾತ್ರೆಯ ಮಾರ್ಗಗಳನ್ನು 'ಹಾರಾಟ ನಿಷೇಧ ವಲಯ'ಎಂದು ಘೋಷಿಸಿದೆ. ಅಮರನಾಥ ಯಾತ್ರೆಯು ಎರಡು ಮಾರ್ಗಗಳನ್ನು ಹೊಂದಿದೆ. ಸಾಂಪ್ರದಾಯಿಕ ಪಹಲ್ಗಾಮ್ ಮಾರ್ಗ ಮತ್ತು ಕಡಿಮೆ ಅಂತರದ ಬಾಲ್ಟಾಲ್ ಮಾರ್ಗ. ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಆದೇಶದ ಮೇರೆಗೆ ಜಮ್ಮು–ಕಾಶ್ಮೀರ ಗೃಹ ಇಲಾಖೆ ಹೊರಡಿಸಿದ ಪ್ರಕಟಣೆಯಲ್ಲಿ, ಯುಎವಿಗಳು(ಮಾನವ ರಹಿತ ವೈಮಾನಿಕ ವಾಹನ), ಡ್ರೋನ್‌ಗಳು, ಬಲೂನ್‌ಗಳು ಸೇರಿದಂತೆ ಯಾವುದೇ ರೀತಿಯ ವಾಯುಯಾನ ಸಾಧನಗಳನ್ನು ಹಾರಿಸುವುದನ್ನು ಜುಲೈ 1ರಿಂದ ಆಗಸ್ಟ್ 10ರವರೆಗೆ ನಿಷೇಧಿಸಲಾಗಿದೆ. ಆದರೂ, ವೈದ್ಯಕೀಯ ಸ್ಥಳಾಂತರಿಸುವಿಕೆ, ವಿಪತ್ತು ನಿರ್ವಹಣೆ ಮತ್ತು ಭದ್ರತಾ ಪಡೆಗಳ ಕಣ್ಗಾವಲು ಕಾರ್ಯಗಳಲ್ಲಿ ನಿರ್ಬಂಧಗಳು ಅನ್ವಯಿಸುವುದಿಲ್ಲ. ಅಂತಹ ವಿನಾಯಿತಿಗಳಿಗಾಗಿ ವಿವರವಾದ ಎಸ್‌ಒಪಿಯನ್ನು ನಂತರ ನೀಡಲಾಗುವುದು. ಜುಲೈ 3ರಿಂದ ನಿಗದಿಯಾಗಿರುವ ಅಮರನಾಥ ಯಾತ್ರೆಯನ್ನು ಸುಗಮ ಮತ್ತು ಶಾಂತಿಯುತವಾಗಿ ನಡೆಸಲು ವಿವಿಧ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತಕ್ಷಣ ಇರಾನ್ ತೊರೆಯಲು ಭಾರತೀಯರಿಗೆ ಸಲಹೆ



ಟೆಹ್ರಾನ್: ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ತೀವ್ರಗೊಂಡಿರುವುದರಿಂದ ಟೆಹ್ರಾನ್‌ನಲ್ಲಿರುವ ಎಲ್ಲಾ ಭಾರತೀಯ ಪ್ರಜೆಗಳು ತಕ್ಷಣವೇ ಭಾರತದ ರಾಯಭಾರ ಕಚೇರಿ ಸಂಪರ್ಕಿಸಿ ತಮ್ಮ ಸ್ಥಳ ಮತ್ತು ಸಂಪರ್ಕ ಸಂಖ್ಯೆಗಳನ್ನು ನೀಡುವಂತೆ ಕೋರಲಾಗಿದೆ. ತಮ್ಮ ಸ್ವಂತ ಸಂಪನ್ಮೂಲಗಳನ್ನು ಬಳಸಿಕೊಂಡು ಟೆಹ್ರಾನ್‌ನಿಂದ ಹೊರ ಹೋಗಬಹುದಾದ ಎಲ್ಲಾ ಭಾರತೀಯ ಪ್ರಜೆಗಳು ಮತ್ತು ಪಿಐಒಗಳು ನಗರದ ಹೊರಗಿನ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಭಾರತೀಯ ಮಿಷನ್ ಸಲಹೆ ನೀಡಿದೆ. ಟೆಹ್ರಾನ್‌ನಲ್ಲಿರುವ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರದ ಎಲ್ಲಾ ಭಾರತೀಯ ಪ್ರಜೆಗಳು ತಕ್ಷಣವೇ ಟೆಹ್ರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯನ್ನು ಸಂಪರ್ಕಿಸಿ, ಅವರ ಸ್ಥಳ ಮತ್ತು ಸಂಪರ್ಕ ಸಂಖ್ಯೆಗಳನ್ನು ಒದಗಿಸುವಂತೆ ಕೋರಲಾಗಿದೆ. ದಯವಿಟ್ಟು ಸಂಪರ್ಕಿಸಿ: +989010144557; +989128109115; +989128109109 ಎಂದು ಟೆಹ್ರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಎಕ್ಸ್‌ನ ಪೋಸ್ಟ್‌ನಲ್ಲಿ ತಿಳಿಸಿದೆ. ಅಂದಹಾಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ತಮ್ಮ ದೇಶವಾಸಿಗಳಿಗೆ ಟೆಹ್ರಾನ್‌ನಿಂದ ತವರಿಗೆ ಮರಳುವಂತೆ ಸೂಚಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 18 ಜೂನ್ 2025

ಹಾರಂಗಿ: ಹಾಲಿನ ನೊರೆಯಂತೆ ಧುಮ್ಮಿಕ್ಕುತ್ತಿರುವ ನೀರು



18 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆ

ಕುಶಾಲನಗರ, ಜೂ.17– ಹಾರಂಗಿ ಜಲಾಶಯಕ್ಕೆ ಒಳಹರಿವಿನಲ್ಲಿ ಗಣನೀಯ ಏರಿಕೆ ಕಂಡು ಬಂದ ಹಿನ್ನೆಲೆಯಲ್ಲಿ ಮಧ್ಯಾಹ್ನ 18 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಬಿಡಲಾಗಿದೆ.

ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ತೀವ್ರಗೊಂಡಿದ್ದು, ಜಲಾಶಯ ದಿಂದ ಹೆಚ್ಚಿನ ನೀರನ್ನು ಹರಿಸಿದಾಗ ನೀರು ಹಾಲಿನ ನೊರೆಯಂತೆ ಧುಮ್ಮಿಕ್ಕುತ್ತಿರುವ ನಯನ ಮನೋಹರ ದೃಶ್ಯ ಪ್ರವಾಸಿಗರ ಮನ ಸೆಳೆದಿದೆ. ಕಣಿವೆ ರಾಮಲಿಂಗೇಶ್ವರ ದೇವಾಲಯ ಬಳಿ ಹಾರಂಗಿ ಹಾಗೂ ಕಾವೇರಿ ನದಿಗಳು ಸಂಗಮಗೊಂಡು ಹರಿಯುತ್ತಿದ್ದು, ನದಿಯ ನೀರಿನ ಮಟ್ಟದಲ್ಲಿ ಏರಿಕೆ ಕಂಡುಬಂದಿದೆ.ನದಿಗೆ ಅಡ್ಡವಾಗಿ ತೂಗು ಸೇತುವೆ ನಿರ್ಮಾಣ ಮಾಡಲಾಗಿದ್ದು, ಸೇತುವೆ ಬಳಿ ಜನರು ನೀರು ಹರಿವಿನ ದೃಶ್ಯವನ್ನು ವೀಕ್ಷಣೆ ಮಾಡುತ್ತಿರುವುದು ಕಂಡು ಬಂದಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಹಳ್ಳ, ಕೊಳ್ಳಗಳಲ್ಲಿ ನೀರಿನ ಹರಿವು ಏರತೊಡಗಿದೆ.

ಕೆರೆಗಳಲ್ಲಿಯೂ ಕೂಡ ನೀರಿನ ಮಟ್ಟದಲ್ಲಿ ಹೆಚ್ಚಳ ಕಂಡುಬಂದಿದ್ದು, ಗದ್ದೆಗಳು ನೀರಿನಿಂದ ಜಲಾವೃತ್ತಗೊಂಡಿವೆ.

ಮುಳುಗಿದ ಸೇತುವೆ : ಜಲಾಶಯದಿಂದ ಹೆಚ್ಚಿನ ನೀರನ್ನು ನದಿಗೆ ಹರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಕೆಳಸೇತುವೆ ಮುಳುಗಡೆಯಾಗಿದೆ. ಸೇತುವೆ ಮೇಲೆ ನೀರು ಹರಿಯುತ್ತಿರುವುದರಿಂದ ವಾಹನ ಹಾಗೂ ಸಾರ್ವಜನಿಕ ಸಂಚಾರ ಬಂದ್ ಆಗಿದೆ.



ಹರಿವು ಏರಿಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಶಾಸಕ ಡಾ.ಮಂತರ್ ಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೆಳ ಸೇತುವೆ ಮುಳುಗಡೆ ಯಾಗಿ ಹಲವು

ಇದರಿಂದ ಅಕ್ಕಪಕ್ಕದ ಗ್ರಾಮಗಳಾದ ಯಡವನಾಡು, ಹುದುಗೂರು, ಅತ್ತೂರು, ದೊಡ್ಡ ಸೂರು, ಹಾರಂಗಿ ಭಾಗಕ್ಕೆ ಸಂಪರ್ಕ ಕಡಿತಗೊಂಡಿದೆ. ಈ ಗ್ರಾಮಗಳ ಜನರು ಹತ್ತಾರು ಕಿಲೋ ಮೀಟರ್ ದೂರ ಕ್ರಮಿಸಿ ಕೂಡಿಗೆ ಮಾರ್ಗವಾಗಿ ತಮ್ಮ ಗ್ರಾಮಗಳಿಗೆ ತೆರಳಬೇಕಾಗಿದೆ.

ಶಾಸಕರ ಭೇಟಿ : ಕಾವೇರಿ ಹಾಗೂ ಹಾರಂಗಿ ಜಲಾಶಯ ಪ್ರದೇಶದಲ್ಲಿ ನಿರಂತರ ಮಳೆಯಿಂದ ಹಾರಂಗಿ ಜಲಾಶಯಕ್ಕೆ ಅಧಿಕ ಪ್ರಮಾಣದಲ್ಲಿ ನೀರಿನ ಒಳ ಗ್ರಾಮಗಳಿಗೆ ಸಂಚಾರ ಬಂದ್ ಆಗಿದ್ದು, ತಾತ್ಕಾಲಿಕವಾಗಿ ಅಕ್ಕಪಕ್ಕದ ಜನರು ಜಲಾಶಯ ಸೇತುವೆ ಮೇಲೆ ಸಂಚರಿಸಲು ಅಧಿಕಾರಿಗಳು ಅವಕಾಶ ಮಾಡಿ ಕೊಡಬೇಕು. ಜೊತೆಗೆ ಬಿಗಿ ಭದ್ರತೆ ಕಲ್ಪಿಸಿ ಜನರ ಆಧಾರ್ ಕಾರ್ಡ್ ಪರಿಶೀಲನೆ ಮಾಡಿ ಒಳಗಡೆ ಬಿಡುವಂತೆ ಸೂಚನೆ ನೀಡಿದರು.

ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪುರಸಭೆ ಸದಸ್ಯರಾದ ಶಿವಕುಮಾರ್, ಜಗದೀಶ್, ನವೀನ್‌ಕುಮಾರ್, ಕೆಪಿಸಿಸಿ ಸದಸ್ಯ ಎಚ್.ಕೆ. ನಟೇಶ್ ಗೌಡ, ಮುಖಂಡರಾದ ಬಿ.ಡಿ.ಅಣ್ಣಯ್ಯ, ಜನಾರ್ಧನ್, ರಂಜನ್ ಹೆಬ್ಬಾಲೆ, ನೀರಾವರಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಐ.ಕೆ.ಪುಟ್ಟಸ್ವಾಮಿ, ಸಹಾಯಕ ಎಂಜಿನಿಯರ್ ಸೌಮ್ಯ, ಕಿರಣ್, ಡಿವೈಎಸ್ಪಿ ಚಂದ್ರಶೇಖರ್, ಸಿಪಿಐ ಪ್ರಕಾಶ್ ಪಾಲ್ಗೊಂಡಿದ್ದರು.

ಡಿ.ಕೆ.ಶಿವಕುಮಾರ್‌ಗೆ ಮನವಿ: ಹಾರಂಗಿ ಜಲಾಶಯ ಕೆಳ ಸೇತುವೆ ಮುಳುಗಡೆಯಾಗಿ ಅಕ್ಕಪಕ್ಕ ಗ್ರಾಮಗಳ ಜನರಿಗೆ ಸಂಚಾರಕ್ಕೆ ತೊಂದರೆ ಉಂಟಾಗಿರುವ ಬಗ್ಗೆ ಶಾಸಕ ಮಂತರ್ ಗೌಡ ಸೇತುವೆ ಮೇಲೆ ನೀರು ಹರಿಯುತ್ತಿರುವ ದೃಶ್ಯವನ್ನು ಡಿಕೆಶಿ ಅವರಿಗೆ ತೋರಿಸಿ ಕೂಡಲೇ ಸೇತುವೆ ಮಾಡಿ ಕೊಡುವಂತೆ ಮನವಿ ಮಾಡಿದರು. ಶಾಸಕರ ಮನವಿಗೆ ಸ್ಪಂದಿಸಿದ ಡಿಕೆಶಿ ಸೇತುವೆ ನಿರ್ಮಿಸುವಂತೆ ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ಧಾರಾಕಾರ ಮಳೆ: ಮನೆಗೆ ಹಾನಿ



ಕುಶಾಲನಗರ, ಜೂ.17– ತಾಲೂಕಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಟೌನ್ ಕಾಲೋನಿ ನಿವಾಸಿ ಎಚ್.ಸಿ.ಜಯಪ್ರಕಾಶ್ ಎಂಬುವರ ಮನೆ ಸಂಪೂರ್ಣ ಹಾನಿಯಾಗಿದೆ.

60 ವರ್ಷದಷ್ಟು ಹಳೆಯ ಮನೆಯಾಗಿದ್ದು, ನಿರಂತರ ಮಳೆಯಿಂದ ಮನೆಯ ಗೋಡೆ ಕುಸಿತಗೊಂಡಿದ್ದು, ಮಕ್ಕಳು ಕೂದಲೆಳೆ ಅಂತರದಿಂದ ಪಾರಾಗಿದ್ದಾರೆ. ವಾರ್ಡ್ ಸದಸ್ಯ ಜೈವರ್ಧನ್ ಮಾತನಾಡಿ, ಮಳೆಯಿಂದ ಜಯಪ್ರಕಾಶ್ ಮನೆಗೆ ಹಾನಿಯಾಗಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಮನೆ ವಾಸಿಸಲು ಯೋಗ್ಯವಿಲ್ಲದ ಕಾರಣ ಪುರಸಭೆಯಿಂದ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದರು. ಪುರಸಭೆ ಸದಸ್ಯ ಆನಂದ್ ಕುಮಾರ್, ಗ್ರಾಮ ಲೆಕ್ಕಿಗ ಸಂತೋಷ್, ಪುರಸಭೆ ಕಂದಾಯ ಅಧಿಕಾರಿ ರಾಮು, ಪುರಸಭೆ ಸಿಬ್ಬಂದಿಗಳಾದ ರಾಘವ್, ಧನಂಜಯ ಹಾಗೂ ವಿವಿಧ ಸಂಘಟನೆಯ ಮುಖಂಡರು ಪಾಲ್ಗೊಂಡಿದ್ದರು.

ಹುಲಿಯ ಚಲನವಲನ; ಮಳೆಯ ನಡುವೆಯೇ ಕಾರ್ಯಾಚರಣೆ



ಸಿದ್ದಾಪುರ, ಜೂ.17–ಕರಡಿಗೋಡು ಗ್ರಾಮದಲ್ಲಿ ಹುಲಿಯ ಚಲನವಲನ ಕಂಡು ಬಂದ ಬೆನ್ನಲ್ಲೇ ಹುಲಿಯ ಹೆಜ್ಜೆ ಗುರುತನ್ನು ಅರಸಿ ಮಳೆಯ ನಡುವೆಯೇ ಕಾರ್ಯಾಚರಣೆ ನಡೆಯಿತು. ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಭೇಟಿ ನೀಡಿ ಕಾರ್ಯಾಚರಣೆ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಿದರು. ವಿರಾಜಪೇಟೆ ವಲಯ ಅರಣ್ಯ ಅಧಿಕಾರಿ ಶಿವರಾಮ್ ಹಾಗೂ ಉಪ ವಲಯ ಅರಣ್ಯ ಅಧಿಕಾರಿ ಸಂಜಿತ್ ಸೋಮಯ್ಯ ಉಪ ಸ್ಥಿತಿಯಲ್ಲಿ 30 ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕಾರ್ಯಾಚರಣೆ ವೇಳೆ ಹುಲಿಯ ಹೊಸ ಹೆಜ್ಜೆ ಗುರುತು ಪತ್ತೆಯಾಗಿದ್ದು, ಸಮೀಪವೇ ಇರುವ ಅರಣ್ಯದೆಡೆಗೆ ಹುಲಿ ಹೋಗಿರುವ ಸೂಚನೆ ಸಿಕ್ಕಿದೆ. ಈ ಪ್ರದೇಶದಲ್ಲೇ ಹುಲಿಯ ಇರುವಿಕೆ ಕಂಡು ಬಂದರೆ ಅರವಳಿಕೆ ನೀಡಿ ಹುಲಿಯನ್ನು ಸೆರೆ ಹಿಡಿಯಲು ಕ್ರಮ ವಹಿಸಲಾಗುವುದು. ಇದರಿಂದ ರೈತರು ಕಾರ್ಮಿಕರು ಹಾಗೂ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಎಂದು ಸಂಕೇತ್ ಪೂವಯ್ಯ ತಿಳಿಸಿದರು. ಹುಲಿಯ ಹೆಜ್ಜೆ ಗುರುತು ಅಥವಾ ಚಲನವಲನದ ಬಗ್ಗೆ ನಿಗಾ ಇಡಲಾಗಿದೆ. ಒಂದು ವೇಳೆ ಹುಲಿಯ ಚಲನವಲನ ಮತ್ತೆ ಕಂಡು ಬಂದರೆ ಮತ್ತಷ್ಟು ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ದೆಹಲಿ: ಸ್ವಾತಂತ್ರೋತ್ಸವಕ್ಕೆ ಯಶಸ್ ರೈ ಆಯ್ಕೆ

ಮಡಿಕೇರಿ, ಜೂ.17– ದೆಹಲಿಯಲ್ಲಿ ನಡೆಯುವ ಸ್ವಾತಂತ್ರೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ರಾಯಭಾರಿಯಾಗಿ ತಾಲೂಕಿನ ಮೂರ್ನಾಡು



ಕೊಡಂಬೂರು ನಿವಾಸಿ ಯಶಸ್ ರೈ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ. ದೇಶದ ಪ್ರತಿ ರಾಜ್ಯದಿಂದ 15ರಿಂದ 28 ವರ್ಷ ವಯೋಮಿತಿವರೆಗಿನ ಈ ಅವಕಾಶದಲ್ಲಿ ರಾಜ್ಯದಿಂದ ಈ ಬಾರಿ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಸ್ಥಾನವನ್ನು ಪಡೆದುಕೊಂಡಿದೆ. ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರದ, ಮೈ ಭಾರತ್ ಪೋರ್ಟಲ್ ಮೂಲಕ ನೋಂದಣಿಗೊಂಡ ಯುವಕರಲ್ಲಿ ಇವರು ಆಯ್ಕೆಯಾಗಿದ್ದಾರೆ. ಬಿ.ಎನ್. ಲವಕುಮಾರ್ ಹಾಗೂ ಹಾಗೂ ಜಯಂತಿ ಬಿ.ಬಿ ದಂಪತಿ ಪುತ್ರರಾಗಿರುವ ಯಶಸ್ ರೈ ಸುಳ್ಯ ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ವ್ಯಾಸಂಗ ಮಾಡುತ್ತಿದ್ದಾರೆ.

ಬೆಂಗಳೂರು ಕಾಲ್ತುಳಿತ ದುರಂತ: ಜಿಲ್ಲಾ ಬಿಜೆಪಿ ಪ್ರತಿಭಟನೆ



ಬೆಂಗಳೂರು ಕಾಲ್ತುಳಿತ ದುರಂತ ವಿರೋಧಿಸಿ ಜಿಲ್ಲಾ ಬಿಜೆಪಿ ಪ್ರತಿಭಟನೆ.

ಮಡಿಕೇರಿ, ಜೂ.17– ಬೆಂಗಳೂರಿನಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಾಟದ ಆರ್‌ಸಿಬಿ ತಂಡದ ಗೆಲುವಿನ ಸಂಭ್ರಮಾಚರಣೆಯ ಸಂದರ್ಭ ಉಂಟಾದ ಕಾಲ್ತುಳಿತ ದುರಂತ, ಅಧಿಕಾರಿಗಳ ತಲೆದಂಡ ಮತ್ತಿತ್ತರೆ ವಿಚಾರಗಳನ್ನು ಮುಂದಿಟ್ಟುಕೊಂಡು ಜಿಲ್ಲಾ ಬಿಜೆಪಿ ಪ್ರತಿಭಟನೆ ನಡೆಸಿತು.

ಮಾಜಿ ಶಾಸಕ ಅಪ್ಪಚ್ಚು ರಂಜನ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಹಿರಿಯ ಪೊಲೀಸ್ ಅಧಿಕಾರಿಗಳ ಮಾತನ್ನು ಲೆಕ್ಕಿಸದೇ ವಿಜಯೋತ್ಸವ ಆಚರಿಸಿ 11 ಮಂದಿ ಅಮಾಯಕರ ಸಾವಿಗೆ ಸರ್ಕಾರ ಕಾರಣವಾಗಿದೆ ಎಂದು ಮಾಜಿ ಶಾಸಕ ಅಪ್ಪಚ್ಚು ರಂಜನ್, ಆರೋಪಿಸಿದರು. ಕಾಂಗ್ರೆಸ್ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ನಿಷ್ಠಾವಂತ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ ಅವರ ಮನೋಸ್ಥೈರ್ಯ ಕುಗ್ಗಲು ಕಾರಣವಾಗಿದೆ. ಇದರೊಂದಿಗೆ ಇಡೀ ರಾಜ್ಯದಲ್ಲಿ ಪೊಲೀಸ್ ಇಲಾಖೆಯ ಆತ್ಮಬಲ ಕಸಿಯುವ ಯತ್ನಕ್ಕೆ ಸರಕಾರ ಕೈ ಹಾಕಿದೆ ಎಂದು ಅಸಮಾಧಾನ ಹೊರಗೆಡವಿದರು. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಮುಂದುವರೆಯಲು ಅರ್ಹರಲ್ಲ. ಈ ಕ್ಷಣವೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಬೇಕು ಈ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದರು. ಅಪರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ನಗರ ಸಭೆ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಸದಸ್ಯರಾದ ಅರುಣ್ ಶೆಟ್ಟಿ, ಸತೀಶ್, ಸಬಿತಾ, ಪಕ್ಷ ಪ್ರಮುಖರಾದ ಕಾಂಗೀರ ಸತೀಶ್, ನಾಗೇಶ್ ಕುಂದಲ್ಪಾಡಿ, ಬಿ.ಕೆ. ಅರುಣ್, ಜಗದೀಶ್, ಬಿ.ಪಿ.ಡಿಶು, ಕನ್ನಿಕೆ, ಪಿ.ಎಂ. ರವಿ, ಪೂಣಚ್ಚ, ಬೊಳ್ಳಜಿರ ಅಯ್ಯಪ್ಪ ಮತ್ತಿತರರು ಹಾಜರಿದ್ದರು.

ಏತ ನೀರಾವರಿ ಘಟಕಕ್ಕೆ ವಿದ್ಯುತ್ ಚಾಲನೆ: ಮುನ್ನೆಚ್ಚರಿಕೆಗೆ ಮನವಿ

ಚಾಮರಾಜನಗರ, ಜೂ.17–ತಾಲೂಕಿನ ಕೋಡಿಮೋಳೆ ಏತ ನೀರಾ ವರಿ ಘಟಕ–2ನೇ ಹಂತಕ್ಕೆ ಜೂ. 13ರಿಂದ ವಿದ್ಯುತ್ ಚಾಲನೆಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಮಾರ್ಗ ಹಾದು ಹೋಗಿರುವ ಗ್ರಾಮಗಳ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಮನವಿ ಮಾಡಿದೆ.

ವಿದ್ಯುತ್ ಪ್ರಸರಣ ಮಾರ್ಗವು ಚಂದಕವಾಡಿ ಮತ್ತು ಕೋಡಿಮೋಳೆ ಗ್ರಾಮಗಳ ಎಲ್ಲೆಯಲ್ಲಿ ಹಾದು ಹೋಗಲಿದ್ದು ಸಾರ್ವಜನಿಕರು ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಲೋಹದ ಪಟ್ಟಿಯನ್ನು ತೆಗೆಯುವುದಾಗಲಿ, ಗೋಪುರಗಳನ್ನು ಹತ್ತುವುದಾಗಲಿ, ತಂತಿಗಳನ್ನು ಮುಟ್ಟುವುದಾಗಲಿ, ಕೆಳಗಡೆ ಮರಗಿಡಗಳನ್ನು ನೆಡುವುದಾಗಲಿ, ಬಳ್ಳಿ ಮತ್ತು ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲಿ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲಿ ಮಾಡುವುದರಿಂದ ತುಂಬಾ ಅಪಾಯಕಾರಿಯಾಗಲಿದೆ ಹಾಗೂ ಪ್ರಾಣ ಹಾನಿಯಾಗಲಿದೆ.

ಸೂಚನೆಗಳನ್ನು ಉಲ್ಲಂಘಿಸಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರರಾಗುವುದಿಲ್ಲ ಎಂದು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚರಂಡಿ ಸಮಸ್ಯೆ ನಿವಾರಿಸುವಂತೆ ಮುಖ್ಯಾಧಿಕಾರಿಗೆ ಮನವಿ



ಪಟ್ಟಣದ ಅಗ್ರಹಾರ ಬೀದಿಯ ಚರಂಡಿ ಹಾಗೂ ಇತರೆ ಸಮಸ್ಯೆಗಳನ್ನು ನಿವಾರಿಸುವಂತೆ ಆಗ್ರಹಿಸಿ ನಿವಾಸಿಗಳು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ಮನವಿಯನ್ನು ಸಲ್ಲಿಸಿದರು.

ಯಳಂದೂರು,ಜೂ 17 (ವಿ.ನಾಗರಾಜು)–ಪಟ್ಟಣದ ಅಗ್ರಹಾರ ಬೀದಿಯಲ್ಲಿ ಹಲವು ತಿಂಗಳಿಂದಲೂ ಚರಂಡಿಯ ಸಮಸ್ಯೆ ಇದ್ದು ಇದನ್ನು ನಿವಾರಿಸುವಂತೆ ಆಗ್ರಹಿಸಿ ಪಪಂ ಮುಖ್ಯಾಧಿಕಾರಿಗೆ ಇಲ್ಲಿನ ವಾಸಿಗಳು ಮನವಿ ಸಲ್ಲಿಸಿದರು.

ಇಲ್ಲಿನ ಚರಂಡಿಗೆ ಸ್ಲಾಬ್ ಮುಚ್ಚಲಾಗಿದ್ದು ಇದರ ಮೇಲೆಯೇ ಕಾಂಕ್ರೀಟು ರಸ್ತೆ ಮಾಡಲಾಗಿದೆ. ಕೆಲವು ಕಡೆ ಸ್ಲಾಬ್ ಕಿತ್ತು ಬಿದ್ದಿದ್ದು ಚರಂಡಿ ನೀರೆಲ್ಲಾ ರಸ್ತೆ ಮೇಲೆ ಹರಿಯುತ್ತಿದೆ. ಮನೆ ಮುಂಭಾಗದಲ್ಲಿ ಇದನ್ನೇ ತುಳಿದು ಹೋಗುವಂಥ ಪರಿಸ್ಥಿತಿ ಇದೆ. ಮಳೆ ಬಂದರೆ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತಿದೆ ಎಂದು ಮುಖಂಡ ಶಿವಕುಮಾರ ಆರೋಪಿಸಿದರು. ಈ ಸ್ಥಳ ಸೊಳ್ಳೆ, ಕ್ರಿಮಿಕೀಟಗಳ ಆವಾಸ ಸ್ಥಾನವಾಗಿದ್ದು, ಹಲವು ಬಾರಿ ಮನವಿ ಮಾಡಿದ್ದರೂ ಕ್ರಮ ವಹಿಸಿಲ್ಲ. ಇದರ ಹೂಳು ತೆಗೆಸಿ ನೀರು ಸರಾಗವಾಗಿ ಸಾಗುವಂತೆ ಮಾಡಬೇಕು. ಅಲ್ಲದೆ ಇದೇ ಬೀದಿಯಲ್ಲಿರುವ ಸಂತೆಮಾಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಇಲ್ಲಿ ಕುಡುಕರ ಹಾವಳಿ ಹೆಚ್ಚಾಗಿದೆ. ಹಾಗಾಗಿ ಇಲ್ಲಿನ ವಾಸಿಗಳಿಗೆ ಸಮಸ್ಯೆಯಾಗಿದ್ದು ಇದನ್ನು ನಿವಾರಿಸಬೇಕು. ಅಲ್ಲದೆ ಇಲ್ಲಿರುವ ಶೌಚಗೃಹವನ್ನು ಒಬ್ಬ ವ್ಯಕ್ತಿಯು ಮನೆ ಮಾಡಿಕೊಂಡಿದ್ದಾನೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದು ಮನವಿ ಸಲ್ಲಿಸಿದರು.

ಇಲ್ಲಿನ ಚರಂಡಿಯನ್ನು ದುರಸ್ತಿ ಮಾಡಲು ಸೂಕ್ತ ಕ್ರಮ ವಹಿಸಲಾಗುವುದು. ಚರಂಡಿಗೆ ಯಾರೂ ಕೂಡ ಶೌಚಗೃಹದ ಪೈಪನ್ನು ಬಿಡಬಾರದು ಇದು ಕ್ರಿಮಿನಲ್ ಅಪರಾಧವಾಗಿದೆ. ಇದು ಕಂಡುಬಂದಲ್ಲಿ ಇವರ ವಿರುದ್ಧ ಸೂಕ್ತ ಕ್ರಮ ವಹಿಸಲಾಗುವುದು ಎಂದು ಮುಖ್ಯಾಧಿಕಾರಿ ಎಂ.ಪಿ. ಮಹೇಶ್‌ಕುಮಾರ ಎಚ್ಚರಿಸಿದರು. ಸಂತೆಮಾಳದ ಸಮಸ್ಯೆ, ಶೌಚಗೃಹದ ಸಮಸ್ಯೆಯನ್ನು ನಿವಾರಿಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಪಪಂ ಸದಸ್ಯರಾದ ಮಹೇಶ್, ಮಹದೇವ ನಾಯಕ ಮಾಜಿ ಸದಸ್ಯ ನಾಗರಾಜು ಮುಖಂಡರಾದ ಗೋವಿಂದರಾಜು, ಮುಕೇಶ್, ನಾಗಶಯನ, ಕಾನಾರಾಮ್, ಕೃಷ್ಣ ಮೊದಲಾದವರಿದ್ದರು.

ಹಲ್ಲೆಯಿಂದ ಗಾಯಗೊಂಡಿದ್ದ ಯುವಕನ ಸಾವು
ಪೊಲೀಸ್ ಠಾಣೆಯೆದುರು ಕುಟುಂಬಸ್ಥರ ಪ್ರತಿಭಟನೆ



ಸಾವಿಗೀಡಾದ ಶಿವು

ಗುಂಡ್ಲುಪೇಟೆ, ಜೂ.17(ಸೋಮ್.ಜಿ)– ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿದ್ದ ಗಾಯಾಳು ಯುವಕ ಸಾವಿಗೀಡಾದ ಘಟನೆ ಪಟ್ಟಣದಲ್ಲಿ ನಿನ್ನೆ ರಾತ್ರಿ ನಡೆದಿದೆ.

ಪಟ್ಟಣದ ನಿವಾಸಿ ನಾಗೇಶ್ ಎಂಬುವರ ಮಗ ಶಿವು(36) ಎಂಬಾತನೇ ಸಾವಿಗೀಡಾದವನು. ಗಾರೆ ಕೆಲಸಕ್ಕೆ ಹೋಗಿದ್ದವನು ಮದ್ಯ ಸೇವಿಸಿ ಮನೆಗೆ ಬಂದವನೇ ಶಿವು ಮತ್ತಷ್ಟು ಮದ್ಯ ತರುವುದಾಗಿ ಹೇಳಿ ರಾತ್ರಿ ಮನೆಯಿಂದ ಹೊರ ಹೋಗಿದ್ದಾನೆ. ವಾಪಸ್ಸಾದಾಗ ಶಿವುನ ತುಟಿ, ಗದ್ದ ಹಾಗೂ ಕಿವಿಯಲ್ಲಿ ರಕ್ತ ಸೋರುತ್ತಿದ್ದುದನ್ನು ಕಂಡ ಮನೆಯವರು ವಿಚಾರಿಸಿದಾಗ ಮದ್ದಾನೇಶ್ವರ ಶಾಲೆಯ ಬಳಿ ಇಬ್ಬರು ಯುವಕರು ತನ್ನ ಮೇಲೆ ಹಲ್ಲೆ ನಡೆಸಿದ್ದಾಗಿ ತಿಳಿಸಿದನು. ಕೂಡಲೇ ಆತನನ್ನು ಆಸ್ಪತ್ರೆಗೆ ಕರೆದೊಯ್ದರಾದರೂ ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಮೃತನ ಸಹೋದರ ಆದಿತ್ಯ ನೀಡಿದ ದೂರಿನ ಮೇರೆಗೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು, ಆರೋಪಿ ನಿಜಾಮುದ್ದೀನ್ ಎಂಬಾತನನ್ನು ಬಂಧಿಸಿ ಪರಾರಿಯಾಗಿರುವ ಇನ್ನೊಬ್ಬ ಆರೋಪಿಯ ಶೋಧನೆಯಲ್ಲಿ ತೊಡಗಿದ್ದಾರೆ.


ಪೊಲೀಸ್ ಠಾಣೆಗೆ ಮುತ್ತಿಗೆ : ಪಟ್ಟಣದಲ್ಲಿ ಸೋಮವಾರ ರಾತ್ರಿ ಶಿವು ಮೇಲೆ ನಿಜಾಮುದ್ದೀನ್ ಮತ್ತು ಸ್ನೇಹಿತ ಮಾರಣಾಂತಿಕ ಹಲ್ಲೆ ಮಾಡಿದ್ದರೂ ಈ ಪ್ರಕರಣವನ್ನ ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಮೃತನ ಸಂಬಂಧಿಕರು ಪಟ್ಟಣದ ಪೊಲೀಸ್ ಠಾಣೆಗೆ ಇಂದು ಸಂಜೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಘಟನೆ ಬಗ್ಗೆ ಸಂಬಂಧಿಕರು ಸೋಮವಾರ ರಾತ್ರಿಯೇ ಠಾಣೆಗೆ ಹೋಗಿ ದೂರು ನೀಡಿದರೂ ಕರ್ತವ್ಯದಲ್ಲಿದ್ದ ಸಿಬ್ಬಂದಿ ಬಂಟಪ್ಪ ಅದನ್ನು ಸ್ವೀಕರಿಸದೆ ಬೇರೆ ದೂರು ಬರೆದುಕೊಂಡಿದ್ದಾರೆ. ಅಲ್ಲದೆ ಎಫ್‌ಐಆರ್‌ನಲ್ಲಿ ಆರೋಪಿಗಳ ಹೆಸರನ್ನು ಸೇರಿಸದೆ ಕೈಬಿಟ್ಟಿದ್ದಾರೆ. ರಾತ್ರಿ ಇಬ್ಬರು ಸೇರಿ ಹಲ್ಲೆ ನಡೆಸಿದ್ದರಿಂದ ಶಿವು ಸಾವಾಗಿದ್ದರೂ ಪೊಲೀಸರು ಎದೆನೋವಿನಿಂದ ಸಾವು ಎಂದು ಹೇಳುತ್ತಿದ್ದಾರೆ. ಸ್ವತಃ ಎಸ್‌ಪಿಯವರೇ ತಮ್ಮ ಫೇಸ್‌ಬುಕ್‌ನಲ್ಲಿ ಹೀಗೆ ಪೋಸ್ಟ್ ಹಾಕುವ ಮೂಲಕ ಪ್ರಕರಣವನ್ನು ದಾರಿತಪ್ಪಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಆಗಮಿಸಿ ತಮಗೆ ನ್ಯಾಯ ದೊರಕಿಸಬೇಕು ಎಂದು ಒತ್ತಾಯಿಸಿ ಶವವನ್ನು ಠಾಣೆ ಎದುರು ತಂದು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮಾತನಾಡಿ ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಕೊಡಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಡಲಾಯಿತು.

ಸುಳ್ಳುಸುದ್ದಿ ಹರಡಿದರೆ ಕ್ರಮ

ಪಟ್ಟಣದಲ್ಲಿ ಮಧ್ಯರಾತ್ರಿಯಲ್ಲಿ ಮುಸ್ಲಿಂ ಯುವಕರಿಂದ ನಡೆದ ಹಲ್ಲೆಯಲ್ಲಿ ಹಿಂದೂ ಯುವಕನ ಹತ್ಯೆ, ಎಲ್ಲಿದೆ ಕಾನೂನು ಸುವ್ಯವಸ್ಥೆ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿರುವ ಬಗ್ಗೆ ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಕುಡಿದ ಮತ್ತಿನಲ್ಲಿ ಕ್ಷುಲ್ಲಕ ಕಾರಣಕ್ಕೆ ಕೈಗಳಲ್ಲಿ ಹೊಡೆದಾಡಿಕೊಂಡು ತಮ್ಮ ಮನೆಗಳಿಗೆ ಹೋಗಿದ್ದಾರೆ. ಇವರಲ್ಲಿ ಒಬ್ಬನು ಎದೆನೋವಿನಿಂದ ಆಸ್ಪತ್ರೆಗೆ ಕರೆದೊಯ್ಯುವಾಗ ದಾರಿಯಲ್ಲಿ ಸಾವಿಗೀಡಾಗಿದ್ದು ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆದರೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಾಕಿ ಸಾಮಾಜಿಕ ಸ್ವಾಸ್ಥ್ಯ ಹಾಳುಮಾಡುತ್ತಿದ್ದಾರೆ. ಇಂಥವರ ವಿರುದ್ಧ ಕ್ರಮಕ್ಕೆಗೊಳ್ಳುವುದಾಗಿ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ



ಪ್ರಕರಣವನ್ನ ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಮೃತನ ಸಂಬಂಧಿಕರು ಶವದೊಂದಿಗೆ ರಸ್ತೆತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಜೂ. 21, ನಗರದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ, ಜೂ. 17 – ಜಿಲ್ಲಾ ಆಯುಷ್ ಇಲಾಖೆ ವತಿಯಿಂದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ ಜೂನ್ 21ರ ಬೆಳಿಗ್ಗೆ 6 ಗಂಟೆಗೆ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರದನಹಳ್ಳಿಯಲ್ಲಿ ನಾಳೆ ವಿದ್ಯುತ್ ಜನಸಂಪರ್ಕ ಸಭೆ

ಚಾಮರಾಜನಗರ, ಜೂ. 17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ತಾಲೂಕಿನ ಹರದನಹಳ್ಳಿ ಉಪವಿಭಾಗ ಕಚೇರಿಯಲ್ಲಿ ವಿದ್ಯುತ್ ಸಂಬಂಧ ಕುಂದು ಕೊರತೆಗಳ ಆಲಿಕೆಗಾಗಿ ಜೂನ್ 19ರ ಮಧ್ಯಾಹ್ನ 12.30 ಗಂಟೆಗೆ ಜನಸಂಪರ್ಕ ಸಭೆ ಆಯೋಜಿಸಿದೆ. ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಗೆ ಸಾರ್ವಜನಿಕರು ಹಾಜರಾಗಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ತಿಳಿಸುವಂತೆ ನಿಗಮದ ಸಹಾಯಕ ಕಾರ್ಯನಿರ್ವಾಹ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಹನೂರಿನಲ್ಲಿ ಫಲಾನುಭವಿಗಳ ಸಂಪರ್ಕ ಪರಿಶೀಲನಾ ಸಭೆ

ಚಾಮರಾಜನಗರ, ಜೂ.17– ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ (ಮೈಸೂರು ವಿಭಾಗ) ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಜಿಲ್ಲೆಯ ಹನೂರು ತಾಲೂಕಿಗೆ ಜೂ. 18ರ ಬೆಳಗ್ಗೆ 11 ಗಂಟೆಗೆ ಭೇಟಿ ನೀಡಿ ಹನೂರು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕಿನ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಪರ್ಕ ಪರಿಶೀಲನಾ ಸಭೆಯನ್ನು ನಡೆಸಲಿದ್ದಾರೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಿಡನೆಟ್ಟು, ಮಕ್ಕಳಿಗೆ ಪುಸ್ತಕ ವಿತರಿಸಿ ಪರಿಸರ ದಿನಾಚರಣೆ

ಕೊಳ್ಳೇಗಾಲ, ಜೂ.17– ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಬ್ಬು ಬೆಳೆಗಾರರ ಸಂಘ ಶಾಲಾ ಆವರಣದಲ್ಲಿ ಗಿಡನೆಟ್ಟು, ಮಕ್ಕಳಿಗೆ ಪುಸ್ತಕ ವಿತರಿಸುವ ಮೂಲಕ ಪರಿಸರ ದಿನಾಚರಣೆ ನೆರವೇರಿಸಿತು.

ಶಾಲೆಯ ಆವರಣದಲ್ಲಿ ಗಿಡ ನೆಟ್ಟು, 7 ನೇ ತರಗತಿ ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನ ಸಾಮಾಗ್ರಿಗಳನ್ನು ವಿತರಿಸಿತು. ಅಲ್ಲದೆ ಗ್ರಾಮದ ಯಜಮಾನ ಮುದ್ದಶೆಟ್ಟಿ, ಪತ್ರಕರ್ತ ಮಲ್ಲಪ್ಪ ಅವರನ್ನು ಗೌರವಿಸಲಾಯಿತು. ಸಂಘದ ತಾಲೂಕು ಅಧ್ಯಕ್ಷ ಮಾದೇಶ್ ಹಿಂದ್ವಾಡಿ ಮಾತನಾಡಿ, ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸೂಚನೆ ಮೇರೆಗೆ ದೊಡ್ಡಿಂದುವಾಡಿ ಶಾಲೆಯಲ್ಲಿ ಮಕ್ಕಳ ಜೊತೆಯಲ್ಲಿ ಗಿಡ ನೆಟ್ಟು ಮಕ್ಕಳಲ್ಲಿ ಅರಿವು ಮೂಡಿಸುವ ಮೂಲಕ ಪರಿಸರ ದಿನ ಆಚರಿಸಲಾಗಿದೆ ಎಂದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಉಪಾಧ್ಯಕ್ಷ ಮೂಡಳ್ಳಿಪುರ ಪಟೇಲ್ ಶಿವಮೂರ್ತಿ, ಜಿಲ್ಲಾ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಗೌಡಳ್ಳಿ ಷಡಕ್ಷರಸ್ವಾಮಿ, ಮಹೇಶ್ ಕಾಮಗೆರೆ, ಹಿಂದ್ವಾಡಿ ವೆಂಕಟೇಶ್, ಸಿದ್ದರಾಜು, ಬಲ ಲಿಂಗಶೆಟ್ಟಿ, ಕೆ.ಆರ್. ಎಸ್.ಪಕ್ಷದ ಜಿಲ್ಲಾ ಕಾರ್ಯದರ್ಶಿ ಶಿವಶಂಕರ್, ರೈತ ಮಹಿಳೆ ರಾಜಮ್ಮ, ಚನ್ನಾಜಮ್ಮ, ಸುಶೀಲಮ್ಮ, ಮಂಗಳಮ್ಮ, ಪಾಪಮ್ಮ, ಶಾಲಾ ಮುಖ್ಯ ಶಿಕ್ಷಕಿ ಕೋಮಲಾ ಹಾಜರಿದ್ದರು.



ತಾಲೂಕಿನ ದೊಡ್ಡಿಂದುವಾಡಿಯಲ್ಲಿ ಕಬ್ಬು ಬೆಳೆಗಾರರ ಸಂಘದಿಂದ ಪರಿಸರ ದಿನಾಚರಣೆಯಲ್ಲಿ ಮಕ್ಕಳಿಗೆ ಲೇಖನ ಸಾಮಗ್ರಿ, ಪುಸ್ತಕ ವಿತರಿಸಲಾಯಿತು.

ಮೈಸೂರು ಮಿತ್ರ

ಹಳ್ಳಿಗಾಡು ಪ್ರದೇಶದಲ್ಲಿ ವ್ಯಾಪಕಗೊಳ್ಳುತ್ತಿದೆ ಸರಗಳ್ಳರ ಹಾವಳಿ

ನಮ್ಮ ನಾಯಿ ಕಂಡೀರಾ ಎಂದು ನೆಪ ಮಾಡಿಕೊಂಡು ರೈತ ಮಹಿಳೆ ಸರಕದ್ದ ಇಬ್ಬರು ಖದೀಮರು

● ಇಲವಾಲ ಬಳಿಯ ಕಲ್ಲೂರು ನಾಗನಹಳ್ಳಿಯಲ್ಲಿ ಘಟನೆ
● ಹಳ್ಳಿಗಳೂ ಈಗ ಸುರಕ್ಷಿತವಲ್ಲ; ಇಲ್ಲಿಯೂ ಖದೀಮರ ಭೀತಿ



ಮೈಸೂರು, ಜೂ.17(ಎಸ್‌ಬಿಡಿ)– ನಮ್ಮ ನಾಯಿ ಕಳೆದಿದೆ, ನೀವೇನಾದರೂ ನೋಡಿದ್ದೀರಾ ಎಂದು ವಿಚಾರಿಸುವ ನೆಪದಲ್ಲಿ ಇಬ್ಬರು ಖದೀಮರು, ರೈತ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಗ್ರಾಮದ ಕುಳ್ಳೇಗೌಡರ ಪತ್ನಿ ಕುಮಾರಿ(47) ಅವರ ಸುಮಾರು 3.20 ಲಕ್ಷ ಮೌಲ್ಯದ 37 ಗ್ರಾಂ ಚಿನ್ನದ ಮಾಂಗಲ್ಯ ಸರ ಖದೀಮರ ಪಾಲಾಗಿದೆ.

ಸೋಮವಾರ ಸಂಜೆ 4.20ರ ಸಮಯದಲ್ಲಿ ಕುಮಾರಿ ಅವರು ತಮ್ಮ ದನಗಳಿಗೆ ನೀರು ಕುಡಿಸಲು ಚಿಕ್ಕೆರೆ ಬಳಿ ಹೋಗಿದ್ದರು. ಆ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು, ಕುಮಾರಿ ಅವರ ಬಳಿ ಹೋಗಿ ನಾಯಿಯ ಫೋಟೋ ತೋರಿಸಿ, ನಮ್ಮ ನಾಯಿ ಕಳೆದು ಹೋಗಿದೆ, ನೀವು ಎಲ್ಲಾದರೂ ನೋಡಿದ್ದೀರಾ ಎಂದು ಕೇಳಿದ್ದಾರೆ. ಫೋಟೋ ನೋಡಿದ ಕುಮಾರಿ ಅವರು, ಈ ನಾಯಿಯನ್ನು ನಾನೆಲ್ಲೂ ನೋಡಿಲ್ಲ ಎಂದು ದನಗಳನ್ನು ರಸ್ತೆಗೆ ಕರೆತಂದಿದ್ದಾರೆ.

ಕೆರೆ ಬಳಿಯಿಂದ ರಸ್ತೆವರೆಗೂ ಕುಮಾರಿಯವರನ್ನು ಹಿಂಬಾಲಿಸಿಕೊಂಡು ಬಂದ ಖದೀಮರು, ಏಕಾಏಕಿ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದಾರೆ. ಆಗ ಕುಮಾರಿಯವರು ಕಿರುಚಿಕೊಂಡರಾದರೂ ಸುತ್ತಮುತ್ತ ಯಾರೂ ಇಲ್ಲದ ಕಾರಣ ಖದೀಮರು ನಿರಾತಂಕವಾಗಿ ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಈ ಸಂಬಂಧ ಕುಮಾರಿ ಅವರು ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಇಲವಾಲ ಪೊಲೀಸರು, ಕಳ್ಳರ ಪತ್ತೆಗೆ ಶೋಧ ನಡೆಸಿದ್ದಾರೆ.

ಹಳ್ಳಿಗಳಲ್ಲೂ ಆತಂಕ: ಹಳ್ಳಿಗಳಲ್ಲಿ ಕಳ್ಳಕಾಕರ ಕಾಟವಿಲ್ಲ, ಅಲ್ಲಿ ಸುರಕ್ಷಿತವಾಗಿ ಇರಬಹುದು ಎಂಬ ಕಾಲ ಹೋಗಿದೆ. ಅಲ್ಲಿಯೂ ದುಷ್ಕರ್ಮಿಗಳ ಉಪಟಳ ವ್ಯಾಪಕವಾಗುತ್ತಿದೆ. ಹೊಲ-ಗದ್ದೆಗಳಲ್ಲಿ ಒಂಟಿಯಾಗಿರುವ ಮಹಿಳೆಯರನ್ನು ಯಾವುದೋ ನೆಪದಲ್ಲಿ ಮಾತನಾಡಿಸಿ, ಏಕಾಏಕಿ ಚಿನ್ನಾಭರಣ ಕಿತ್ತುಕೊಂಡು ಪರಾರಿಯಾಗುವ ಪ್ರಕರಣಗಳು ಹೆಚ್ಚಾಗುತ್ತಿವೆ. ಮೊನ್ನೆಯಷ್ಟೇ ಖದೀಮನೊಬ್ಬ ಮೈಸೂರು-ಬೆಂಗಳೂರು ಹೆದ್ದಾರಿ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ನಾಗನಹಳ್ಳಿ ನಿವಾಸಿ ಶ್ರೀಮತಿ ವೆಂಕಟಮ್ಮ(75) ಅವರ 37 ಗ್ರಾಂ ಮಾಂಗಲ್ಯ ಸರ ಹಾಗೂ 10 ಗ್ರಾಂ ಕಿವಿಯೋಲೆ ಸೇರಿ ಸುಮಾರು 4.50 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಕಿತ್ತುಕೊಂಡು ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ಕೆಲ ತಿಂಗಳ ಹಿಂದೆ ಹೆಚ್.ಡಿ.ಕೋಟೆ ರಸ್ತೆ ಕೋಟೆಹುಂಡಿ ಗ್ರಾಮದ ಬಳಿ ಖದೀಮರು ಕಾರಿನಲ್ಲಿ ಬಂದು ಕುರಿ ಮೇಯಿಸುತ್ತಿದ್ದ ಮಹಿಳೆಯ ಚಿನ್ನದ ಸರ ಕಿತ್ತುಕೊಂಡಿದ್ದರು. ಇಲವಾಲದ ಬಳಿಯೂ ಇಂತಹ ಘಟನೆ ನಡೆದಿತ್ತು.

ಅಪರಿಚಿತರ ಬಗ್ಗೆ ಎಚ್ಚರ: ಚಿನ್ನದ ಬೆಲೆ ಗಗನಕ್ಕೇರುತ್ತಿರುವಂತೆ ಸರಗಳ್ಳರೂ ಹೆಚ್ಚುತ್ತಿದ್ದಾರೆ. ನಗರಗಳಲ್ಲಿ ಕೈಚಳಕ ತೋರುತ್ತಿದ್ದ ಖದೀಮರು ಇತ್ತೀಚೆಗೆ ಹಳ್ಳಿಗಳಲ್ಲಿ ದುಷ್ಕೃತ್ಯ ಮೆರೆಯುತ್ತಿದ್ದಾರೆ. ಹಳ್ಳಿಗಳಲ್ಲಿ ಸಿಸಿ ಕ್ಯಾಮರಾಗಳಿರುವುದಿಲ್ಲ. ಹಾಗಾಗಿ ಹೊಂಚು ಹಾಕಿ ಒಂಟಿಯಾಗಿ ಓಡಾಡುವ ಮಹಿಳೆಯರನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ಯಾವುದೋ ಊರು ಅಥವಾ ವ್ಯಕ್ತಿಯ ಹೆಸರೇಳಿ ದಾರಿ ಕೇಳುವುದು ಇಲ್ಲವೇ ಇನ್ನಾವುದೋ ನೆಪದಲ್ಲಿ ಮಾತನಾಡಿಸಿ, ಸರ ಎಗರಿಸುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಮಹಿಳೆಯರು ಒಂಟಿಯಾಗಿ ಓಡಾಡುವಾಗ ಅಪರಿಚಿತರ ಬಗ್ಗೆ ಎಚ್ಚರಿಕೆಯಿಂದಿರಬೇಕು. ಕತ್ತಲು ವೇಳೆ ಅಥವಾ ಜನ ಓಡಾಡದ ಸ್ಥಳಗಳಲ್ಲಿ ಮತ್ತೊಬ್ಬರನ್ನು ಜೊತೆಯಲ್ಲಿ ಕರೆದುಕೊಂಡು ಓಡಾಡುವುದು ಒಳ್ಳೆಯದು.

ಮನೆ ಬೀಗ ಮುರಿದು ನಗ-ನಾಣ್ಯ ಕಳವು

ಇಲವಾಲದಲ್ಲಿ ಘಟನೆ

ಮೈಸೂರು, ಜೂ.17(ಎಸ್‌ಬಿಡಿ)– ಮನೆ ಬಾಗಿಲು ಮೀಟಿ, ನಗ-ನಾಣ್ಯ ದೋಚಿರುವ ಘಟನೆ ಮೈಸೂರು ತಾಲೂಕು ಇಲವಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಾಯಕರ ಬೀದಿ ನಿವಾಸಿ, ಟೈಲರ್ ಶಿವಕುಮಾರ್(50) ಅವರ ಮನೆಗೆ ನುಗ್ಗಿರುವ ಖದೀಮರು, ಸುಮಾರು 24 ಗ್ರಾಂ ಚಿನ್ನಾಭರಣ, 400 ಗ್ರಾಂ ಬೆಳ್ಳಿ ಪದಾರ್ಥಗಳು ಹಾಗೂ 10 ಸಾವಿರ ನಗದು ದೋಚಿದ್ದಾರೆ.

ಶಿವಕುಮಾರ್ ತಮ್ಮ ಕುಟುಂಬ ಸಮೇತ ಭಾನುವಾರ ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಕಾರ್ಯಕ್ರಮ ನಿಮಿತ್ತ ಬೆಟ್ಟದಪುರಕ್ಕೆ ಹೋಗಿದ್ದರು. ಸೋಮವಾರ ಬೆಳಗ್ಗೆ ವಾಪಸ್ಸಾದ ಅವರು ಬೀಗ ತೆಗೆಯಲು ಮುಂದಾದಾಗ ಬಾಗಿಲು ತೆರೆದುಕೊಂಡಿದೆ. ನಾವೇ ಬೀಗ ಹಾಕುವುದನ್ನು ಮರೆತು ಹೋಗಿರಬಹುದು ಎಂಬ ಅನುಮಾನದಲ್ಲಿ ಒಳಗೆ ಹೋಗಿ ಪರಿಶೀಲಿಸಿದಾಗ ಆಘಾತ ಕಾದಿತ್ತು. ಬೆಡ್ ರೂಂನಲ್ಲಿದ್ದ ಬೀರುವಿನಲ್ಲಿದ್ದ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೀರುವಿನಲ್ಲಿದ್ದ ಚಿನ್ನಾಭರಣ, ಬೆಳ್ಳಿ ಪದಾರ್ಥ ಹಾಗೂ ನಗದು ಕಳುವಾಗಿದ್ದವು. ಯಾರೋ ಕಳ್ಳರು ಬಾಗಿಲು ಮೀಟಿ, ಮನೆಯೊಳಗೆ ನುಗ್ಗಿ ದೋಚಿದ್ದಾರೆ ಎಂದು ಶಿವಕುಮಾರ್ ಇಲವಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕಳ್ಳರ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ಅಕ್ರಮವಾಗಿ ಸಾಗಿಸುತ್ತಿದ್ದ ಪಡಿತರ ಅಕ್ಕಿ ವಶಕ್ಕೆ

ಮೈಸೂರು, ಜೂ.17(ಎಸ್‌ಬಿಡಿ)– ಆಟೋದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಸುಮಾರು ಐದೂವರೆ ಕ್ವಿಂಟಾಲ್ ಪಡಿತರ ಅಕ್ಕಿಯನ್ನು ತಾಲೂಕಿನ ದೂರ ಗ್ರಾಮದಲ್ಲಿ ವಶಪಡಿಸಿಕೊಳ್ಳಲಾಗಿದೆ. ಜಯಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಹೇಮಲತಾ, ಎಎಸ್‌ಐ ಶಿವಮಲ್ಲಪ್ಪ ಹಾಗೂ ಜಯಪುರ-ವರುಣಾ ಹೋಬಳಿ ಆಹಾರ ನಿರೀಕ್ಷಕ ಸಿ.ಮಂಜುನಾಥ್ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದಾಗ ಆಟೋ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಆಟೋ ಪರಿಶೀಲಿಸಿದಾಗ 10 ಚೀಲಗಳಲ್ಲಿ ಒಟ್ಟು 5.65 ಕ್ವಿಂಟಾಲ್ ಪಡಿತರ ಅಕ್ಕಿ ಪತ್ತೆಯಾಗಿದೆ. ಪ್ಯಾಸೆಂಜರ್ ಆಟೋ(ಕೆಎ-09, ಎಸಿ-2030) ಸಹಿತ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡು, ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ರಾಜ್ಯ ಸರ್ಕಾರ ಪ್ರತ್ಯೇಕ ಜಾತಿಗಣತಿ ನಡೆಸುವುದು ಅನಿವಾರ್ಯ

ಬಿಜೆಪಿಗರಿಂದ ದಾರಿ ತಪ್ಪಿಸುವ ಹೇಳಿಕೆ ; ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಕಿಡಿ



ಮೈಸೂರು,ಜೂ.17(ಪಿಎಂ)– ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದ ಹಿಂದುಳಿದ ವರ್ಗಗಳ ಮೀಸಲಾತಿ ನಿಗದಿಪಡಿಸಲು ಸಾಧ್ಯವಿಲ್ಲ. ಸಂವಿಧಾನದನ್ವಯ ಆಯಾಯ ರಾಜ್ಯಗಳೇ ಹಿಂದುಳಿದ ವರ್ಗದ ಪಟ್ಟಿ ನಿಗದಿಪಡಿಸಬೇಕಿದೆ. ಹಾಗಾಗಿ ರಾಜ್ಯ ಸರ್ಕಾರ ಪ್ರತ್ಯೇಕ ಜಾತಿಗಣತಿ ನಡೆಸುವುದು ಅನಿವಾರ್ಯ. ಈ ಸಾಮಾನ್ಯ ಅರಿವಿಲ್ಲದೆ ಬಿಜೆಪಿಗರು ಹಗುರ ಹೇಳಿಕೆ ನೀಡಿ ದಾರಿ ತಪ್ಪಿಸುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಕಿಡಿಕಾರಿದ್ದಾರೆ. ರಾಜ್ಯದಲ್ಲಿ ಶೀಘ್ರವಾಗಿ ಜಾತಿಗಣತಿ ನಡೆಸಲು ಸರ್ಕಾರ ತೀರ್ಮಾನಿಸಿರುವುದು ಸ್ವಾಗತಾರ್ಹ. ಆಯಾಯ ಸಮುದಾಯದ ಸಂಖ್ಯೆಗೆ ಅನುಗುಣವಾಗಿ ಸೌಲಭ್ಯಗಳನ್ನು ಒದಗಿಸಲು ಇದರಿಂದ ಸುಲಭವಾಗುತ್ತದೆ. 10 ವರ್ಷಗಳ ಹಿಂದಿನ ರಾಜ್ಯದಲ್ಲಿನ ಗಣತಿ ಅನೇಕ ಕಾರಣಗಳಿಂದ ಜಾರಿಯಾಗಲಿಲ್ಲ. ಬಹಳಷ್ಟು ಸಮಯ ಕಾರಣ ಅದರ ಅಂಕಿ-ಅಂಶಗಳು ಬದಲಾಗಿರುವ ಹಿನ್ನೆಲೆಯಲ್ಲಿ ಹೊಸ ಜಾತಿ ಸರ್ವೇ ಅಗತ್ಯ.

ಈ ನಡುವೆ ಕೆಲ ಬಿಜೆಪಿ ನಾಯಕರು ರಾಜ್ಯ ಸರ್ಕಾರದ ಮರು ಜಾತಿ ಸಮೀಕ್ಷೆ ನಿಲುವಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಧಿಕಾರದಲ್ಲಿದ್ದಾಗ ಹಿಂದುಳಿದ ವರ್ಗಗಳಿಗೆ ಬಿಜೆಪಿ ಯಾವುದೇ ಸೌಲಭ್ಯ ನೀಡಲಿಲ್ಲ. ಬದಲಿಗೆ ಈ ವರ್ಗಗಳ ಹೆಚ್ಚಿನ ಯುವಕರನ್ನು ಧರ್ಮದ ಅಫೀಮು ತಿನ್ನಿಸಿ ಕೋಮುಗಲಭೆಗಳಲ್ಲಿ ದುರ್ಬಳಕೆ ಮಾಡಿಕೊಂಡು, ಅವರ ಭವಿಷ್ಯ ಹಾಳು ಮಾಡಿದೆ. ಹಿಂದುಳಿದ ಸಮುದಾಯಗಳಿಗೆ ಸೌಲಭ್ಯ ಸಿಗಬಾರದೆಂಬ ದುರುದ್ದೇಶದಿಂದ ಬಿಜೆಪಿ, ರಾಜ್ಯದ ಜಾತಿ ಗಣತಿ ವಿರೋಧಿಸುವ ಮೂಲಕ ಹುನ್ನಾರ ನಡೆಸುತ್ತಿರುವಂತಿದೆ.

ಪ್ರತಾಪ್ ಸಿಂಹಗೆ ಅಸಹನೆ: ವಿಧಾನ ಪರಿಷತ್ ಸದಸ್ಯ ಹಾಗೂ ಸಿಎಂ ಪುತ್ರ ಡಾ. ಯತೀಂದ್ರ ಅವರ ಕುರಿತು ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹೇಳಿಕೆಯಲ್ಲಿ ಅಸಹನೆ ತುಂಬಿ ತುಳುಕುತ್ತಿದೆ. ಹಿಂದುಳಿದವರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಮುಂದೆ ಬರುವುದನ್ನು ಬಿಜೆಪಿ ಎಂದಿಗೂ ಸಹಿಸುವುದಿಲ್ಲ ಎನ್ನುವುದಕ್ಕೆ ಪ್ರತಾಪ್ ಸಿಂಹರ ಹೇಳಿಕೆಯೇ ಸಾಕ್ಷಿ ಎಂದು ಪ್ರಕಟಣೆಯಲ್ಲಿ ದೂರಿದ್ದಾರೆ.

ಈಜಿನಲ್ಲಿ ಎಸ್.ಅಚ್ಯುತ ಬೆಳ್ಳಿ ಪದಕಕ್ಕೆ ಭಾಜನ



ಮೈಸೂರು,ಜೂ.17(ಪಿಎಂ)– ರಾಜ್ಯ ಮಟ್ಟದ ನಾನ್ ಮೆಡಲಿಸ್ಟ್ ಈಜು ಸ್ಪರ್ಧೆಯಲ್ಲಿ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಸದಸ್ಯರು ಹಾಗೂ ಸನ್ನದು ಲೆಕ್ಕಿಗರೂ ಆದ ಎಸ್.ಅಚ್ಯುತ ಅವರು ಬೆಳ್ಳಿ ಪದಕಕ್ಕೆ ಭಾಜನರಾಗಿದ್ದಾರೆ. ಎಂಎಎಸ್‌ಪಿ ಅಕ್ವಾಟಿಕ್ ಕ್ಲಬ್ ಸಹಯೋಗದೊಂದಿಗೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ವತಿಯಿಂದ ಜೂ.8ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿವಿ ಈಜುಕೊಳದಲ್ಲಿ ಏರ್ಪಡಿಸಲಾಗಿದ್ದ ರಾಜ್ಯ ಮಟ್ಟದ ನಾನ್ ಮೆಡಲಿಸ್ಟ್ ಈಜು ಸ್ಪರ್ಧೆ 2025ರಲ್ಲಿ ಅವರು 4X50 ಮೀ. ಫ್ರೀ ಸ್ಟೈಲ್ ರಿಲೇ ಪಂದ್ಯದಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

24 ಗಂಟೆಗಳಲ್ಲಿ 7 ವಿಮಾನಗಳ ಹಾರಾಟ ರದ್ದುಗೊಳಿಸಿದ ಏರ್ ಇಂಡಿಯಾ

ನವದೆಹಲಿ: ಅಹಮದಾಬಾದ್‌ನಲ್ಲಿ ಬೋಯಿಂಗ್ AI 171 ಡ್ರೀಮ್‌ಲೈನರ್ ವಿಮಾನದ ಭೀಕರ ಅಪಘಾತವು ಗಂಭೀರ ಸುರಕ್ಷತೆ ಮತ್ತು ಕಾರ್ಯಾಚರಣೆಯ ಕಳವಳಗಳನ್ನು ಹುಟ್ಟು ಹಾಕಿತ್ತು. ಹೀಗಾಗಿ ಏರ್ ಇಂಡಿಯಾ ತಪಾಸಣೆಯನ್ನು ತೀವ್ರಗೊಳಿಸಿದ್ದು ಆ ನಂತರ ಇಂದು ಹಲವಾರು ಏರ್ ಇಂಡಿಯಾ ಅಂತರರಾಷ್ಟ್ರೀಯ ವಿಮಾನಗಳನ್ನು ರದ್ದುಗೊಳಿಸಲಾಯಿತು.

ದೆಹಲಿ-ದುಬೈ (AI 915), ದೆಹಲಿ-ವಿಯೆನ್ನಾ (AI 153), ದೆಹಲಿ-ಪ್ಯಾರಿಸ್ (AI 143), ಅಹಮದಾಬಾದ್-ಲಂಡನ್ (AI 159), ಬೆಂಗಳೂರು-ಲಂಡನ್ (AI 133), ಮತ್ತು ಲಂಡನ್-ಅಮೃತಸರ (AI 170) ಸೇವೆಗಳು ಬಾಧಿತ ವಾಗಿವೆ. ಈ ಮಾರ್ಗಗಳಲ್ಲಿ ಹೆಚ್ಚಿನವು ಬೋಯಿಂಗ್ 787-8 ಡ್ರೀಮ್‌ಲೈನರ್ ಅನ್ನು ಬಳಸುತ್ತಿವೆ. ಜೂನ್ 12ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಸ್ವಲ್ಪ ಸಮಯದಲ್ಲೇ 241 ಜನರನ್ನು ಬಲಿ ತೆಗೆದುಕೊಂಡ ದುರಂತದಲ್ಲಿ ಇದೇ ಬೋಯಿಂಗ್ ವಿಮಾನ ಪತನವಾಗಿತ್ತು.

ಏರ್ ಇಂಡಿಯಾ ಕಾರ್ಯಾಚರಣೆಯ ನಿರ್ಬಂಧಗಳು ಮತ್ತು ಹೆಚ್ಚುವರಿ ಸುರಕ್ಷತಾ ಪರಿಶೀಲನೆಗಳು ವಿಮಾನ ಹಾರಾಟದ ಮೇಲೆ ಪರಿಣಾಮ ಬೀರುತ್ತಿದೆ. ನಾವು ಅನಾನುಕೂಲತೆಗೆ ವಿಷಾದಿಸುತ್ತೇವೆ. ಹೋಟೆಲ್ ವಸತಿ, ಪೂರ್ಣ ಮರುಪಾವತಿ ಅಥವಾ ಅಗತ್ಯವಿರುವಲ್ಲಿ ಉಚಿತ ಮರುಹೊಂದಿಕೆ ಸೇರಿದಂತೆ ಪರ್ಯಾಯ ಪ್ರಯಾಣ ವ್ಯವಸ್ಥೆಗಳನ್ನು ಮಾಡುತ್ತಿದ್ದೇವೆ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.



ಡ್ರೀಮ್‌ಲೈನರ್ ವಿಮಾನದ ಮಾರ್ಗ ಬದಲಾವಣೆ; ವಿಮಾನದ ಮಧ್ಯೆಯೇ ಟರ್ನ್‌ಬ್ಯಾಕ್: ಹಾಂಗ್ ಕಾಂಗ್‌ನಿಂದ ದೆಹಲಿಗೆ ಬರುತ್ತಿದ್ದ AI 315 ವಿಮಾನವು ಹಾರಾಟದ ಮಧ್ಯದಲ್ಲಿ ತಾಂತ್ರಿಕ ದೋಷ ಕಂಡು ಬಂದ ಹಿನ್ನಲೆಯಲ್ಲಿ ಹಿಂತಿರುಗಬೇಕಾಯಿತು. ಮತ್ತೊಂದು ಘಟನೆಯಲ್ಲಿ ಪಾಕಿಸ್ತಾನದ ವಾಯು ಪ್ರದೇಶದ ನಿರ್ಬಂಧಗಳಿಂದಾಗಿ ಕೋಲ್ಕತ್ತಾ ಮೂಲಕ ಮಾರ್ಗ ಬದಲಾಯಿಸಲಾಗಿದ್ದ ಸ್ಯಾನ್ ಫ್ರಾನ್ಸಿಸ್ಕೋ-ಮುಂಬೈ ವಿಮಾನ (AI 180) ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಗದಿತ ನಿಲುಗಡೆಯ ಸಮಯದಲ್ಲಿ ತಾಂತ್ರಿಕ ದೋಷದ ಶಂಕೆ ಹಿನ್ನೆಲೆ ಲ್ಯಾಂಡಿಂಗ್ ಮಾಡಬೇಕಾಯಿತು. 211 ಪ್ರಯಾಣಿಕರು ಸೇರಿದಂತೆ ವಿಮಾನದಲ್ಲಿದ್ದ ಎಲ್ಲಾ 228 ಜನರನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು. ಕೆಲವು ಪ್ರಯಾಣಿಕರನ್ನು ಸ್ಥಳೀಯ ಹೋಟೆಲ್‌ಗಳಲ್ಲಿ ಇರಿಸಲಾಗಿದೆ. ಆದರೂ ವಿಮಾನ ನಿಲ್ದಾಣದಲ್ಲಿ ಗೊಂದಲದ ದೃಶ್ಯಗಳು ವರದಿಯಾಗಿವೆ.

ಏರ್ ಇಂಡಿಯಾ ದೆಹಲಿ-ಪ್ಯಾರಿಸ್ ವಿಮಾನ ರದ್ದು: ವಿಮಾನ ಹಾರಾಟ ಪೂರ್ವ ತಪಾಸಣೆಯ ಸಮಯದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಕಂಡು ಬಂದ ನಂತರ, ಏರ್ ಇಂಡಿಯಾ ಮಂಗಳವಾರ ತನ್ನ ದೆಹಲಿ-ಪ್ಯಾರಿಸ್ AI 142 ವಿಮಾನವನ್ನು ರದ್ದು ಗೊಳಿಸಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಅಲ್ಲದೆ ಸಮಸ್ಯೆಯನ್ನು ಪರಿಹರಿಸಲಾಗುತ್ತಿದೆ ಎಂದು ಏರ್ ಇಂಡಿಯಾ ಸ್ಪಷ್ಟಪಡಿಸಿದೆ. ಜೂನ್ 17ರಂದು ದೆಹಲಿಯಿಂದ ಪ್ಯಾರಿಸ್‌ಗೆ (A143) ಹಾರಾಟ ನಡೆಸಬೇಕಿದ್ದ ವಿಮಾನವನ್ನು ರದ್ದುಗೊಳಿಸಲಾಗಿದೆ. ಕಡ್ಡಾಯ ಪೂರ್ವ ವಿಮಾನ ತಪಾಸಣೆಯಲ್ಲಿ ಪ್ರಸ್ತುತ ಪರಿಹರಿಸಲಾಗುತ್ತಿರುವ ಸಮಸ್ಯೆಯನ್ನು ಗುರುತಿಸಲಾಗಿದೆ.

ಅಹಮದಾಬಾದ್-ಗ್ಯಾಟ್ವಿಕ್ ವಿಮಾನ ಹಾರಾಟ ರದ್ದು: ವಾಯುಪ್ರದೇಶ ನಿರ್ಬಂಧಗಳು ಮತ್ತು ಮುನ್ನೆಚ್ಚರಿಕೆ ಪರಿಶೀಲನೆಗಳಿಂದಾಗಿ ವಿಮಾನ ಲಭ್ಯವಿಲ್ಲದ ಕಾರಣ ಅಹಮದಾಬಾದ್‌ನಿಂದ ಲಂಡನ್‌ನ ಗ್ಯಾಟ್ವಿಕ್ ವಿಮಾನವನ್ನು ರದ್ದುಗೊಳಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ದೃಢಪಡಿಸಿದೆ. ತಾಂತ್ರಿಕ ದೋಷವು ರದ್ದತಿಗೆ ಕಾರಣ ಎಂಬ ಮಾಧ್ಯಮ ವರದಿಗಳನ್ನು ಅದು ನಿರಾಕರಿಸಿದೆ

ಇಂಡಿಗೋ ವಿಮಾನವು ನಾಗ್ಪುರದಲ್ಲಿ ತುರ್ತು ಭೂಸ್ಪರ್ಶ: ಮಂಗಳವಾರ ನಡೆದ ಪ್ರತ್ಯೇಕ ವಿಮಾನ ಘಟನೆಯಲ್ಲಿ, ಮಸ್ಕತ್ ನಿಂದ ಕೊಚ್ಚಿ ಮೂಲಕ ದೆಹಲಿಗೆ ಹೋಗುವ ಇಂಡಿಗೋ ವಿಮಾನ 6E 2706 ಬಾಂಬ್ ಬೆದರಿಕೆಯ ನಂತರ ನಾಗ್ಪುರ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಎಲ್ಲಾ ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು. ಪ್ರಾಥಮಿಕ ತಪಾಸಣೆಯಲ್ಲಿ ಯಾವುದೇ ಅನುಮಾನಾಸ್ಪದ ಅಂಶ ಕಂಡು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇವರ ಕಂಡರೆ ತಿಳಿಸಿ ಪ್ಲೀಸ್!



ವೆಂ. ಚಲಪತಿ



ನವೀನ್



ಶಶಿ



ಬಸವರಾಜು



ಸುಕನ್ಯಾ

ಮೈಸೂರು, ಜೂ.17– ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿರುವ ಐವರ ಪತ್ತೆಗೆ ಸಾರ್ವಜನಿಕರ ಸಹಕಾರ ಕೋರಲಾಗಿದೆ.

ವೆಂಕಟಚಲಪತಿ: ಅನಾರೋಗ್ಯದಿಂದ ಬಳಲುತ್ತಿದ್ದ 80 ವರ್ಷದ ವೆಂಕಟಚಲಪತಿ ಅವರು 2024ರ ಆಗಸ್ಟ್ 13ರಂದು ಮನೆಯಿಂದ ಹೊರಹೋದವರು ಈವರೆಗೂ ಪತ್ತೆಯಾಗಿಲ್ಲ. ಇವರು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಮಾತನಾಡಬಲ್ಲರು.

ನವೀನ್: ಸುಣ್ಣದಕೇರಿಯಲ್ಲಿ ಮೆಡಿಕಲ್ ಶಾಪ್ ನಡೆಸುವುದರ ಜೊತೆಗೆ ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ನವೀನ್(34), 2023ರ ಜುಲೈ 24ರಂದು ಕೆಲಸಕ್ಕೆಂದು ಮನೆಯಿಂದ ಹೋದವರು, ಈವರೆಗೂ ಪತ್ತೆಯಾಗಿಲ್ಲ. ಇವರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಬಲ್ಲವರಾಗಿದ್ದಾರೆ.

ಶಶಿ: ಮದ್ಯ ವ್ಯಸನಿಯಾಗಿದ್ದ ಶಶಿ(25), 2023ರ ಮೇ 11ರಂದು ತಂದೆ-ತಾಯಿ ತರಕಾರಿ ವ್ಯಾಪಾರ ಮಾಡುತ್ತಿದ್ದ ಸ್ಥಳದಿಂದ ಅಂಗಡಿಗೆ ಹೋಗಿ ಬರುವುದಾಗಿ ಹೇಳಿ ಹೋದವನು ವಾಪಸ್ ಬಂದಿಲ್ಲ. ಈತ ಬಲಗೈಯಲ್ಲಿ ನಾಗಬುತ್ತಿ ಹಾಗೂ ಎಡಗೈ ತೋಳಿನಲ್ಲಿ ಸುಸ್ಮಿತಾ ಎಂದು ಅಚ್ಚೆ ಹಾಕಿಸಿಕೊಂಡಿದ್ದಾನೆ.

ಬಸವರಾಜು: ಐದಾರು ಸಲ ಮನೆ ಬಿಟ್ಟುಹೋಗಿ ವಾಪಸ್ಸಾಗಿದ್ದ ಬಸವರಾಜು(58), 2017ರ ಮೇ 14ರಂದು ಮನೆಯಿಂದ ಹೊರಹೋದವರು ಈವರೆಗೂ ಪತ್ತೆಯಾಗಿಲ್ಲ. ಎಲ್ಲಾ ಕಡೆ ಹುಡುಕಾಡಿದರೂ ಇವರ ಬಗ್ಗೆ ಸುಳಿವು ಸಿಕ್ಕಿಲ್ಲ.

ಸುಕನ್ಯಾ: ಠಾಣಾ ವ್ಯಾಪ್ತಿಯ ನಿವಾಸಿ ಮನೋಹರ್ ಅವರ ಪತ್ನಿ ಸುಕನ್ಯಾ(54) ಅವರು 2023ರ ನವೆಂಬರ್ 22ರಿಂದ ನಾಪತ್ತೆಯಾಗಿದ್ದು, ಈವರೆಗೆ ಪತ್ತೆಯಾಗಿಲ್ಲ. ಕನ್ನಡ ಮತ್ತು ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ.

ಇವರುಗಳ ಕುಟುಂಬದವರು ನೀಡಿರುವ ದೂರಿನನ್ವಯ ಕೃಷ್ಣರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದು, ಯಾರಿಗಾದರೂ ಸುಳಿವು ದೊರೆತರೆ ಪೊಲೀಸ್ ಕಂಟ್ರೋಲ್ ರೂಂ(0821-2418339) ಅಥವಾ ಠಾಣೆ(2418519)ಗೆ ಮಾಹಿತಿ ನೀಡುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಇಂದು ಭಾರೀ ಗಾಳಿ ಸಹಿತ ಮಳೆ ಸಾಧ್ಯತೆ



ಮೈಸೂರು, ಜೂ.17– ಮೈಸೂರು ಜಿಲ್ಲೆಯಲ್ಲಿ ನಾಳೆ(ಜೂ.18) ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಹಾಗೆಯೇ ಕೊಡಗು ಜಿಲ್ಲೆಯಲ್ಲಿ ಎರಡು ದಿನ ಭಾರೀ ಮಳೆಯೊಂದಿಗೆ ಬಿರುಗಾಳಿ ಬೀಸಲಿದೆ. ಹಳೇ ಮೈಸೂರು ಭಾಗದ ಎಲ್ಲಾ ಜಿಲ್ಲೆಗಳಲ್ಲಿ ಇನ್ನೂ ಮೂರು ದಿನ ಜೋರಾದ ಗಾಳಿಯೊಂದಿಗೆ ತುಂತುರು ಮಳೆಯಾಗಲಿದೆ ಎಂದು ತಿಳಿದುಬಂದಿದೆ.

ಕುಕ್ಕರಹಳ್ಳಿ ಕೆರೆಗೆ ಮಲಿನ ನೀರು ಸೇರುವುದನ್ನು ತಡೆಯಲು ಮೈಸೂರು ವಿವಿ ಯಾವ ಕ್ರಮವನ್ನೂ ಕೈಗೊಳ್ಳಲು ತಯಾರಿಲ್ಲ

● ಮೈಸೂರು ಗ್ರಾಹಕ ಪರಿಷತ್ ತೀವ್ರ ಬೇಸರ ● ಆದರೆ, ಮಾತೆತ್ತಿದರೆ ಕುಕ್ಕರಹಳ್ಳಿ ಕೆರೆ ನಮ್ಮದು ಎಂದು 'ಉತ್ತರದಾಯಿತ್ವ' ಪ್ರತಿಪಾದಿಸುತ್ತಿದೆ ● ಮೈಸೂರು ವಿವಿ- ಮೈಸೂರು ನಗರಪಾಲಿಕೆ ನಡುವಿನ ಸಮನ್ವಯ ಕೊರತೆಯಿಂದ ಇದು ಸಾಧ್ಯವಾಗುತ್ತಿಲ್ಲ

ಮೈಸೂರು, ಜೂ.17(ಎಸ್‌ಪಿಎನ್)– ಕುಕ್ಕರಹಳ್ಳಿ ಕೆರೆ ನಮ್ಮದು ಎಂದು 'ಉತ್ತರದಾಯಿತ್ವ' ದಾಖಲಿಸುವ ಮೈಸೂರು ವಿವಿ, ಮಲಿನ ನೀರು ಶೇಖರಣೆಯಾಗದಂತೆ ತಡೆಯಲು ಯಾವುದೇ ಕ್ರಮ ಕೈಗೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಮೈಸೂರು ಗ್ರಾಹಕ ಪರಿಷತ್ ತೀವ್ರ ಬೇಸರ ಹೊರಹಾಕಿದೆ.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿ ಆವರಣದಲ್ಲಿ ಇಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಾದ ಕುಮಾರ್ ಹಾಗೂ ಉಮಾಶಂಕರ್ ಉಪಸ್ಥಿತಿಯಲ್ಲಿ 'ಕುಕ್ಕರಹಳ್ಳಿ ಕೆರೆಯ ನೀರು ವರ್ಗೀಕರಣದ ವಿಶ್ಲೇಷಣಾ ವರದಿ ಮೇಲಿನ ಚರ್ಚೆ ಸಂದರ್ಭದಲ್ಲಿ ಎಂಜಿಪಿ ಸದಸ್ಯರು ಮಂಗಳವಾರ ಚರ್ಚೆ ನಡೆಸಿದರು.



'ಕುಕ್ಕರಹಳ್ಳಿ ಕೆರೆಯ ನೀರು ವರ್ಗೀಕರಣದ ವಿಶ್ಲೇಷಣಾ ವರದಿ' ಮೇಲಿನ ಚರ್ಚೆ ಸಂದರ್ಭದಲ್ಲಿ ಎಂಜಿಪಿ ಹಲವು ಸದಸ್ಯರು ಉಪಸ್ಥಿತರಿದ್ದರು.

> ಕುಕ್ಕರಹಳ್ಳಿ ಕೆರೆಗೆ ಮಲಿನ ನೀರು ಹರಿಯುವುದನ್ನು ನಿಲ್ಲಿಸುವ ಸಂಬಂಧ ಕಳೆದ 30 ವರ್ಷಗಳಿಂದ ಮೈಗ್ರಾಪ ಹೋರಾಟ ಮಾಡುತ್ತಿದೆ. ಅಧಿಕಾರಿಗಳು ಒಂದಿಲ್ಲೊಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಲೇ ಇದ್ದಾರೆ. ಸಮಸ್ಯೆ ಮಾತ್ರ ಹಾಗೆಯೇ ಮುಂದುವರೆದಿದೆ. ನಮ್ಮ ಪರಿಸರವನ್ನು ಉಳಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವುದು ನಮ್ಮೆಲ್ಲರ ಜವಾಬ್ದಾರಿ. ಆದರೆ, ಪರಿಸರ ಮಾಲಿನ್ಯದಲ್ಲಿ ಎಲ್ಲರ ಕೊಡುಗೆ ಒಂದಿಲ್ಲೊಂದು ರೂಪದಲ್ಲಿದೆ.
>
> – ಭಾಮಿ ವಿ.ಶೆಣೈ
> ಸಂಸ್ಥಾಪಕ ಕಾರ್ಯಾಧ್ಯಕ್ಷ
> ಮೈಸೂರು ಗ್ರಾಹಕ ಪರಿಷತ್

ಮಲಿನ ನೀರು ತಡೆಗಟ್ಟುವ ಸಂಬಂಧ ಮೈಸೂರು ವಿವಿ ಮುಂದಾಳತ್ವ ವಹಿಸಿ, ಸ್ನಾತಕೋತ್ತರ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಮೈಸೂರಿನ ನಾಗರಿಕರು ಹಾಗೂ ಸಂಘ-ಸಂಸ್ಥೆಗಳ ನೆರವಿನೊಂದಿಗೆ ಕುಕ್ಕರಹಳ್ಳಿ ಕೆರೆ ಉಳಿವಿಗೆ ಶ್ರಮಿಸಬೇಕಿತ್ತು.

ಆದರೆ, ವಿವಿ ಈ ಕೆಲಸ ಮಾಡುತ್ತಿಲ್ಲ ಅಲ್ಲದೆ, ಕುಕ್ಕರಹಳ್ಳಿ ಕೆರೆ ಉಳಿಸುವ ನಿಟ್ಟಿನಲ್ಲಿ ಮೈಸೂರು ವಿವಿ ರಾಜ್ಯಕ್ಕೆ ಮಾದರಿಯಾಗಿ, ಪರಿಸರಕ್ಕೆ ಪೂರಕವಾಗಿ ಮತ್ತು ನಗರೀಕರಣ ಉದಾಹರಣೆಯಾಗಿ ಹಾಗೂ ಶೈಕ್ಷಣಿಕ ಹಿನ್ನೆಲೆಯಲ್ಲೂ ಸಂಪೂರ್ಣ ವಿಫಲವಾಗಿದೆ ಎಂದು ಎಂಜಿಪಿ ಸದಸ್ಯರೊಬ್ಬರು ತೀವ್ರ ಬೇಸರ ವ್ಯಕ್ತಪಡಿಸಿದರು.

ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ ಅವರು, ಕುಕ್ಕರಹಳ್ಳಿ ಕೆರೆಗೆ ಮಲಿನ ನೀರು ತಡೆಗಟ್ಟುವ ಸಂಬಂಧ ಮೈಸೂರು ವಿವಿ ಅಥವಾ ಮೈಸೂರು ನಗರಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದರ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಕೆರೆ ಉಳಿಸಿಕೊಳ್ಳುವಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರದ ಬಗ್ಗೆ ಉಲ್ಲೇಖಿಸಿ ಪತ್ರ ಬರೆಯುವಂತೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಮಾಲಿನ್ಯ ಮಂಡಳಿ ಅಧಿಕಾರಿಗಳು, ಇಲ್ಲಿನ ವಸ್ತುಸ್ಥಿತಿ ಕುರಿತು ಪತ್ರ ಬರೆಯಲಾಗುವುದು ಎಂದರು.


ಮಲಿನ ನೀರು ಹರಿಯುವುದನ್ನು ತಡೆಗಟ್ಟಲು ಮೈಸೂರು ನಗರಪಾಲಿಕೆ ಮತ್ತು ಮೈಸೂರು ವಿವಿ ಅಧಿಕಾರಿಗಳಲ್ಲಿ ಸಮನ್ವಯ ಕೊರತೆಯಿದೆ. ಈ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಲು ಸಾಧ್ಯವೇ ಎಂಬ ಸದಸ್ಯ ಡಿ.ವಿ.ದಯಾನಂದ ಸಾಗರ್ ಪ್ರಶ್ನೆಗೆ ಉತ್ತರಿಸಿದ ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಇದು ನಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಮಲಿನ ನೀರಿನ ತ್ಯಾಜ್ಯ ಕುಕ್ಕರಹಳ್ಳಿ ಕೆರೆ ಸೇರುತ್ತಿರುವುದರಿಂದ ಸುತ್ತಮುತ್ತಲಿನ ಪರಿಸರ ಮಾಲಿನ್ಯವಾಗುತ್ತಿದೆ ಎಂಬ ಅಂಶವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಬಹುದು ಎಂದು ಉತ್ತರಿಸಿದರು.

ಕೆರೆಗೆ ಪಡುವಾರಹಳ್ಳಿ, ಮಾನಸ ಗಂಗೋತ್ರಿ, ಕಲಾಮಂದಿರ ಕಡೆಯಿಂದ ಬರುವ ಮಲಿನ ನೀರು ನಿಲ್ಲಿಸಲು ಪಾಲಿಕೆಗೆ ಪತ್ರ ಬರೆಯುವಂತೆ ಸದಸ್ಯರ ಮನವಿಗೆ ಉತ್ತರಿಸಿದ ಅಧಿಕಾರಿಗಳು, ಸದ್ಯ ಕುಕ್ಕರಹಳ್ಳಿ ಕೆರೆಗೆ ಪಡುವಾರಹಳ್ಳಿ ಕಡೆಯಿಂದ ಮಲಿನ ನೀರು ಹರಿದು ಬರುತ್ತಿದೆ. ಕಲಾಮಂದಿರ ಹಾಗೂ ಮಾನಸ ಗಂಗೋತ್ರಿಯಿಂದ ಯಾವುದೇ ಮಲಿನ ನೀರು ಹರಿದು ಬರುತ್ತಿರುವ ಗುರುತು ಸಿಕ್ಕಿಲ್ಲ ಎಂದು ಮಾಹಿತಿ ನೀಡಿದರು.

ನೀರು ಹರಿಸಲು ಸಾಧ್ಯವಾಗುತ್ತಿಲ್ಲ: ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿ ಬಿದ್ದ ಮಳೆನೀರು ಪೂರ್ಣಯ್ಯ ನಾಲೆಯಲ್ಲಿ ಹರಿದು ಕುದುರೆಮಾಳ ಮುಖಾಂತರ ಕುಕ್ಕರಹಳ್ಳಿ ಕೆರೆಗೆ ಹರಿಸಲು ಸಾಧ್ಯವಿದೆ. ಆದರೆ, ಮೈಸೂರು ಜಿಲ್ಲಾಡಳಿತ, ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಸಮನ್ವಯ ಸಾಧಿಸಿದರೆ ಮಾತ್ರವೇ ಇದು ಸಾಧ್ಯವಿದೆ ಎಂದು ಸದಸ್ಯರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

ಬೆದರಿಕೆ ಕಾಲ್: 'ಏಕಬಳಕೆ ಪ್ಲಾಸ್ಟಿಕ್ ಕವರ್'ಗಳ ತಯಾರಿಕೆಯನ್ನು ರಾಜ್ಯ ಸರ್ಕಾರ ನಿಷೇಧ ಮಾಡಿದೆ. ಆದರೆ, ಈ ಕವರ್‌ಗಳು ಮೈಸೂರಿನ ಎಲ್ಲಾ ಅಂಗಡಿಗಳಲ್ಲಿ, ಪ್ರವಾಸಿತಾಣಗಳಲ್ಲಿ ದೊರಕುತ್ತಿವೆ. ಇದರ ಬಳಕೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಸರ್ಕಾರ ಘೋಷಣೆ ಮಾಡಿದ್ದರೂ ಜನರು ಮಾತ್ರ ಇದನ್ನು ಬಳಕೆ ಮಾಡುತ್ತಲೇ ಇದ್ದಾರೆ. ಈ ಪ್ಲಾಸ್ಟಿಕ್ ಕವರ್‌ಗಳನ್ನು ಬಳಕೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾದರೆ, ರೌಡಿಗಳಿಂದ ಬೆದರಿಕೆ ಕರೆಗಳು ಬರುತ್ತಿವೆ. ಪ್ಲಾಸ್ಟಿಕ್ ಕವರ್‌ಗಳ ಪರಿಶೀಲನೆ ವೇಳೆ ಪೊಲೀಸ್ ಭದ್ರತೆ ನೀಡಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವಂತೆ ಹಿರಿಯ ಅಧಿಕಾರಿಗಳಲ್ಲಿ ಮನವಿ ಮಾಡಿದರೂ ಭದ್ರತೆ ಸಿಗುತ್ತಿಲ್ಲ. ಅಲ್ಲದೆ, 'ಏಕಬಳಕೆ ಪ್ಲಾಸ್ಟಿಕ್ ಕವರ್' ಎಲ್ಲಿ ತಯಾರಾಗುತ್ತವೆ ಎಂಬುದು ಮಾಹಿತಿ ಇಲ್ಲ ಎಂದು ಮಾಲಿನ್ಯ ಮಂಡಳಿ ಅಧಿಕಾರಿಗಳು ಸಭೆಯಲ್ಲಿ ತಮ್ಮ ಅಳಲು ತೋಡಿಕೊಂಡರು. ಸಭೆಯಲ್ಲಿ ಎಂಜಿಪಿ ಸದಸ್ಯರಾದ ರವಿಕುಮಾರ್, ಎನ್‌ಐಇ ಕಾಲೇಜು ನಿವೃತ್ತ ಪ್ರಾಧ್ಯಾಪಕ ಯದುಪಟ್ಟಿ, ರಾಜಲಕ್ಷ್ಮಿ, ವೆಂಕಟೇಶ್, ಶಂಕರ್, ಮಾಳವಿಕಾ ಗುಬ್ಬಿವಾಣಿ, ರವಿ ಸೇರಿದಂತೆ ಇತರರಿದ್ದರು.

ಮಲಿನ ನೀರು ತಡೆಯುವಂತೆ ಪಾಲಿಕೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ಪತ್ರ



> ಕುಕ್ಕರಹಳ್ಳಿ ಕೆರೆಗೆ ತ್ಯಾಜ್ಯ ನೀರು ಸೇರಿ ಮಲಿನವಾಗುವ ಕುರಿತು ಪರೀಕ್ಷೆಗೆ ಎಂಜಿಪಿ 2025ರ ಏ.15ರಂದು ಒತ್ತಾಯಿಸಿತ್ತು. ಕ್ರಮೇಣ ಏ.16ರಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಕೆರೆ ನೀರಿನ ಮಾದರಿ ಸಂಗ್ರಹಿಸಿ, ಏ.19ರಂದು ಕುಕ್ಕರಹಳ್ಳಿ ಕೆರೆ ಮಲಿನ ನೀರು ತಡೆಗಟ್ಟುವಂತೆ ವಿಶ್ಲೇಷಣಾ ವರದಿಯನ್ನು ಪಾಲಿಕೆ ಆಯುಕ್ತರಿಗೆ ಸಲ್ಲಿಸಲಾಗಿದೆ.

ಮೈಸೂರು, ಜೂ.17(ಎಸ್‌ಪಿಎನ್)– ಕುಕ್ಕರಹಳ್ಳಿ ಕೆರೆಗೆ ಮಲಿನ ನೀರು ಸೇರುತ್ತಿರುವುದನ್ನು ತಡೆಗಟ್ಟುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೈಸೂರು ಘಟಕ, ಮೈಸೂರು ನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದೆ.

ಮೈಸೂರಿನ ಎಂಜಿಪಿ ಮನವಿ ಮೇರೆಗೆ 2025ರ ಏ.19ರಂದು ಕುಕ್ಕರಹಳ್ಳಿ ಕೆರೆಗೆ ತೆರಳಿ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಮೈಸೂರು-ಹುಣಸೂರು ರಸ್ತೆಯ ಪಡುವಾರಹಳ್ಳಿ ಕಡೆಯಿಂದ ಕೆರೆಗೆ ಸೇರುವ ಮಲಿನ ನೀರು, ರಂಗಾಯಣ ಹಿಂಭಾಗದ ಕೆರೆ ನೀರು, ಯುಜಿಸಿ ಅಕಾಡೆಮಿ ತರಬೇತಿ ಸಂಸ್ಥೆ ಭಾಗದಲ್ಲಿ ಪ್ರತ್ಯೇಕವಾಗಿ ನೀರು ಸಂಗ್ರಹಿಸಿ ಪರೀಕ್ಷಿಸಿದಾಗ 'ಡಿ' ವರ್ಗೀಕರಣ ಎಂದು ನಮೂದಾಗಿದೆ. ಬೋಟಿಂಗ್ ಪಾಯಿಂಟ್ ಹಾಗೂ ಪೂರ್ಣಯ್ಯ ನಾಲೆ ಸೇರುವ ಜಾಗದಲ್ಲಿ (ಪಂಪ್‌ಹೌಸ್ ಬಳಿ) ಕೆರೆ ನೀರು ಸಂಗ್ರಹಿಸಿ ಪರೀಕ್ಷಿಸಿದಾಗ 'ಸಿ' ವರ್ಗೀಕರಣ ಎಂದು ನಮೂದಾಗಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ನಿಸರ್ಗದಲ್ಲಿ ದೊರೆಯುವ ನೀರನ್ನು ಸಂಗ್ರಹಿಸಿ ಬಳಕೆಗೆ ಯೋಗ್ಯವೇ ಎಂದು ವರ್ಗೀಕರಿಸಿದಾಗ, ಸಾಂಪ್ರದಾಯಿಕವಾಗಿ ಸಂಸ್ಕರಿಸದೆ ಸೋಂಕು ನಿವಾರಿಸಿದ ನಂತರ ಕುಡಿಯುವ ನೀರಿನ ಮೂಲವನ್ನಾಗಿ ('ಎ' ವರ್ಗೀಕರಣ) ಬಳಸುವುದು. 'ಬಿ' ವರ್ಗೀಕರಣ ಎಂದಿದ್ದರೆ ನೀರನ್ನು ವ್ಯವಸ್ಥಿತವಾಗಿ ಸ್ನಾನಕ್ಕೆ ಉಪಯೋಗಿಸುವುದು. ನೀರನ್ನು ಸಂಸ್ಕರಿಸಿ ಹಾಗೂ ಸೋಂಕು ನಿವಾರಿಸಿದ ನಂತರ(ಸಿ ವರ್ಗೀಕರಣ) ಕುಡಿಯುವ ನೀರಿನ ಮೂಲವನ್ನಾಗಿ ಬಳಸಬಹುದು.

ನೀರನ್ನು ವರ್ಗೀಕರಿಸಿದಾಗ 'ಡಿ' ವರ್ಗೀಕರಣ ಎಂದು ನಮೂದಾದರೆ ಮೀನುಗಾರಿಕೆ ಮತ್ತು ವನ್ಯಜೀವಿಗಳ ಬಳಕೆಗೆ ಯೋಗ್ಯ. ನೀರನ್ನು ವರ್ಗೀಕರಿಸಿದಾಗ 'ಇ' ವರ್ಗೀಕರಣ ಎಂದು ನಮೂದಾದರೆ ನಿಯಂತ್ರಿತ ವಿಲೇವಾರಿ, ಕೈಗಾರಿಕಾ ಶೀತಲೀಕರಣ ಹಾಗೂ ವ್ಯವಸಾಯಕ್ಕೆ ಉಪಯೋಗಿಸುವ ನೀರಿನ ಮೂಲವನ್ನಾಗಿ ಬಳಕೆ ಮಾಡಬಹುದು.

ಈ ವಿಶ್ಲೇಷಣಾ ವರದಿ ಅನ್ವಯ, ವಿವಿಧೆಡೆಯಿಂದ ತ್ಯಾಜ್ಯ ಮಲಿನ ನೀರು ಕೆರೆಗೆ ಸೇರುತ್ತಿರುವುದರಿಂದ ಕುಕ್ಕರಹಳ್ಳಿ ಕೆರೆಯ ನೀರಿನ ಗುಣಮಟ್ಟದ ಮಾದರಿಯನ್ನು ವಿಶ್ಲೇಷಣೆ ಮಾಡಿದಾಗ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನೀರಿನ ವರ್ಗೀಕರಣದನ್ವಯ ಕೆಲವೊಮ್ಮೆ 'ಡಿ' ಮತ್ತು 'ಸಿ' ನಲ್ಲಿ ವರ್ಗೀಕರಿಸಲಾಗಿದೆ. ಕಲುಷಿತ ನೀರು ಕೆರೆಗೆ ಸೇರುವುದರಿಂದ ಕೆರೆ ನೀರಿನ ಗುಣಮಟ್ಟವು ದಿನೇದಿನೆ ಕುಂದುತ್ತಿರುವುದರಿಂದ ಮಲಿನ ನೀರು ಕೆರೆಗೆ ಸೇರದಂತೆ ಸೂಕ್ತ ಕ್ರಮ ಜರುಗಿಸುವಂತೆ ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ

ಗ್ಯಾರಂಟಿಯಿಂದ ಜನರ ಜೀವನ ಮಟ್ಟ ಸುಧಾರಣೆ

ಸಾಲಿಗ್ರಾಮ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್

ಚುಂಚನಕಟ್ಟೆ, ಜೂ.17– ಚುನಾವಣಾ ಪೂರ್ವ ಕಾಂಗ್ರೆಸ್ ಪಕ್ಷ ರಾಜ್ಯದ ಜನತೆಗೆ ನೀಡಿದ್ದ ಭರವಸೆಯಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಬದ್ಧವಾಗಿ ಕೆಲಸ ಮಾಡುತ್ತಿದೆ ಎಂದು ಸಾಲಿಗ್ರಾಮ ತಾಲೂಕು ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚನ್ನಂಗೆರೆ ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆದ ಗ್ಯಾರೆಂಟಿ ಯೋಜನೆಗಳ ಅರಿವು ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪದಿದ್ದಲ್ಲಿ ಅಂತಹವರು ನೇರವಾಗಿ ಅನುಷ್ಠಾನ ಪ್ರಾಧಿಕಾರ ಮತ್ತು ತಾಲೂಕು ಆಡಳಿತಕ್ಕೆ ದೂರು ನೀಡಬಹುದು ಎಂದರು.

ಪಂಚ ಗ್ಯಾರಂಟಿ ಯೋಜನೆಗಳು ಅನುಷ್ಠಾನಕ್ಕೆ ಬಂದ ನಂತರ ಜನರ ಜೀವನ ಮಟ್ಟ ಸುಧಾರಿಸುವುದರ ಜೊತೆಗೆ ಸರ್ಕಾರದ ಯೋಜನೆಗಳು ನೇರವಾಗಿ ಅರ್ಹರ ಮನೆ ಬಾಗಿಲಿಗೆ ತಲುಪುತ್ತಿದ್ದು, ಇದರ ಪರಿಣಾಮವಾಗಿ ರಾಜ್ಯದ ಜನತೆ ನೆಮ್ಮದಿ ಜೀವನ ನಡೆಸುತ್ತಿದ್ದಾರೆ ಎಂದರು.

ಯೋಜನೆಗಳ ಅನುಷ್ಠಾನದ ವಿಚಾರದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಿದ ಅವರು ಅಧಿಕಾರಿಗಳು ಇದಕ್ಕೆ ಅವಕಾಶ ಮಾಡಿಕೊಡದಂತೆ ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಗ್ಯಾರಂಟಿ ಯೋಜನೆಗಳ ಜನಪ್ರಿಯತೆ ಮತ್ತು ಅನುಕೂಲಗಳ ಬಗ್ಗೆ ಸಹಿಸದ ವಿಪಕ್ಷಗಳು ಅಪಪ್ರಚಾರದಲ್ಲಿ ತೊಡಗಿದ್ದು ಇದಕ್ಕೆ ಯಾರು ಕಿವಿಗೊಡಬಾರದು ಎಂದ ಉದಯಶಂಕರ್ ನಮ್ಮ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿ ಇರುವವರೆಗೂ ಗ್ಯಾರಂಟಿ ಯೋಜನೆಗಳು ನಿರಂತರವಾಗಿರುತ್ತದೆ ಎಂದು ಘೋಷಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ವ್ಯಾಪ್ತಿಯ ವಿವಿಧ ಶಾಲಾ ವಿದ್ಯಾರ್ಥಿಗಳಿಗೆ ಪಂಚ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆ ನಡೆಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಇನ್ನು ಕೆಲ ವಿದ್ಯಾರ್ಥಿಗಳು ಪಂಚ ಗ್ಯಾರಂಟಿ ಯೋಜನೆ ಸಂಬಂಧ ಕಾವ್ಯ ವಾಚನ ಮಾಡಿ ಸಭೆ ಗಮನ ಸೆಳೆದರು.

ಈ ವೇಳೆ ಸೆಸ್ಕಾಂ, ಆಹಾರ ಇಲಾಖೆ, ರಸ್ತೆ ಸಾರಿಗೆ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೈಗಾರಿಕಾ ಇಲಾಖಾ ಅಧಿಕಾರಿಗಳು ಸಭೆಯಲ್ಲಿ ಇಲಾಖಾವಾರು ಸವಲತ್ತು ಮತ್ತು ಫಲಾನುಭವಿಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೂ ಮೊದಲು ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್, ಸದಸ್ಯರು ಮತ್ತು ಅಧಿಕಾರಿಗಳು ಚನ್ನಂಗೆರೆ ಗ್ರಾಮದ ಹತ್ತಾರು ಮನೆಗಳಿಗೆ ತೆರಳಿ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಜೊತೆ ಸಂವಾದ ನಡೆಸಿ ಅವರ ಅಭಿಪ್ರಾಯ ಸಂಗ್ರಹಿಸಿದರು.

ಚನ್ನಂಗೆರೆ ಗ್ರಾಪಂ ಅಧ್ಯಕ್ಷೆ ಸುನೀತಾ, ಮಾಜಿ ಅಧ್ಯಕ್ಷೆ ಅನಿತಾ, ಹರೀಶ್, ಸದಸ್ಯರಾದ ಅಶ್ವಥ್, ರಾಮಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಯೋಜನೆ ಪ್ರಾಧಿಕಾರದ ಸದಸ್ಯರಾದ ಮೂರ್ತಿ, ಮೋಹನ್, ವಾಸಿಂ, ಲೋಕೇಶ್, ಮಹದೇವ್, ರವಿ, ಉಷಾ, ತಾಪಂ ಇಓ ಎ.ಎನ್.ರವಿ, ಚೆಸ್ಕಾಂ ಎಇಇ ಮಧುಸೂದನ್, ಆಹಾರ ನಿರೀಕ್ಷಕರಾದ ಡಿ.ಆರ್.ಕುಮಾರ್, ಕೆ.ಪಿ. ಸುರೇಶ್ ಸೇರಿದಂತೆ ಸ್ಥಳೀಯ ಮುಖಂಡರು ಮತ್ತು ಗ್ರಾಮಸ್ಥರು ಹಾಜರಿದ್ದರು.



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್ ಫಲಾನುಭವಿಗಳಿಂದ ಅಭಿಪ್ರಾಯ ಸಂಗ್ರಹಿಸಿದರು.

ಕುಡಿಯುವ ನೀರು ಪೂರೈಸುವಲ್ಲಿ ಅಧಿಕಾರಿಗಳು ವಿಫಲ: ಆರೋಪ

ಹುಣಸೂರು, ಜೂ.17– ಗಿರಿಜನರ ಅಭಿವೃದ್ಧಿಗಾಗಿ ಕೇಂದ್ರ, ರಾಜ್ಯ ಸರ್ಕಾರಗಳು ಕೋಟ್ಯಾಂತರ ರೂ. ಖರ್ಚು ಮಾಡಿದರೂ ಆದಿವಾಸಿ ಹಾಡಿ ಗಿರಿಜನರಿಗೆ ಕುಡಿಯುವ ನೀರು ಪೂರೈಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ನೇರಳಕುಪ್ಪೆ ಬಿ ಹಾಡಿ ಜನರು ಆರೋಪಿಸಿದ್ದಾರೆ.

ತಾಲೂಕಿನ ಹನಗೂಡು ಹೋಬಳಿ ನೇರಳಕುಪ್ಪೆ ಬಿ ಹಾಡಿಯಲ್ಲಿ 500 ರಿಂದ 600ಕ್ಕೂ ಹೆಚ್ಚು ಆದಿವಾಸಿ ಗಿರಿಜನರು ವಾಸವಾಗಿದ್ದು, ಕಳೆದ ಒಂದು ತಿಂಗಳಿಂದ ನಲ್ಲಿಯಲ್ಲಿ ನೀರು ಬಾರದೆ ಸಂಕಷ್ಟಕ್ಕೆ ಒಳಗಾಗಿದ್ದು, ಬೋರ್‌ವೆಲ್ ಸಹ ಕೆಟ್ಟುಹೋಗಿ ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ಆದರೂ ಸ್ಥಳೀಯ ಗ್ರಾಪಂ ಪಿಡಿಓ ಈ ಬಗ್ಗೆ ಕ್ರಮ ವಹಿಸದೇ ಹಾಡಿ ಗಿರಿಜನರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಬಗ್ಗೆ ಗ್ರಾಪಂ ಪಿಡಿಓಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಮೆಕ್ಯಾನಿಕ್ ಇಲ್ಲ ಎಂದು ಕೈ ಚೆಲ್ಲಿ ಕುಳಿತ್ತಿದ್ದಾರೆ. ಇದರಿಂದಾಗಿ ಹಾಡಿ ಜನರು ಅಕ್ಕಪಕ್ಕದ ಜಮೀನು, ದೂರದ ತೋಟಗಳ ಪಂಪ್‌ಸೆಟ್ ನೀರನ್ನು ಆಶ್ರಯಿಸುವಂತಾಗಿದೆ. ಇಷ್ಟಾದರೂ ತಾಲೂಕು ಗಿರಿಜನಾಧಿಕಾರಿ, ಪಂಚಾಯಿತಿ ಅಧಿಕಾರಿಗಳಾಗಲಿ ಗಿರಿಜನರನ್ನು ನಿರ್ಲಕ್ಷಿಸಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಹಾಡಿ ಜನರೆಲ್ಲಾ ಗ್ರಾಪಂ ಮತ್ತು ತಾಲೂಕು ಗಿರಿಜನಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಹಾಡಿ ಮುಖಂಡರಾದ ಮಾಜಿ ಅಧ್ಯಕ್ಷ ಮಣಿ, ಪ್ರಕಾಶ, ಲಿಂಗಣ್ಣ, ರಘು, ಬಸಪ್ಪ, ರಂಗಯ್ಯ ಇತರರು ಎಚ್ಚರಿಕೆ ನೀಡಿದ್ದಾರೆ.



ಕೆಟ್ಟು ಹೋಗಿರುವ ಬೋರ್‌ವೆಲ್

ತಾರಕ ಜಲಾಶಯದ ಕೊನೆ ಭಾಗದ

ರೈತರ ಜಮೀನುಗಳಿಗೆ ನೀರು ಹರಿಸಲು ಒತ್ತಾಯ

ಹೆಚ್.ಡಿ.ಕೋಟೆ, ಜೂ.17– ತಾರಕ ಜಲಾಶಯದಿಂದ ಜಮೀನುಗಳಿಗೆ ನೀರು ಹರಿಸಲು ಪ್ರಾರಂಭಿಸಿ 40 ವರ್ಷ ಕಳೆದರೂ, ಕೊನೆ ಭಾಗದ ರೈತರಿಗೆ ಇನ್ನೂ ತಲುಪಿಲ್ಲ ಎಂದು ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ಜೆ.ಎಸ್. ರಾಜು ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾರಕ ಜಲಾಶಯ ಈ ಭಾಗದ ರೈತರ ಜೀವನಾಡಿಯಾಗಿದ್ದು, ಜಲಾಶಯದ ಬಲದಂಡೆಯ 0–37 ನೇ ತೂಬಿನವರೆಗೆ ಇದ್ದು, 27ನೇ ತೂಬಿನವರೆಗೆ ಮಾತ್ರ ನೀರು ಹರಿಯುತ್ತಿದೆ. ಮುಂದಿನ ಭಾಗದ ರೈತರ ಜಮೀನುಗಳಿಗೆ ನೀರು ಬಾರದೆ ಸಂಕಷ್ಟ ಎದುರಿಸುತ್ತಿದ್ದಾರೆ. ತಾರಕ ನಾಲೆ ಇಳಿಜಾರಿನ ಪ್ರದೇಶದಲ್ಲಿ ನಿರ್ಮಾಣವಾಗಿದ್ದು, ಮಳೆ ಬಂದಾಗ ನಾಲೆಗಳಲ್ಲಿ ಮಣ್ಣು ತುಂಬಿಕೊಳ್ಳುತ್ತದೆ. ಇದರಿಂದ ನಾಲೆಗಳಲ್ಲಿ ಗಿಡ ಗಂಟಿಗಳು ಬೆಳೆದು ಕಾಡು ಪ್ರಾಣಿಗಳ ವಾಸಸ್ಥಾನವಾಗಿದೆ. ಹೀಗಾಗಿ ನಾಲೆಗಳಲ್ಲಿ ಹೂಳು ತೆಗೆಸಿ ಈ ಭಾಗದ ರೈತರ ಜಮೀನುಗಳಿಗೆ ನೀರು ಹರಿಸಬೇಕೆಂದು ಮನವಿ ಮಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮಾದರಾಜು ಮಾತನಾಡಿ, ಜಕ್ಕಹಳ್ಳಿ, ಚೌಡಹಳ್ಳಿ ಭಾಗದ ನಾಲೆಗಳಲ್ಲಿ ಹೂಳು ತುಂಬಿಕೊಂಡು ಗಿಡಗಂಟಿಗಳು ಬೆಳೆದಿರುವುದರಿಂದ ಕಾಡಿನಿಂದ ಹುಲಿಯೊಂದು ಬಂದು ಸೇರಿಕೊಂಡಿದೆ. ಅಲ್ಲದೇ ಇತ್ತೀಚೆಗೆ 80 ಸಾವಿರ ಮೌಲ್ಯದ ಹಸುವನ್ನು ಬಲಿ ಪಡೆದಿದೆ. ಇದರಿಂದಾಗಿ ಈ ಭಾಗದ ರೈತರು ಜಮೀನುಗಳಲ್ಲಿ ಓಡಾಡಲು ಭಯ ಪಡುತ್ತಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆಗೆ ಬೋನಿಟ್ಟರೂ ಯಾವುದೇ ಪ್ರಯೋಜನವಾಗಿಲ್ಲ. ಮನುಷ್ಯರ ಮೇಲೆ ಹುಲಿ ದಾಳಿ ಮಾಡುವ ಮುನ್ನ ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿಯಬೇಕು ಎಂದು ಒತ್ತಾಯಿಸಿದರು.

ತಾರಕ ನಾಲೆಯಲ್ಲಿ ಹೂಳು ತೆಗೆಸಲು ಅನುದಾನ ನೀಡುವಂತೆ ನೀರಾವರಿ ಸಚಿವರು ಮತ್ತು ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದ್ದು, ನಮ್ಮ ಬೇಡಿಕೆಗೆ ಸ್ಪಂದಿಸದಿದ್ದಲ್ಲಿ ರೈತರೊಡನೆ ಪ್ರತಿಭಟನೆ ಮಾಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ನಾಗರಾಜು, ನಿರ್ದೇಶಕರಾದ ಶಿವಣ್ಣ, ರವಿಕುಮಾರ್, ಚಿನ್ನಸ್ವಾಮಿ ಇದ್ದರು.



ಸುದ್ದಿಗೋಷ್ಠಿಯಲ್ಲಿ ಜೆ.ಎಸ್.ರಾಜು ಮಾತನಾಡಿದರು.

ಸಮಾಜದ ಬೆಂಬಲದಿಂದ ಚೈತನ್ಯ ಹೆಚ್ಚಿದೆ: ಕುಂಬ್ರಳ್ಳಿ ಸುಬ್ಬಣ್ಣ

ನಂಜನಗೂಡು, ಜೂ.17– ರಾಜಕೀಯದಲ್ಲಿ ಉನ್ನತ ಸ್ಥಾನಮಾನ ದೊರೆತ ವೇಳೆ ಸಮಾಜ ಜೊತೆಗೆ ನಿಂತು ನೈತಿಕ ಬೆಂಬಲ ನೀಡಿದರೆ ಕೆಲಸ ಮಾಡುವ ಚೈತನ್ಯ, ಉತ್ಸಾಹ ಹೆಚ್ಚುತ್ತದೆ ಎಂದು ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಹೇಳಿದರು.

ನಗರದ ಗೌರಿಘಟ್ಟ ಬೀದಿಯಲ್ಲಿರುವ ನಾಯಕರ ಸಮುದಾಯ ಭವನದಲ್ಲಿ ಮಂಗಳವಾರ ತಾಲೂಕು ನಾಯಕರ ಸಂಘ ನೀಡಿದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಜ್ಯದ 33 ಜಿಲ್ಲೆಗಳಲ್ಲಿ ನಾಯಕ ಸಮುದಾಯದವರಿಗೆ ಜಿಲ್ಲಾಧ್ಯಕ್ಷ ಸ್ಥಾನ ದೊರಕಿರಲಿಲ್ಲ. ಇದನ್ನು ಮನಗಂಡು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ನನ್ನನ್ನು ಮೈಸೂರು ಜಿಲ್ಲೆಯ ಗ್ರಾಮಾಂತರ ಅಧ್ಯಕ್ಷನನ್ನಾಗಿ ನೇಮಕ ಮಾಡಿದ್ದಾರೆ. ಜಿಲ್ಲೆಯಲ್ಲಿ ನಾಯಕ ಸಮಾಜ ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಸಮಾಜದ ಜೊತೆಗೆ ಜಿಲ್ಲೆಯ ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ಕರೆದೊಯ್ಯುವ ಮೂಲಕ ಜಿಲ್ಲೆಯ ಅಭಿವೃದ್ಧಿಗಾಗಿ ದುಡಿಯುತ್ತೇನೆ. ಸಮುದಾಯ ನನ್ನನ್ನು ಗೌರವಿಸಿ ಬೆಂಬಲಿಸಿದೆ. ಸಮಾಜದ ಗೌರವಕ್ಕೆ ಚ್ಯುತಿ ತರದ ಹಾಗೆ ಕೆಲಸ ಮಾಡಿ ತಾಲೂಕಿಗೆ ಕೀರ್ತಿ ತರುತ್ತೇನೆ ಎಂದರು.

ತಾಲೂಕು ನಾಯಕರ ಸಂಘದ ಅಧ್ಯಕ್ಷ ಹೆಡತಲೆ ನಾಗರಾಜು ಮಾತನಾಡಿ, ಕುಂಬ್ರಳ್ಳಿ ಸುಬ್ಬಣ್ಣ ಜನರ ನಾಡಿ ಮಿಡಿತ ಅರಿತವರಾಗಿದ್ದಾರೆ. ಅವರು ತಮ್ಮ ಕಾರ್ಯ ಕ್ಷೇತ್ರದಲ್ಲಿ ಯಶಸ್ವಿಯಾಗಲಿ, ಜೊತೆಗೆ ನಮ್ಮ ತಾಲೂಕಿನ ಸಮಾಜದ ಹಲವಾರು ಮುಖಂಡರಿಗೆ ರಾಜಕೀಯವಾಗಿ ಉನ್ನತ ಸ್ಥಾನಮಾನ ಸಿಗಲಿ ಎಂದ ಅವರು ಸಮಾಜದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಜು.6ರಂದು ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ.80 ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ವಿದ್ಯಾರ್ಥಿಗಳು ಸಂಘಕ್ಕೆ ದಾಖಲೆ ಸಹಿತ ಅರ್ಜಿ ಸಲ್ಲಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಬಸವರಾಜು ಹಾಗೂ ಮಂಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಸಿ.ಚಂದ್ರು, ಶಿವನಂಜನಾಯಕ, ಮಹದೇವನಾಯಕ, ನಾಗೇಂದ್ರ, ಸುರೇಂದ್ರ, ರಂಗಸ್ವಾಮಿ, ಲಕ್ಷ್ಮಣ ಉಪಸ್ಥಿತರಿದ್ದರು.



ತಾಲೂಕು ನಾಯಕರ ಸಂಘದಿಂದ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ನಂಜನಗೂಡು, ಜೂ.17– ನಂಜನಗೂಡಿನ ಬಸವ ಸೇವಾ ಸಮಿತಿ, ವೀರಶೈವ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದಾಗಿದ್ದು, ಜೂ.30 ಕೊನೆ ದಿನ. ಅಗತ್ಯ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ನಗರದ 12ನೇ ಕ್ರಾಸ್‌ನಲ್ಲಿರುವ ನೀಲಕಂಠೇಶ್ವರ ಶಾಲೆ ಮತ್ತು ದೇವಿರಮ್ಮನಹಳ್ಳಿಯ ಜೆಎಸ್‌ಎಸ್ ಕಾಲೇಜಿನ ಎದುರು ಇರುವ ನಂದನ್ ಬುಕ್ ಸ್ಟೋರ್‌ನಲ್ಲಿ ಸಲ್ಲಿಸಬಹುದಾಗಿದೆ.

ನಾಳೆ ಸರ್ವ ಸದಸ್ಯರ ಸಭೆ

ಮೈಸೂರು, ಜೂ. 17 – ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ, ಸಂಧ್ಯಾ ಸುರಕ್ಷಾ ಟ್ರಸ್ಟ್‌ನ ಸರ್ವ ಸದಸ್ಯರ ಸಭೆಯನ್ನು ಜೂ. 19 ರಂದು ಮಧ್ಯಾಹ್ನ 4 ಗಂಟೆಗೆ ದೇವಯ್ಯನಹುಂಡಿಯಲ್ಲಿರುವ ಶಾಕಂಬರಿ ಧಾರ್ಮಿಕ ಕೇಂದ್ರದಲ್ಲಿ ಕರೆಯಲಾಗಿದೆ. ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ನಟರಾಜ್ ಜೋಯಿಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಡದೊರೆ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ

ತಿ.ನರಸೀಪುರ, ಜೂ.17– ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈಯಲು ವಿದ್ಯಾರ್ಥಿಗಳು ಯಾವುದೇ ಒತ್ತಡಕ್ಕೊಳಗಾಗಬಾರದು. ಕಲಿಕೆ ವಿಷಯದ ಆಯ್ಕೆ ಐಚ್ಛಿಕವಾಗಿರಬೇಕು. ಜೀವನದಲ್ಲಿ ಸಾಧಿಸುವ ಗುರಿ ನಿರ್ದಿಷ್ಟವಾಗಿರಲಿ ಎಂದು ಬೆಳಕು ಫೌಂಡೇಶನ್ ಅಧ್ಯಕ್ಷ ಜಿ.ಅರವಿಂದ್ ತಿಳಿಸಿದರು.

ತಾಲೂಕಿನ ಎಡದೊರೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಮಂಗಳವಾರ ತೆಪ್ಪ ನಡೆಸಿ ಜೀವನ ಸಾಗಿಸುವ ನುರಿತ ಈಜುಗಾರರ ತಂಡ ನೋಟ್‌ಬುಕ್ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿ ಅವರು ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು, ಕಲಿಯುವ ವಯಸ್ಸು ಮತ್ತೆ ಸಿಗಲ್ಲ. ಹಾಗಾಗಿ ಕಲಿಯುವ ಉತ್ಸಾಹದೊಂದಿಗೆ ವಿದ್ಯಾರ್ಥಿ ಬದುಕನ್ನು ಪೂರ್ಣವಾಗಿ ಅನುಭವಿಸಿಬಿಡಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಕಲಿಯುವ ಬೌದ್ಧಿಕ ಸಾಮರ್ಥ್ಯ ವಿಭಿನ್ನವಾಗಿರುತ್ತದೆ. 45 ನಿಮಿಷಗಳಷ್ಟೇ ನಮ್ಮ ಮೆದುಳು ಯಾವುದೇ ವಿಷಯವನ್ನು ಗ್ರಹಿಸುತ್ತದೆ. ಕಲಿಕೆಯಲ್ಲಿ ಒತ್ತಡ ಬೇಡ, ಇಷ್ಟವಾಗುವ ವಿಷಯ ಆಯ್ಕೆ ಮಾಡಿಕೊಂಡು, ನಿರಂತರ ಅಧ್ಯಯನ ಮೂಲಕ ವ್ಯಾಸಂಗ ಪೂರ್ಣಗೊಳಿಸಿ. ಕ್ರೀಡಾಕೂಟಗಳು ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಹುಮ್ಮಸ್ಸಿನಿಂದ ಭಾಗವಹಿಸಿ, ಶಿಕ್ಷಣದಿಂದ ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕು ಎಂದರು.

ತೆಪ್ಪ ನಡೆಸಿ ಜೀವನ ಸಾಗಿಸುವ ತಿ.ನರಸೀಪುರದ ನುರಿತ ಈಜುಗಾರರ ತಂಡವು ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸುವ ಮೂಲಕ ತಮ್ಮ ಸೇವಾ ಮನೋಭಾವ ಪ್ರದರ್ಶಿಸಿದರು.

ಈ ವೇಳೆ ಶಾಲೆ ದೈಹಿಕ ಶಿಕ್ಷಕ ಜಯಪ್ಪ ಮತ್ತು ಎಲ್ಲಾ ಶಿಕ್ಷಕ ಸಮೂಹ, ಈಜುಗಾರರಾದ ರವಿ, ಪ್ರಕಾಶ, ಪ್ರಜ್ವಲ್, ಕುಮಾರ್, ಶಶಿ, ವಿನಯ್, ಪಾಪಣ್ಣ, ರಾಜೇಶ್, ಶ್ರೀನಿವಾಸ, ಅವಿನಾಶ್, ಮಹೇಶ, ಪುರುಷೋತ್ತಮ್, ಪುನೀತ್ ಮತ್ತು ಬೆಳಕು ಫೌಂಡೇಶನ್ ಸಂಸ್ಥೆಯ ಉಪಾಧ್ಯಕ್ಷ ಆಲಗೂಡು ಹರೀಶ್ ಹಾಜರಿದ್ದರು.



ಎಡದೊರೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಲಾಯಿತು.

ವಿಜೃಂಭಣೆಯ ಶ್ರೀಸತ್ಯಪ್ಪನವರ ಕೊಂಡೋತ್ಸವ

ಸರಗೂರು, ಜೂ.17– ಪಟ್ಟಣದ ಗಾಣಿಗ ಸಮಾಜವತಿಯಿಂದ ಶ್ರೀಸತ್ಯಪ್ಪನವರ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಶ್ರೀಕಾಳಮಂಟೇಶ್ವರ ದುರ್ಗಾ ಪರಮೇಶ್ವರಿ ದೇವಸ್ಥಾನದ ಮುಂಭಾಗದ ಚಿಕ್ಕಗುಡಿಯಲ್ಲಿ ಸ್ಥಾಪಿತವಾಗಿರುವ ಸತ್ಯಪ್ಪ ನವರ ಕೊಂಡೋತ್ಸವ ಅಂಗವಾಗಿ ದೇವಸ್ಥಾನ ಹಾಗೂ ಪಟ್ಟಣವನ್ನು ತಳಿರು ತೋರಣ, ರಂಗೋಲಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬಳಿಕ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ಸಲ್ಲಿಸಿ, ಪಾರ್ವತಿ ಸಮೇತ ಚಂದ್ರಮೌಳೇಶ್ವರ ಉತ್ಸವ ಮೂರ್ತಿಗೆ ವಿವಿಧ ಹೂಗಳಿಂದ ಅಲಂಕರಿಸಿ ಪೂರ್ಣ ಕುಂಭ ಕಳಸ ಪೂಜೆ ನಂತರ ಸತ್ತಿಗೆ, ಮಂಗಳ ವಾದ್ಯ ಸೇರಿದಂತೆ ವಿವಿಧ ಕಲಾ ಪ್ರಕಾರಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಕರೆತರಲಾಯಿತು. ನಂತರ ದೇವಾಲಯದ ಮುಂದೆ ಹಾಕಲಾಗಿದ್ದ ಕೆಂಡದ ಮೇಲೆ ಭಕ್ತರು ನಡೆದು ಹರಕೆ ತೀರಿಸಿದರು.

ಹೊಸ ಬಟ್ಟೆ ತೊಟ್ಟು ಹೆಣ್ಣು ಮಕ್ಕಳು 101 ಕಳಸ ಹೊತ್ತು ಮೆರವಣಿಗೆಯಲ್ಲಿ ಸಾಗಿ ಹರಕೆ ತೀರಿಸಿದರು. ದೇವಾಲಯದಲ್ಲಿ ಸತ್ಯಪ್ಪ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಮಹಾಮಂಗಳಾರತಿ ಮಾಡಿ, ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು. ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು.

ಈ ವೇಳೆ ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಶ್ರೀಕಂಠಸ್ವಾಮಿ, ಗಣೇಶ್, ಪಪಂ ಸದಸ್ಯ ವೀರೇಶ್, ಶಿವಾರ್ಚಕ ಮಹದೇವಪ್ಪ, ಗಾಣಿಗ ಸಮಾಜದ ಯಜಮಾನರಾದ ಸೋಮಶೆಟ್ಟಿ, ಚಿಕ್ಕ ಯಜಮಾನ ಬಸವಶೆಟ್ಟಿ, ಗಡಿ ಯಜಮಾನ ಕೃಷ್ಣಶೆಟ್ಟಿ, ಮುಖಂಡರಾದ ವೆಂಕಟರಾಮಶೆಟ್ಟಿ ಶಿವಲಿಂಗಶೆಟ್ಟಿ, ನಂಜುಂಡಶೆಟ್ಟಿ ನಾಗರಾಜು, ಜಯ ರಾಮ್, ಚಿಕ್ಕಣ್ಣ, ಶಿವಣ್ಣ, ಮಹದೇವ, ವೈನ್ ಸ್ಟೋರ್ ಚಂದ್ರ, ಮಹದೇವ, ನಾಗ, ಕುಮಾರ್, ಸತೀಶ್ ಹಾಗೂ ಗಾಣಿಗ ಸಮಾಜದ ಬಂಧುಗಳು ಇದ್ದರು.



ಸತ್ಯಪ್ಪನವರ ಕೊಂಡೋತ್ಸವ ನಡೆಯಿತು.

ವಿಶ್ವನಾಥ್‌ಗೆ ರಾಜಕೀಯ ಅರಳು ಮರಳು

ಮಲ್ಕುಂಡಿ, ಜೂ.17– ಡಿಸೆಂಬರ್ ಒಳಗೆ ಮುಖ್ಯಮಂತ್ರಿ ಬದಲಾವಣೆಯಾಗಲಿದ್ದಾರೆ ಎಂದಿರುವ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಅವರಿಗೆ ರಾಜಕೀಯದಲ್ಲಿ ಅರಳು ಮರಳು ಆಗಿರಬಹುದು ಎಂದು ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ ವ್ಯಂಗವಾಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ರೀತಿ ಹೇಳಿಕೆ ನೀಡಲು ವಿಶ್ವನಾಥ್‌ಗೆ ಯಾರಾದರೂ ಸುಪಾರಿ ಕೊಟ್ಟಿದ್ದಾರೆಯೇ ಅಥವಾ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಇವರಿಗೆ ನಾವು ಸಿಎಂ ಬದಲಾಯಿಸುತ್ತೇವೆ ಎಂದು ಹೇಳಿದ್ದಾರೆಯೇ? ಎಂದು ಪ್ರಶ್ನಿಸಿದರು.

ಜಾತಿ ಗಣತಿ ಬಗ್ಗೆ ಟೀಕಿಸುವವರು ಬಿಜೆಪಿ ಆಡಳಿತದಲ್ಲಿ ಏಕೆ ಚಕಾರ ಎತ್ತಲಿಲ್ಲ. ಇದೀಗ ಕೇಂದ್ರ ಸರ್ಕಾರ ಜಾತಿ ಗಣತಿ ಬಗ್ಗೆ ಹೇಳಿದ್ದು, ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತದ ಬಗ್ಗೆ ಮಾತನಾಡುವ ಇವರು ವಿಮಾನ ದುರಂತದ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಸಿಎಂ ಸಿದ್ದರಾಮಯ್ಯ ಸಾಧನೆ ಸಹಿಸಲಾಗದೇ ವಿನಾಕಾರಣ ಇಲ್ಲ ಸಲ್ಲದ ಆರೋಪ ಮಾಡುವುದು ಸರಿಯಲ್ಲ. ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರ ವನ್ನು ಟೀಕಿಸುವ ನೈತಿಕತೆ ಇವರಿಗಿಲ್ಲ ಎಂದರು.

ಒಂದು ವೇಳೆ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯರನ್ನು ಕಡೆಗಣಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಾಗುತ್ತದೆ ಎಂಬುದು ಹೈಕಮಾಂಡ್‌ಗೆ ಗೊತ್ತಾಗಿದೆ. ಅಲ್ಲದೇ ಮುಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಇರುವುದರಿಂದ ಮುಖ್ಯಮಂತ್ರಿ ಸ್ಥಾನ ಬದಲಾವಣೆಯಾಗುವುಲ್ಲ. ವಿಶ್ವನಾಥ್ ಅವರು ತಮ್ಮ ಪುತ್ರನನ್ನು ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಮೊದಲು ಗೆಲ್ಲಿಸಿಕೊಂಡು ಬರಲಿ. ನಂತರ ರಾಜ್ಯದ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡಲಿ. ಹಗಲುಗನಸು ಕಾಣುವುದನ್ನು ಬಿಟ್ಟು ಜನಸೇವೆಗೆ ಮುಂದಾಗಲಿ ಎಂದರು. ಈ ವೇಳೆ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಬಿ.ಶಂಕರ್ ಸೇರಿದಂತೆ ಇನ್ನಿತರರಿದ್ದರು.

ಅಪರಿಚಿತ ಶವ ಪತ್ತೆ

ನಂಜನಗೂಡು, ಜೂ.17– ತಾಲೂಕಿನ ಹಂಡುವಿನಹಳ್ಳಿ ಸಮೀಪದ ಹುಲ್ಲಹಳ್ಳಿ ನಾಲೆಯಲ್ಲಿ 50 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ. ಕಪ್ಪು ಚಡ್ಡಿ ಮತ್ತು ತುಂಬು ತೋಳಿನ ಶರ್ಟ್ ಧರಿಸಿರುತ್ತಾರೆ. ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮಾಂಸ ಖಂಡಗಳೆಲ್ಲಾ ತಿಂದು ಹೋಗಿ ಬರಿ ಮೂಳೆ ಕಾಣುತ್ತಿರುತ್ತದೆ. ವಾಸುದಾರರಿದ್ದಲ್ಲಿ ನಂಜನಗೂಡು ಗ್ರಾಮಾಂತರ ಠಾಣೆ ಸಂಪರ್ಕಿಸುವಂತೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಕೋರಿದ್ದಾರೆ.

ಚಿನ್ನಾಭರಣ, ನಗದು ಕಳವು

ನಂಜನಗೂಡು, ಜೂ.17– ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ನಗರದ ಥಾಮಸ್ ಲೇಔಟ್‌ನಲ್ಲಿ ನಡೆದಿದೆ.

ಬಡಾವಣೆ ನಿವಾಸಿ ಡಾ.ಮಧು ಅವರ ಮನೆಯಲ್ಲೇ ಕಳ್ಳತನವಾಗಿರುವುದು. ಮಧು ಅವರು ಶನಿವಾರ ಚಿಕ್ಕಮಗಳೂರು ಪ್ರವಾಸ ಕೈಗೊಂಡಿದ್ದರು. ಈ ವೇಳೆ ಮನೆ ಬೀಗ ಮುರಿದಿರುವ ದುಷ್ಕರ್ಮಿಗಳು 200 ಗ್ರಾಂ ಚಿನ್ನಾಭರಣ, 3.5 ಲಕ್ಷ ರೂ. ಹಣ ದೋಚಿ ಪರಾರಿಯಾಗಿದ್ದಾರೆ. ಮಂಗಳವಾರ ಮಧು ಅವರು ಮನೆಗೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಠಾಣೆ ಇನ್ಸ್‌ಪೆಕ್ಟರ್ ರವೀಂದ್ರ, ಶ್ವಾನದಳ ಹಾಗೂ ಬೆರಳಚ್ಚು ತಜ್ಞರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಎಲ್‌ಸಿ ಡಾ.ಯತೀಂದ್ರ ಬಗ್ಗೆ ಲಘುವಾಗಿ ಮಾತನಾಡಿರುವ

ಮಾಜಿ ಸಂಸದ ಪ್ರತಾಪ್ ಸಿಂಹ ಬಹಿರಂಗ ಕ್ಷಮೆಯಾಚಿಸಲಿ

ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಒತ್ತಾಯ

ತಿ.ನರಸೀಪುರ, ಜೂ.17– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರ ಬಗ್ಗೆ ಲಘುವಾಗಿ ಮಾತನಾಡಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಕೂಡಲೇ ತಮ್ಮ ಹೇಳಿಕೆ ವಾಪಸ್ ಪಡೆದು ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಒತ್ತಾಯಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಯತೀಂದ್ರ ಅವರ ಬಗ್ಗೆ ಹೇಳಿಕೆ ನೀಡಿರುವ ಮಾಜಿ ಸಂಸದರಿಗೆ ಬುದ್ಧಿ ಭ್ರಮಣೆಯಾದಂತಾಗಿದ್ದು, ಯಾರ ಬಗ್ಗೆ ಮಾತನಾಡುತ್ತಿದ್ದೇನೆ ಎಂಬ ಬಗ್ಗೆ ಅರಿವಿಲ್ಲ ಎನಿಸುತ್ತಿದೆ ಎಂದು ಕಿಡಿಕಾರಿದರು.

2018ರಲ್ಲಿ ಡಾ.ಯತೀಂದ್ರ ಅವರು ಶಾಸಕರಾಗಿ ಬಹುಮತದಿಂದ ಆಯ್ಕೆಯಾದರು. ಇದೀಗ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಗೆಲ್ಲಿಸಲು ದಂಡನಾಯಕರಂತೆ ನಿಂತು ಕೆಲಸ ಮಾಡಿದ್ದಾರೆ. ಅಂತಹವರ ಬಗ್ಗೆ ಲಘುವಾಗಿ ಮಾತನಾಡುವ ನೈತಿಕತೆ ನಿಮಗಿದೆಯೇ ಎಂಬುದನ್ನು ಅರ್ಥ ಮಾಡಿಕೊಳ್ಳಿ ಪ್ರತಾಪ್ ಸಿಂಹ ಅವರೇ ಡಾ.ಯತೀಂದ್ರ ಕ್ಷೇತ್ರದಲ್ಲಿ ಎಲ್ಲಾ ಸಮುದಾಯ, ಎಲ್ಲಾ ಧರ್ಮದ ಕಾರ್ಯಕರ್ತರನ್ನು ಹೊಂದಿದ್ದಾರೆ. ಅವರೆಂದೂ ತಾವು ಮುಖ್ಯಮಂತ್ರಿ ಮಗ ಎಂಬ ಹಮ್ಮಿನಿಂದ ಮಾತನಾಡಿಲ್ಲ. ಸರಳ ಸಜ್ಜನಿಕೆ ಸ್ವಭಾವದ ಪ್ರತಿರೂಪವಾಗಿರುವ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ ತಾನು ವೈದ್ಯ ಎಂದು ಅಹಂಕಾರ ತೋರಿಲ್ಲ. ಅವರ ಬಗ್ಗೆ ನೀವು ಕೇವಲವಾಗಿ ಮಾತನಾಡಿ ಡಾ.ಯತೀಂದ್ರರಿಗೆ ಜಾತಿ ಗಣತಿ ಬಗ್ಗೆ ಏನು ಗೊತ್ತಿದೆ. ಅವರು ಇನ್ನೂ ಇದರ ಬಗ್ಗೆ ತಿಳಿದುಕೊಳ್ಳಬೇಕಿದೆ ಎಂದು ಹೇಳಿಕೆ ನೀಡಿದ್ದೀರಾ. ನಿಮಗಿರುವಂತೆ ಯತೀಂದ್ರ ಅವರಿಗೂ ರಾಜಕೀಯ ಪ್ರಜ್ಞೆ ಅರಿವು ಎಲ್ಲವೂ ಇದೆ. ವೈಜ್ಞಾನಿಕ ಹಾಗೂ ಅವೈಜ್ಞಾನಿಕ ನಿಮಗೊಬ್ಬರಿಗೆ ಗೊತ್ತಿದೆ ಎನ್ನುವಂತೆ ಮಾತನಾಡಬೇಡಿ. ಯತೀಂದ್ರ ರವರು ಏನು ಹೇಳಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಮುಂದುವರೆದ ಹಾಗೂ ಹಿಂದುಳಿದ ವರ್ಗಗಳೆರಡರಲ್ಲೂ ಬಡವರಿದ್ದಾರೆ. ಸಾಮಾಜಿಕ, ಶೈಕ್ಷಣಿಕ ಸರ್ವೇಯನ್ನು ಸರ್ಕಾರ ಮಾಡುತ್ತಿದೆ. ಅಂದೇ ನಮ್ಮ ವರದಿ ಒಪ್ಪಿದ್ದರೆ ಎಲ್ಲರಿಗೂ ಅನುಕೂಲವಾಗುತ್ತಿತ್ತು ಎಂದೇಳಿದ್ದಾರೆ ಅಷ್ಟೇ, ಇದು ನಿಮಗೆ ಅರ್ಥವಾಗಿಲ್ಲವೇ? ಎಂದು ಪ್ರಶ್ನಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಪಕ್ಷವೇ ನಿಮಗೆ ಟಿಕೆಟ್ ಕೊಡದೇ ಮೂಲೆ ಗುಂಪು ಮಾಡಿತು. ಯಾಕೆ ಎಂಬುದು ನಿಮಗೆ ಗೊತ್ತಿದೆಯಾ. ನಿಮ್ಮ ಕ್ಷೇತ್ರದ ಶಾಸಕರು ಮಾಡಿದ ಅಭಿವೃದ್ಧಿ ಕೆಲಸವನ್ನು ನಾನೇ ಮಾಡಿದ್ದು ಎಂದು ಬಿಂಬಿಸಲು ಹೊರಟಿದ್ದರಲ್ಲ. ಅದಕ್ಕೆ ನಿಮಗೆ ಪಕ್ಷ ಸರಿಯಾದ ಪಾಠ ಕಲಿಸಿದೆ.

> “ಪ್ರತಾಪ್ ಸಿಂಹ ಅವರೇ ಸಿಎಂ ಸಿದ್ದರಾಮಯ್ಯ ಬಗ್ಗೆ ಮಾತನಾಡಿ ರಾಜಕೀಯದಲ್ಲಿ ನಿವೃತ್ತಿ ಹೊಂದಿದ್ದೀರಿ. ಆದರೆ ನೀವು ಮೈಸೂರು ಸಿಟಿಗೆ ಮಾತ್ರ ಪ್ರತಾಪ್ ಸಿಂಹ ಇಡೀ ರಾಜ್ಯಕ್ಕೆ ಯಾವುದಾದರೂ ಇದ್ದರೆ ಅದು ಡಾ.ಯತೀಂದ್ರ ಮಾತ್ರ. ಅವರ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆಯಿಂದ ಮಾತನಾಡಿ. ಇಲ್ಲದಿದ್ದರೆ ಮುಂದಿನ ದಿನದಲ್ಲಿ ನಿಮ್ಮ ಮನೆಗೆ ಮುತ್ತಿಗೆ ಹಾಕಬೇಕಾಗುತ್ತದೆ.
> ಪುರಿ ನಟೇಶ್, ಯುವ ಘಟಕದ ಉಪಾಧ್ಯಕ್ಷ.

ಮುಂದೆಯೂ ನಿಮಗೆ ನಿಮ್ಮ ಪಕ್ಷದಲ್ಲಿ ಏನೂ ಸಿಗುವುದಿಲ್ಲ. ಸುಖಾ ಸುಮ್ಮನೆ ಸಿದ್ದರಾಮಯ್ಯ ಹಾಗೂ ಯತೀಂದ್ರ ಅವರನ್ನು ತೇಜೋವಧೆ ಮಾಡುವ ಕೆಲಸ ಕೈ ಬಿಡಿ. ಅವರ ಹಿಂದೆ ಬಲಿಷ್ಠವಾದ ಸೈನ್ಯ ಇದೆ ಎಂಬುದನ್ನು ಮರೆಯಬೇಡಿ ಎಂದು ಎಚ್ಚರಿಸಿದರು.

ಪುರಸಭಾ ಸದಸ್ಯರಾದ ಆರ್.ಚೇತನ್, ಗುರುಸ್ವಾಮಿ ಹಾಗೂ ಗಣೇಶ್ ಮಾತನಾಡಿ, ಡಾ.ಯತೀಂದ್ರ ಅವರು ಎಲ್ಲಾ ಸಮುದಾಯಕ್ಕೂ ನ್ಯಾಯ ಒದಗಿಸಲು ಶ್ರಮಿಸುತ್ತಿದ್ದಾರೆ. ಪ್ರತಾಪ್ ಸಿಂಹ ಸಂಸದರಾಗಿದ್ದರೂ, ಕ್ಷೇತ್ರದಲ್ಲಿ ಡಾ.ಯತೀಂದ್ರ ಮಾಡಿರುವ ಶೇ.10ರಷ್ಟು ಅಭಿವೃದ್ಧಿ ಕಾರ್ಯವನ್ನು ತಮ್ಮ ಕ್ಷೇತ್ರದಲ್ಲಿ ಮಾಡಲು ಸಾಧ್ಯವಾಗಿಲ್ಲ. ಯತೀಂದ್ರ ಅವರನ್ನು ಕುರಿತು ಜಾತಿ ಗಣತಿ ಬಗ್ಗೆ ಅವರಿಗೇನು ಗೊತ್ತಿಲ್ಲ ಎಂದು ವ್ಯಂಗ್ಯ ಮಾಡಿರುವುದನ್ನು ಇಡೀ ಕ್ಷೇತ್ರದ ಎಲ್ಲಾ ಸಮುದಾಯ ಖಂಡಿಸುತ್ತದೆ. ಮುಂದೆ ಇದೇ ರೀತಿ ವ್ಯತಿರಿಕ್ತ ಹೇಳಿಕೆ ನೀಡಿದ್ದೇ ಆದಲ್ಲಿ ಕಾಂಗ್ರೆಸ್ ಪಕ್ಷ ಪ್ರತಿಭಟನೆ ನಡೆಸುತ್ತದೆ. ಹಾಗಾಗಿ ಈಗ ಪ್ರತಾಪ್ ಸಿಂಹ ಅವರು ಯತೀಂದ್ರ ಬಗ್ಗೆ ನೀಡಿರುವ ಹೇಳಿಕೆ ಹಿಂಪಡೆದು ಬಹಿರಂಗ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆಡಿಪಿ ಸದಸ್ಯ ಎಲ್‌ಐಸಿ ನಿಂಗರಾಜು, ಮಾಜಿ ಸದಸ್ಯ ಎಂ.ಮಿಥುನ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಬಣ್ಣ ಬಸವರಾಜು, ವರುಣ ಯುವ ಘಟಕದ ಅಧ್ಯಕ್ಷ ಅಮಾಸೆ ಗೌಡ, ಉಪಾಧ್ಯಕ್ಷ ಪುರಿ ನಟೇಶ್, ಮುಖಂಡರಾದ ಫೈನಾನ್ಸ್ ಕಾಂತರಾಜು, ಅಶ್ವತ್ಥಾಮ, ಮಂಜು ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಎಂ.ರಮೇಶ್ ಮಾತನಾಡಿದರು.

ಪ್ರತಿ ಶಾಲೆಯಲ್ಲಿ ಕಡ್ಡಾಯವಾಗಿ ಪರಿಸರ, ಹವಾಮಾನ ವೈಪರೀತ್ಯ ಜಾಗೃತಿ ಕ್ಲಬ್ ರಚನೆ

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದೇಶ ● ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮ್ಯಾರಥಾನ್‌ನಲ್ಲಿ ಭಾಗಿ



ವಿಶ್ವ ಪರಿಸರ ದಿನದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಮ್ಯಾರಥಾನ್‌ಗೆ ವಿಧಾನಸೌಧದ ಎದುರು ಚಾಲನೆ ನೀಡಲಾಯಿತು.



"ನಮ್ಮ ನಡಿಗೆ–ಸ್ವಚ್ಛ ಪರಿಸರದ ಕಡೆಗೆ" ಜಾಥಾದಲ್ಲಿ ಸೈಕಲ್ ಸವಾರಿ ಮಾಡುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಮನ ಸೆಳೆದರು.

ಬೆಂಗಳೂರು, ಜೂ.17(ಕೆಎಂಶಿ)– ರಾಜ್ಯದ ಪ್ರತಿಯೊಂದು ಶಾಲೆಯಲ್ಲಿ ಕಡ್ಡಾಯವಾಗಿ ಪರಿಸರ, ಹವಾಮಾನ ವೈಪರೀತ್ಯ ಜಾಗೃತಿ ಕ್ಲಬ್ ರಚನೆಗೆ ಆದೇಶಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ವಿಶ್ವ ಪರಿಸರ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳನ್ನು ಒಳಗೊಂಡ ಜಾಗೃತಿ ಕ್ಲಬ್ ರಚನೆ ಮಾಡಬೇಕು. ಪ್ರಕೃತಿ ಉಳಿಸುವ ದೊಡ್ಡ ಹೋರಾಟ ಹಾಗೂ ವಿದ್ಯಾರ್ಥಿಗಳಲ್ಲಿ ಪರಿಸರ ಅರಿವು ಮೂಡಿಸಬೇಕು. ಮರ ಬೆಳೆಸಲು ಒಂದೊಂದು ಶಾಲೆ ಆಯಾ ಪ್ರದೇಶಗಳನ್ನು ದತ್ತು ಪಡೆಯಬೇಕು ಎಂದರು.

ಹಸಿರು ಮತ್ತು ಸ್ವಚ್ಛತೆ ಸರ್ಕಾರದ ಧ್ಯೇಯ. ಮುಂದಿನ ಪೀಳಿಗೆಗೆ ಇದರ ಅರಿವು ಮೂಡಿಸುವುದು ಕರ್ತವ್ಯವಾಗಿದೆ. ಕರ್ನಾಟಕದ ದೊಡ್ಡ ಆಸ್ತಿ ನಮ್ಮ ಪ್ರಕೃತಿ, ಪರಿಸರದಿಂದ ಪ್ಲಾಸ್ಟಿಕ್ ನಿರ್ಮೂಲನೆ ನಮ್ಮ ಉದ್ದೇಶ ಮತ್ತು ಜವಾಬ್ದಾರಿಯಾಗಬೇಕು.

ಪ್ರತಿಯೊಬ್ಬ ವಿದ್ಯಾರ್ಥಿ ಒಂದು ಸಸಿ ದತ್ತು ಪಡೆಯಬೇಕು. ರಾಜ್ಯಾದ್ಯಂತ 50 ಸಾವಿರಕ್ಕೂ ಹೆಚ್ಚು ಮಕ್ಕಳು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ.

ದೆಹಲಿ, ಅಹಮದಾಬಾದ್‌ನಲ್ಲಿ ಎರಡು ದಿನಗಳ ಹಿಂದೆ 49 ಡಿಗ್ರಿವರೆಗೆ ಉಷ್ಣಾಂಶ ವಿತ್ತು. ಆಗ ಬೆಂಗಳೂರಲ್ಲಿ 22 ರಿಂದ 23 ಡಿಗ್ರಿ ಇತ್ತು. ಇದೇ ನಮ್ಮ ಕರ್ನಾಟಕದ ಹಾಗೂ ಬೆಂಗಳೂರಿನ ಆಸ್ತಿ ಎಂದರು.

ಮನುಷ್ಯನ ಜೀವನ ಪದ್ಧತಿ ಪ್ರಕೃತಿಯೊಂದಿಗೆ ಬೆಸೆದುಕೊಂಡಿದೆ, ನಾವೆಲ್ಲ ಪರಿಸರದ ಒಂದು ಭಾಗ, ಶುದ್ಧ ಗಾಳಿ, ನೀರು, ಪರಿಸರ ನಿರ್ಮಾಣ ನಮ್ಮೆಲ್ಲರ ಅತಿದೊಡ್ಡ ಜವಾಬ್ದಾರಿ.

ಪರಿಸರ ಉಳಿಸುವ ಅರಿವು ಯುವಜನಾಂಗಕ್ಕೆ ಬರಬೇಕು, ಪರಿಸರ ನಮ್ಮ ಮನೆ, ಅದನ್ನು ನಾಶ ಮಾಡದಂತೆ ನಾವೆಲ್ಲರೂ ಹೆಜ್ಜೆ ಹಾಕಬೇಕಿದೆ.

ಸುಮಾರು 5 ಸಾವಿರಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ವಿಧಾನಸೌಧದ ಸುತ್ತಲೂ ನಡಿಗೆ ಮೂಲಕ ಜನರಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಿದ್ದಾರೆ, ಶಾಲಾ ದಿನಗಳಲ್ಲಿ ನಾನು ಸಹಾ ಇಂತಹ ಕಾರ್ಯಕ್ರಮಗಳ ಭಾಗವಾಗಿದ್ದೆ, ಪರಿಸರ ದಿನಾಚರಣೆ ಮುಂದಿನ ಪೀಳಿಗೆಗಾಗಿ ಎಂದರು.

ವಿದ್ಯಾರ್ಥಿ ಹಾಗೂ ಯುವ ಸಮುದಾಯದಲ್ಲಿ ಪರಿಸರ ಪ್ರಜ್ಞೆ ಬೆಳೆಸಲು ಹಲವು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಅವರು ವಿದ್ಯಾರ್ಥಿಗಳೊಂದಿಗೆ "ಹಸಿರು ಉಳಿಸಿ, ಮರ ಬೆಳೆಸಿ, ಕಸ ತ್ಯಜಿಸಿ, ಮರ ಬೆಳೆಸಿ" ಘೋಷಣೆ ಕೂಗಿದರು.

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ನಿಷೇಧ



ಮೈಸೂರು, ಜೂ. 17(ಆರ್‌ಕೆ)– ರಾಜ್ಯ ಉಚ್ಚನ್ಯಾಯಾಲಯದ ನಿರ್ದೇಶನದನ್ವಯ ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಯನ್ನು ನಿಷೇಧಿಸಲಾಗಿದೆ ಎಂದು ಮೈಸೂರು ಪಶ್ಚಿಮ ಆರ್‌ಟಿಓ ಸಿ.ಎನ್. ರಾಮಚಂದ್ರ ತಿಳಿಸಿದ್ದಾರೆ.

ಸೇವೆ ಸ್ಥಗಿತಗೊಳಿಸಲು ನ್ಯಾಯಾಲಯ ನೀಡಿದ್ದ 12 ವಾರಗಳ ಗಡುವು ಮುಗಿದ ನಂತರ ನಿನ್ನೆ (ಜೂ. 16)ಯಿಂದ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯನ್ನು ಸಾರಿಗೆ ಇಲಾಖೆಯು ನಿಷೇಧಿಸಿದೆ ಎಂದು ಅವರು ತಿಳಿಸಿದರು.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರರಾವ್ ಮತ್ತು ನ್ಯಾಯಮೂರ್ತಿಗಳಾದ ಶ್ರೀನಿವಾಸ, ಹರೀಶ್ ಕುಮಾರ್ ಅವರನ್ನೊಳಗೊಂಡ ವಿಭಾಗೀಯ ಪೀಠವು ಊಬರ್ ಇಂಡಿಯಾ ಸಿಸ್ಟಮ್ಸ್ ಪ್ರೈ ಲಿ., ಎಎನ್‌ಐ ಟೆಕ್ನಾಲಜೀಸ್ ಪ್ರೈ.ಲಿ, (ಓಲಾ ನಿರ್ವಹಿಸುವ) ಮತ್ತು ರ್‍ಯಾಪಿಡ್ ಟ್ರಾನ್ಸ್‌ಪೋರ್ಟೇಷನ್ ಸರ್ವಿಸಸ್ ಪ್ರೈ.ಲಿ, (ರ್‍ಯಾಪಿಡೋ ನಿರ್ವಹಿಸುವ) ಸೇರಿದಂತೆ ಇತರೆ ಸಂಸ್ಥೆಗಳು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರವು ಮೋಟಾರು ವಾಹನ ಕಾಯ್ದೆಯಡಿ ನಿರ್ದಿಷ್ಟ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ತಿಳಿಸುವವರೆಗೆ ಬೈಕ್ ಟ್ಯಾಕ್ಸಿಗಳಂತಹ ಸೇವೆಗಳು ಕಾರ್ಯ ನಿರ್ವಹಿಸಲು ಅವಕಾಶ ನೀಡಬಾರದು ಎಂದು ಹೈಕೋರ್ಟ್ ತೀರ್ಪು ನೀಡಿತ್ತು. ಈ ಮಧ್ಯೆ ಕೋರ್ಟ್ ಆದೇಶ ಉಲ್ಲಂಘಿಸಿದ 100ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ಬೆಂಗಳೂರಿನ ಆರ್‌ಟಿಓ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸೆಸ್ಕ್ ವ್ಯಾಪ್ತಿಯ ಮಳೆ ಹಾನಿ ತಡೆಗೆ ಕ್ರಮ ವಹಿಸಿ



ಮೈಸೂರಿನ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು

ಮೈಸೂರು, ಜೂ. 17(ಆರ್‌ಕೆ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ವ್ಯಾಪ್ತಿಯಲ್ಲಿ ಮಳೆಯಿಂದಾಗುವ ಹಾನಿ ತಡೆಗಟ್ಟುವಂತೆ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಇಂದಿಲ್ಲಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳೆಯಿಂದಾಗಿ ಅಲ್ಲಲ್ಲಿ ವಿದ್ಯುತ್ ತಂತಿಗಳು ತುಂಡಾಗಿದ್ದು, ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟಿರುವುದಲ್ಲದೆ, ಯುಜಿ ಕೇಬಲ್ ಡ್ಯಾಮೇಜ್ ಆಗಿರುವುದರಿಂದ ಹಲವು ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ ಎಂದರು.

ಕುಡಿಯುವ ನೀರು ಪೂರೈಕೆ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಸಬೇಕು, ಹಾನಿಯಾಗಿರುವ ಪ್ರದೇಶಗಳಲ್ಲಿ ಫಲಾನುಭವಿಗಳಿಗೆ ಪರಿಹಾರ ತಲುಪಿಸುವುದು, ಬಾಕಿ ಇರುವ ವಿದ್ಯುತ್ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುವಂತೆಯೂ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮೈಸೂರು ವಿಮಾನ ನಿಲ್ದಾಣದ ರನ್‌ವೇಗಾಗಿ ಹೈವೇ ಮಾರ್ಗ ಬದಲಾಯಿಸಬೇಕಾಗಿರುವುದರಿಂದ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ, ಮಾರ್ಗಗಳ ಸ್ಥಳಾಂತರ ಪ್ರಕ್ರಿಯೆ ಕ್ಷಿಪ್ರಗತಿಯಲ್ಲಿ ಸಾಗಬೇಕು, ಪ್ರಧಾನಮಂತ್ರಿಗಳ ಕುಸುಮ್–ಸಿ ಯೋಜನೆ ಅನುಷ್ಠಾನಕ್ಕೆ ಭೂಮಿ ಮಂಜೂರು, ಯುಜಿ ಕೇಬಲ್ ಅಳವಡಿಕೆ ಕಾಮಗಾರಿ ಚುರುಕುಗೊಳಿಸುವಂತೆಯೂ ಸೆಸ್ಕ್ ಅಧಿಕಾರಿಗಳಿಗೆ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲರಾಜ್, ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸೆಸ್ಕ್ ಚೀಫ್ ಇಂಜಿನಿಯರ್ ಡಿ.ಜೆ. ದಿವಾಕರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಸುನಿಲ್‌ಕುಮಾರ್, ಕೆಪಿಟಿಸಿಎಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಟಿ.ಎಸ್. ರಮೇಶ್ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.

ಶಿರಾಡಿಘಾಟ್‌ನಲ್ಲಿ ಗುಡ್ಡ ಕುಸಿತ

ಬೆಂಗಳೂರು–ಮಂಗಳೂರು ಸಂಚಾರದಲ್ಲಿ ವ್ಯತ್ಯಯ



ಬೆಂಗಳೂರು: ಸಕಲೇಶಪುರ–ಹಾಸನದ ಶಿರಾಡಿಘಾಟ್ ಮಾರನಹಳ್ಳಿ ಸಮೀಪದ ಹೆಗ್ಗದ್ದೆ ಗ್ರಾಮದಲ್ಲಿ 20 ದಿನಗಳ ಹಿಂದೆ ಸಣ್ಣ ಪ್ರಮಾಣದ ಭೂ ಕುಸಿತ ಸಂಭವಿಸಿದ ಸ್ಥಳದಲ್ಲಿ ಈಗ ಮತ್ತೆ ಎತ್ತರದ ಗುಡ್ಡದಿಂದ ಹಂತ ಹಂತವಾಗಿ ಮಣ್ಣು ಹಾಗೂ ಮರಗಳು ಕುಸಿಯುತ್ತಿವೆ. ಮಳೆಯ ನಡುವೆ ಭಾರಿ ಪ್ರಮಾಣದ ಮಣ್ಣು ಕುಸಿದು ಬಿದ್ದಿದೆ, ಅದೃಷ್ಟವಶಾತ್ ವಾಹನಗಳು ಮತ್ತೊಂದು ಪಥದಲ್ಲಿ ಚಲಿಸುತ್ತಿದ್ದರಿಂದ ಭಾರಿ ಅನಾಹುತ ತಪ್ಪಿದೆ.

ಸುಮಾರು ನೂರು ಮೀಟರ್‌ಗೂ ಅಧಿಕ ಉದ್ದಕ್ಕೆ ಗುಡ್ಡ ಕಡಿದ ಪರಿಣಾಮ ಪದೇ ಪದೆ ಗುಡ್ಡದ ಮಣ್ಣು ಕುಸಿಯುತ್ತಿದೆ. ಪಕ್ಕದಲ್ಲೇ ಯಶಸ್ವಿ ಎನ್ನುವವರ ಮನೆಯಿದ್ದು, ಅಲ್ಲಿಗಿದ್ದ ದಾರಿಯೇ ಮುಚ್ಚಿಹೋಗಿ ಅವರು ಕುಟುಂಬ ಸಮೇತವಾಗಿ ಮನೆ ಖಾಲಿಮಾಡಿಕೊಂಡು ಊರು ತೊರೆದಿದ್ದಾರೆ. ಮೇಲ್ಭಾಗದ ಮೊಬೈಲ್ ಟವರ್ ಬೀಳುವ ಆತಂಕದಲ್ಲಿ ಜನರಿದ್ದಾರೆ.

ದೊಡ್ಡತಪ್ಲು ಬಳಿ ಭಾರಿ ಪ್ರಮಾಣದ ಮಣ್ಣು ಹಾಗೂ ಮರಗಳು ರಸ್ತೆಗೆ ಕುಸಿಯುತ್ತಿದ್ದು, ಅಪಾರ ಪ್ರಮಾಣದ ಕಾಫಿ ತೋಟವನ್ನೇ ಆಪೋಶನ ತೆಗೆದುಕೊಂಡು ಕೆಳಗೆ ಬರುತ್ತಿರುವ ಮಣ್ಣಿನ ರಾಶಿ ದೊಡ್ಡ ಅನಾಹುತದ ಸೂಚನೆ ನೀಡುತ್ತಿದೆ. ಶಿರಾಡಿಘಾಟ್ ಭಾಗದಲ್ಲಿ ಮಳೆ ಹೆಚ್ಚಿದಂತೆಲ್ಲ ಆತಂಕ ಹೆಚ್ಚುತ್ತಲೇ ಇದೆ. ಶಿರಾಡಿಘಾಟ್‌ನಲ್ಲಿ ಗುಡ್ಡ ಕುಸಿತ ಮಂಗಳೂರು–ಬೆಂಗಳೂರು ಮಧ್ಯೆ ವಾಹನ ಸಂಚಾರದಲ್ಲಿ ತೀವ್ರ ಆತಂಕ ಸೃಷ್ಟಿಸಿದೆ.

162 ಜನರ ಗುರುತು ಪತ್ತೆ, 120 ಮೃತದೇಹ ಸಂಬಂಧಿಕರಿಗೆ ಹಸ್ತಾಂತರ



ಅಹಮದಾಬಾದ್: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನದಲ್ಲಿ 270 ಜನ ಸಾವನ್ನಪ್ಪಿದ ಐದು ದಿನಗಳ ನಂತರ, ಡಿಎನ್‌ಎ ಹೊಂದಾಣಿಕೆಯ ಮೂಲಕ ಇದುವರೆಗೆ 162 ಜನರನ್ನು ಗುರುತಿಸಲಾಗಿದೆ ಮತ್ತು 120 ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

162ಡಿಎನ್‌ಎ ಮಾದರಿಗಳನ್ನು ಹೊಂದಿಸಲಾಗಿದೆ ಮತ್ತು 120 ಶವಗಳನ್ನು ಈಗಾಗಲೇ ಆಯಾ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ಈ 120 ಮೃತರಲ್ಲಿ ಐದು ಮಂದಿ ವಿಮಾನದಲ್ಲಿ ಇರಲಿಲ್ಲ ಎಂದು ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಕೇಶ್ ಜೋಶಿ ವರದಿಗಾರರಿಗೆ ತಿಳಿಸಿದ್ದಾರೆ.

ಶೀಘ್ರದಲ್ಲೇ ಉಳಿದ ಶವಗಳನ್ನು ಅವರ ಪ್ರೀತಿಪಾತ್ರರಿಗೆ ಹಸ್ತಾಂತರಿಸಲಾಗುವುದು. ಇನ್ನು ಐದು ಕುಟುಂಬಗಳು ಪ್ರಸ್ತುತ ಆಸ್ಪತ್ರೆ ಆಡಳಿತದೊಂದಿಗೆ ಸಂಪರ್ಕದಲ್ಲಿವೆ. ಹೆಚ್ಚುವರಿಯಾಗಿ 17 ಕುಟುಂಬಗಳು ಡಿಎನ್‌ಎ ವಿಶ್ಲೇಷಣೆಯ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ ಎಂದು ಡಾ. ಜೋಶಿ ಅವರು ಹೇಳಿದ್ದಾರೆ.

ಡಾ. ಜೋಶಿ ಅವರು ಮೃತರ ಮತ್ತು ಗುರುತಿಸಲ್ಪಟ್ಟವರ ಜಿಲ್ಲಾವಾರು ಡೇಟಾವನ್ನು ಸಹ ಹಂಚಿಕೊಂಡಿದ್ದು, ಅಹಮದಾಬಾದ್‌ನ 30 ಜನ ಮೃತಪಟ್ಟಿದ್ದು, 13 ಜನ ವಡೋದರಾ ಮೂಲದವರಾಗಿದ್ದಾರೆ. 10 ಮಂದಿ ಖೇಡಾ, ಒಂಬತ್ತು ಮಂದಿ ಆನಂದ್, ಮೆಹ್ಸಾನಾ ಮತ್ತು ಗಾಂಧಿನಗರದ ತಲಾ ಐದು ಮಂದಿ, ನಾಲ್ಕು ಮಂದಿ ಭರೂಚ್‌ನವರು, ಮೂವರು ಸೂರತ್‌ನವರು, ಇಬ್ಬರು ಅರವಳ್ಳಿಯವರು ಮತ್ತು ಬೊಟಾಡ್, ಜುನಾಗಢ್, ಅಮ್ರೇಲಿ, ಮಹಿಸಾಗರ್, ಭಾವನಗರ, ಗಿರ್ ಸೋಮನಾಥ್, ನಾಡಿಯಾಡ್ ಮತ್ತು ರಾಜ್‌ಕೋಟ್ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಗುರುತು ಪತ್ತೆಗಾಗಿ 250 ಮೃತದೇಹಗಳ ಮಾದರಿಯನ್ನು ಪಡೆಯಲಾಗಿದೆ. ಮೃತದೇಹಗಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿರುವ ಕಾರಣ ಡಿಎನ್‌ಎ ಹೊಂದಿಕೆ ಪ್ರಕ್ರಿಯೆಯು ಕ್ಲಿಷ್ಟಕರವಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತ್ತು.

ಜೂನ್ 12 ರಂದು ಮಧ್ಯಾಹ್ನ 1.39ಕ್ಕೆ 242 ಜನರನ್ನು ಹೊತ್ತೊಯ್ಯುತ್ತಿದ್ದ ಏರ್ ಇಂಡಿಯಾದ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ವೈದ್ಯಕೀಯ ಕಾಲೇಜು ಸಂಕೀರ್ಣಕ್ಕೆ ಅಪ್ಪಳಿಸಿತ್ತು.

ಬೆಂಗಳೂರು ಕಾಲ್ತುಳಿತ ಪ್ರಕರಣ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲು

ಕೋರ್ಟ್ ಕೂಡ ಸರ್ಕಾರವನ್ನ ನಂಬಲ್ಲ ಎಂಬುದಕ್ಕೆ ಸಾಕ್ಷಿ

ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ

ಬೆಂಗಳೂರು, ಜೂ.17(ಕೆಎಂಶಿ)– ಕಾಲ್ತುಳಿತ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವುದರ ಅರ್ಥ ಈ ಸರ್ಕಾರದ ಮೇಲೆ ಯಾರಿಗೂ ನಂಬಿಕೆ ಇಲ್ಲ ಎಂಬುದಾಗಿದೆ ಎಂದು ವಿಧಾನ ಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರ ತಪ್ಪು ಮಾಡಿಲ್ಲದಿದ್ದರೆ, ಸರಿಯಾಗಿ ತನಿಖೆ ನಡೆಸಬೇಕಿತ್ತು, ಹೈಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲು ಅವಕಾಶ ಮಾಡಿಕೊಟ್ಟಿದೆ ಎಂದರೆ, ಕೋರ್ಟ್ ಸಹ ಸರ್ಕಾರವನ್ನು ನಂಬುತ್ತಿಲ್ಲ ಎಂದರ್ಥ ಎಂದರು.

ಘಟನೆಯಲ್ಲಿ ಮೃತಪಟ್ಟ 11 ಮಂದಿಯ ಕುಟುಂಬದವರನ್ನೇ ಕೇಳಿ ತನಿಖೆಗೆ ನೀಡಬಹುದಿತ್ತು. ಆದರೆ, ಸರ್ಕಾರ ಮೊದಲು ಜಿಲ್ಲಾಧಿಕಾರಿ, ಆ ನಂತರ ನಿವೃತ್ತ ನ್ಯಾಯಾಧೀಶರು, ಆ ಬಳಿಕ ಎಸ್‌ಐಟಿ ತನಿಖೆ ಎಂಬುದಾಗಿ ಹೇಳಿತು, ಯಾವುದರಲ್ಲೂ ಖಚಿತತೆ ಇಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುಟುಂಬದವರು ಆರ್‌ಸಿಬಿ ತಂಡದ ಕ್ರಿಕೆಟಿಗರ ಜೊತೆ ಫೋಟೋ ಶೂಟ್ ಮಾಡಿಕೊಳ್ಳಲು ಏರ್ಪಡಿಸಿದ ಕಾರ್ಯಕ್ರಮದಿಂದಾಗಿ 11 ಜನ ಮೃತಪಟ್ಟರು.

ಘಟನೆ ಖಂಡಿಸಿ ಬಿಜೆಪಿ ಎಲ್ಲ ಬಗೆಯ ಹೋರಾಟ ಮಾಡುತ್ತಿದೆ. ಮುಂದೆಯೂ ಹೋರಾಟ ಮಾಡಲಿದೆ.



ಸರ್ಕಾರವೇ ಜನರನ್ನು ವಿಧಾನಸೌಧಕ್ಕೆ ಆಹ್ವಾನಿಸಿದೆ, ಇಲ್ಲದಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ. ಬಿಜೆಪಿ ಪ್ರತಿಭಟನೆಗೆ ನೂರಾರು ಪೊಲೀಸರು ಬಂದಿದ್ದರು. ಅದೇ ರೀತಿ ಎರಡು ಲಕ್ಷ ಜನರ ನಿಯಂತ್ರಣಕ್ಕೆ ಹೆಚ್ಚು ಪೊಲೀಸರನ್ನು ನಿಯೋಜಿಸಬೇಕಿತ್ತು. ಘಟನೆ ಕುರಿತು ಚರ್ಚೆಗೆ ವಿಧಾನ ಮಂಡಲದ ಮೂರು ದಿನದ ಅಧಿವೇಶನ ಕರೆಯಲು ಆಗ್ರಹಿಸಿದ್ದೇವೆ. ಸರ್ಕಾರದ ತಪ್ಪಿಲ್ಲ ಎನ್ನುವುದಾದರೆ, ಯಾರ ತಪ್ಪು ಎಂಬುದನ್ನು ಸರಿಯಾಗಿ ತಿಳಿಸಲಿ.

ಬರುವ ಅಕ್ಟೋಬರ್‌ಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಕಥೆ ಮುಗಿಯಲಿದೆ, ಕಾಂಗ್ರೆಸ್‌ನ ಎಲ್ಲ ಶಾಸಕರು ನಾನೇ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುತ್ತಿದ್ದಾರೆ, ಇವರು 2028ರಲ್ಲಿ ಪುನಃ ಅಧಿಕಾರಕ್ಕೆ ಬರಲು ಹೇಗೆ ಸಾಧ್ಯ. ಡಿ.ಕೆ.ಶಿವಕುಮಾರ್ ಇದೇ ಚಿಂತೆಯಲ್ಲಿದ್ದಾರೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪುದುಪೆಟ್ಟೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಹೊಲೊಕಾಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಎಡಗೈಯೇ ಅಪಘಾತಕ್ಕೆ ಕಾರಣ (ಕ)	4 ಪ್ರದರ್ಶನಗಳು
ಲಿಡೋ	
ಮೆರ್ಸಲ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ1ಕ್ಕೆ, ಮ3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ6.50ಕ್ಕೆ, ರಾ.9.30ಕ್ಕೆ

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

4ನೇ ದಿನ, ಬುಧವಾರ, 18–6–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಕಾಗಿನೆಲೆ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಎಗೆನೆಸ್ಟ್ ಆಲ್ ಆಡ್ಸ್ 2. ಡಿ ಅಡ್ಮಿರಲ್ 3. ಧುರಂದರ್

II. ತಕ್ಷಶಿಲಾ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45 ಮ.2.00ಕ್ಕೆ
1. ಕೋಡ್ ಆಫ್ ಹಾನರ್ 2. ಜಸ್ಟ್ ಬ್ಲೂಸ್ 3. ದಿ ಗೋಲ್ಡನ್ ಸನ್‌ರೈಸ್

III ಸೋಮವಾರಪೇಟ್ ಪ್ಲೇಟ್ ಡಿ2–1100 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 ಕ್ರಿಶ್‌ವಿ 2. ಸಮರ್ಥ 3. ಮನಿ ಎಕ್ಸ್‌ಚೇಂಜ್

IV. ತಕ್ಷಶಿಲಾ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಚಾಯ್ಸ್ 2. ವಾಲ್ಟರ್ 3. ನ್ಯಾಚುರಲ್ ಲೈಟ್

V. ಸೋಮವಾರಪೇಟ್ ಪ್ಲೇಟ್ ಡಿ1– 1100 ಮೀ. ರೇಟೆಡ್ 20 ರಿಂದ 45 ಸಂ.3.30ಕ್ಕೆ
1. ಮ್ಯಾಜಿಕಲ್ ಬೇ 2. ಫಾಲ್ಕನ್ ಫ್ಯೂರಿ 3. ಸನ್‌ವೇಲಾಗೂನ್

VI. ಚೆವರ್ಲಿಯರ್ ಟ್ರೋಫಿ –1400 ಮೀ. ರೇಟೆಡ್ 40 ರಿಂದ 65 ಸಂ.4.00ಕ್ಕೆ
1. ವಂದ್ಯದೇವನ್ 2. ಸರ್‌ಡಾರ್ 3. ಮಿಸ್ಟಿಕ್ ಡಿವೈನ್

VII. ಸಟಲೆಜ್ ಪ್ಲೇಟ್–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ ಸಂ.4.30ಕ್ಕೆ
1. ರೈಸ್ ಅಂಡ್ ರೀಜನ್ 2. ಸಿ ದಿ ಸನ್ 3. ವಿಂಟರ್ ಅಜೆಂಡ

VIII. ಲಾಯಲ್ ಪ್ರಿನ್ಸ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65 ಸಂ.5.00ಕ್ಕೆ
1. ಮೆಪಲ್ ಲೀಪ್ 2. ಗ್ರೇಸ್ 3. ಆ್ಯಬ್‌ಸಲ್ಯೂಟ್ ಚಾಲೆಂಜರ್

ದಿನದ ಅತ್ಯುತ್ತಮ	: ರೈಸ್ ಅಂಡ್ ರೀಜನ್
ಡಬ್ಬಲ್	:ಎಗೆನೆಸ್ಟ್ ಆಲ್ ಆಡ್ಸ್, ವಂದ್ಯದೇವನ್
ಜಾಕ್‌ಪಾಟ್	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	: 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4, ಮತ್ತು 5
III ಟ್ರಿಬಲ್	: 6, 7, ಮತ್ತು 8
ಎಕ್ಸ್‌ಆಕ್ಟ್	: 1 ರಿಂದ 8

ಟಿಪ್‌ಸ್ಟರ್ ಪಿಜೆಸಿ

ಎಸ್‌ಎಸ್‌ಸಿ ನೇಮಕಾತಿ ಪರೀಕ್ಷೆಗೆ ತರಬೇತಿ

ಮೈಸೂರು, ಜೂ. 17 – ಮೈಸೂರಿನ ನೇತಾಜಿ ಕರಿಯರ್ ಅಕಾಡೆಮಿ ವತಿಯಿಂದ ಎಸ್‌ಎಸ್‌ಸಿ ನೇಮಕಾತಿ ಪರೀಕ್ಷೆಗಳಿಗೆ ತರಬೇತಿ ಜೂ. 19 ರಿಂದ ಆರಂಭವಾಗಲಿದೆ. ಆಸಕ್ತರು ನಂ. 400, ಆತ್ರೇಯ ಕೃಷ್ಣ ವಿಲಾಸ ರಸ್ತೆ, ಜಗನ್ಮೋಹನ ಅರಮನೆ ಹತ್ತಿರ ಇಲ್ಲಿನ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 6364116745, ದೂ. 0821–3553964 ಸಂಪರ್ಕಿಸಬಹುದು.

ಸೈಪ್ರಸ್‌ನಿಂದ ಕೆನಡಾ ತಲುಪಿದ ಪ್ರಧಾನಿ ಮೋದಿ

ಉಭಯ ರಾಷ್ಟ್ರಗಳ ನಡುವಿನ ಹಳಸಿದ ಸಂಬಂಧ ವೃದ್ಧಿ ಸಾಧ್ಯತೆ!

ಕ್ಯಾಲ್ಗರಿ (ಕೆನಡಾ): ಆಲ್ಬರ್ಟಾದ ಕನನಾಸ್ಕಿಸ್‌ನಲ್ಲಿ ನಡೆಯುತ್ತಿರುವ 51ನೇ ಜಿ7 ಶೃಂಗಸಭೆಯಲ್ಲಿ



ಭಾಗವಹಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಂಗಳವಾರ ಕ್ಯಾಲ್ಗರಿ ತಲುಪಿದ್ದು, ಈ ಭೇಟಿಯಿಂದ ಭಾರತ–ಕೆನಡಾ ಸಂಬಂಧಗಳಲ್ಲಿ ಹದಗೆಟ್ಟ ರಾಜತಾಂತ್ರಿಕ ಸಂಬಂಧಗಳು ವೃದ್ಧಿಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಕೆನಡಾದ ಪ್ರಧಾನ ಮಂತ್ರಿಯಾಗಿದ್ದ ಜಸ್ಟಿನ್ ಟ್ರುಡೊ ಅವರು ಸೆಪ್ಟೆಂಬರ್ 2023 ರಲ್ಲಿ ಭಾರತದ ವಿರುದ್ಧ ಕೆಲ ಆರೋಪಗಳನ್ನು ಮಾಡಿದ್ದರು. ಇದರಿಂದ ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಹದಗೆಟ್ಟಿತ್ತು.

ಖಲಿಸ್ತಾನಿ ಸಿಖ್ ಕಾರ್ಯಕರ್ತ ಹರ್ದೀಪ್ ಸಿಂಗ್ ನಿಜ್ಜರ್ ರನ್ನು ಜೂನ್ 2023ರಲ್ಲಿ ವ್ಯಾಂಕೋವರ್‌ನಲ್ಲಿರುವ ಅವರ ಮನೆಯ ಸಮೀಪ ಪಾರ್ಕಿಂಗ್ ಸ್ಥಳದಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಕೆನಡಾ ಸರ್ಕಾರವು ಭಾರತೀಯ ರಾಯಭಾರಿ ಕಚೇರಿ ಅಧಿಕಾರಿಗಳನ್ನೂ ಆರೋಪಿಗಳನ್ನಾಗಿ ಮಾಡಿತ್ತು. ಆದರೆ. ಕೆನಡಾ ಸರ್ಕಾರದ ಆರೋಪಗಳನ್ನು ಭಾರತ ಸರ್ಕಾರ ತಳ್ಳಿ ಹಾಕಿತ್ತು. ಮಾತ್ರವಲ್ಲದೇ ಕೆನಡಾ ಸರ್ಕಾರದ ವಿರುದ್ಧ ಕಿಡಿಕಾರಿತ್ತು.

ಉಭಯ ರಾಷ್ಟ್ರಗಳ ನಡುವೆ ಸಾಕಷ್ಟು ರಾಜತಾಂತ್ರಿಕ ಜಟಾಪಟಿ ಬೆನ್ನಲ್ಲೇ ಪ್ರಧಾನಿ ಮೋದಿಯವರು ಕೆನಡಾ ನೂತನ ಪ್ರಧಾನಿ ಮಾರ್ಕ್ ಕಾರ್ನಿ ಅವರ ಆಹ್ವಾನದ ಮೇರೆಗೆ ಕೆನಡಾಗೆ ಭೇಟಿ ನೀಡಿದ್ದಾರೆ. ಟ್ರುಡೊ ನಿರ್ಗಮನದ ನಂತರ ಕೆನಡಾದೊಂದಿಗೆ ಸಂಬಂಧಗಳನ್ನು ಪುನರ್ನಿರ್ಮಿಸಲು ಉಭಯ ರಾಷ್ಟ್ರಗಳು ಯತ್ನ ನಡೆಸುವ ಸಾಧ್ಯತೆಗಳಿವೆ.

ಭಾನುವಾರ ಸಂಜೆ ಸೈಪ್ರಸ್‌ಗೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರು, ಭಾರತದ ಅಧಿಕಾರಿಗಳ ನಿಯೋಗ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲೈಡ್ಸ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಉಭಯ ರಾಷ್ಟ್ರಗಳ ಸಂಬಂಧ ವೃದ್ಧಿಗೆ ಹಲವು ಒಪ್ಪಂದಗಳಿಗೆ ಸಹಿ ಹಾಕಲಾಯಿತು.



CHANGE OF NAME

I, Avinash M., residing at No. 17, 1st Cross, 5th Main, Behind Muthu Maheshwari Temple, Kyathamaranahalli Layout, Kalyanagiri, Mysuru-570 019, have changed my daughter's name Advika Nayana Raj to Advika Avinash on my own free will in front of Notary S.N. Hemalatha on 17-6-2025 at Mysuru.

Sd/- Avinash M.



ಕಾಣೆಯಾಗಿದೆ



ಟಾಮಿ

ದಿ 27.05.2025 ರಂದು ವಾಣಿವಿಲಾಸ ರಸ್ತೆ, ವಾಟರ್ ವಾಷ್ ನೌಕರರ ಕ್ವಾಟ್ರಸ್, ಯಾದವಗಿರಿ, ಮೈಸೂರು ಇಲ್ಲಿಂದ ಕಾಣೆಯಾಗಿದೆ. ಕಂಡವರು ಸಂಪರ್ಕಿಸಿ ವಿಜಯ್‌ಕುಮಾರ್

9739111667 | 7899202973

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ವಿಚಾರಣಾಧಿಕಾರಿ ಹಾಗೂ ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಶ್ರೀ.ಎನ್.ನಾರಾಯಣ ಅವರ ಮುಂದೆ

ಆದೇಶ ಸಂಖ್ಯೆ: ಕರಾಹಸಂ/ಪ್ರಕ/ಸಿ/ಪಿಡಿ–09
ದಿನಾಂಕ: 16.05.2025
ಇಲಾಖಾ ವಿಚಾರಣೆ ಸಂಖ್ಯೆ : 01/2025

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ನಂ.1/1 ತಿಮ್ಮಯ್ಯ ರಸ್ತೆ,
ಬೆಂಗಳೂರು–560052 ...ಶಿಸ್ತುಪ್ರಾಧಿಕಾರ

ವಿರುದ್ಧ

ಶ್ರೀ. ಎಸ್.ರಾಜಶೇಖರ್
ಉಪ ವ್ಯವಸ್ಥಾಪಕರು (ಹ & ಲೆ) ಪಿಪಿ2
ಬಿನ್ ದಿವಂಗತ ಆರ್. ಎಸ್.ಸೋಮಣ್ಣ,
ಮನೆ ನಂ.303/2, ನಿಸರ್ಗ ನಿಲಯ,
3ನೇ ಕ್ರಾಸ್ ಅಶೋಕ ನಗರ,
ಮಂಗಳೂರು–575006


...ಕರ್ತವ್ಯಚ್ಯುತಿ ಆಪಾದಿತ ಅಧಿಕಾರಿ

ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ

ಮೇಲ್ಕಂಡ ಪ್ರಕರಣದ ವಿಚಾರಣೆಯನ್ನು ದಿ.10.06.2025 ರಂದು 11:00 ಗಂಟೆಗೆ ನಿಗದಿಪಡಿಸಲಾಗಿತ್ತು. ಆದರೆ ನೀವು ಹಾಜರಾಗಿರುವುದಿಲ್ಲ. ನಿಮ್ಮ ಗೊತ್ತಾದ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿದ ಸೂಚನಾ ಪತ್ರವು ವಿಳಾಸ ಸಾಲದೆಂಬ ಷರಾದೊಂದಿಗೆ ಹಿಂತಿರುಗಿದೆ. ಪುನಃ ದಿ.10.07.2025 ರಂದು ಬೆಳಿಗ್ಗೆ 11:00 ಗಂಟೆಗೆ ಸಂಸ್ಥೆಯ ಪ್ರಧಾನ ಕಛೇರಿ ಕೆಎಸ್‌ಎಫ್‌ಸಿ ಭವನ ನಂ.1/1, ತಿಮ್ಮಯ್ಯ ರಸ್ತೆ, ಬೆಂಗಳೂರು–52 ಇಲ್ಲಿ ವಿಚಾರಣೆಯನ್ನು ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ. ನಿಮ್ಮ ಪ್ರತಿರಕ್ಷಾ ಸಹಾಯಕರನ್ನಾಗಿ ಸಂಸ್ಥೆಯ ಹಾಲಿ ಅಥವಾ ನಿವೃತ್ತ ಉದ್ಯೋಗಿಯೊಬ್ಬರನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ನೇಮಿಸಿಕೊಳ್ಳಬಹುದಾಗಿದೆ. ನಿಮ್ಮ ಪ್ರತಿರಕ್ಷೆಯನ್ನು ನೀವೇ ಸ್ವತಃ ಮಾಡಿಕೊಳ್ಳಲು ಸಹಾ ಅವಕಾಶವಿರುತ್ತದೆ. ಆ ದಿನ ನೀವು ವಿಚಾರಣೆಗೆ ಸಕಾಲಕ್ಕೆ ಹಾಜರಾಗಲು ಈ ಮೂಲಕ ತಿಳುವಳಿಕೆ ನೀಡಲಾಗಿದೆ. ಹಾಗೆ ಆ ದಿನ ಸಕಾಲಕ್ಕೆ ನಿಮ್ಮನ್ನು ಪ್ರತಿನಿಧಿಸಲು ಒಪ್ಪುವ ವ್ಯಕ್ತಿಯೊಡನೆ [ಯಾರಾದರೂ ಇದ್ದಲ್ಲಿ] ಹಾಜರಾಗಲು ನೀವು ತಪ್ಪಿದಲ್ಲಿ ವಿಚಾರಣೆಯನ್ನು ಏಕಪಕ್ಷೀಯವಾಗಿ ನಡೆಸಲಾಗುವುದು ಎಂದು ಸಹಾ ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ವಿಚಾರಣಾಧಿಕಾರಿ
(ಮೊ: 9844585008)

ಇವರಿಗೆ,
ಶ್ರೀ.ಎಸ್.ರಾಜಶೇಖರ್
ಉಪ ವ್ಯವಸ್ಥಾಪಕರು (ಹ&ಲೆ) ಪಿಪಿ2
ಬಿನ್ ದಿವಂಗತ ಆರ್ ಎಸ್ ಸೋಮಣ್ಣ,
ಮನೆ ನಂ. 303/2, ನಿಸರ್ಗ ನಿಲಯ,
3ನೇ ಕ್ರಾಸ್, ಅಶೋಕನಗರ,
ಮಂಗಳೂರು–575006





MSIL
Mysore Sales International Limited
PROJECTS DIVISION
MSIL House, No. 36, Cunningham Road, Bengaluru - 560 052. Ph: 080-22264021-25

No: MSIL/PRJ/073/2025-26 Date : 18.06.2025

E-TENDER NOTIFICATION

(Through e-procurement portal)

Mysore Sales International Limited (A Government of Karnataka Undertaking) invites E-tender through E-procurement platform for Selection of Tenant for Leasing/Renting out Company's Properties at Plot No. 306, Hebbal Industrial Area, Mysuru measuring about 17179 Sq.ft. The documents are available at E-procurement website https://kppp.karnataka.gov.in from 18.06.2025 to 28.06.2025 up to 3.30 p.m. The per bid meeting date: 21.06.2025 at 3.30 p.m.

Sd/- General Manager (Projects), Projects Division.



ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ
ಸಾರ್ವಜನಿಕ ಆಸ್ಪತ್ರೆ ತಿ.ನರಸೀಪುರ ಮೈಸೂರು ಜಿಲ್ಲೆ.571124

ದೂ.ಸಂ.: 08227–295945 ಇಮೇಲ್ : ghnarasipura@gmail.com
ಸಂ.: ಸಾ.ಆ.ತಿ.ನ.ಪು/ಟೆಂಡರ್/ಗ್ರೂಪ್'ಡಿ'/01/2025–26 ದಿ: 13.06.2025

ಹೊರಗುತ್ತಿಗೆ ಗ್ರೂಪ್ – ಡಿ ಸಿಬ್ಬಂದಿಗಳ ಸೇವಾ ಸಂಬಂಧ ಟೆಂಡರ್ ಅಧಿಸೂಚನೆ

ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆ ತಿ.ನರಸೀಪುರ ಇಲ್ಲಿಗೆ 2025–26ನೇ ಸಾಲಿನ ಅವಧಿಗೆ ಹೊರಗುತ್ತಿಗೆ ಗ್ರೂಪ್–ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಸಂಗ್ರಹಣೆ ವೇದಿಕೆ ಮೂಲಕ ದ್ವಿ–ಲಕೋಟೆ ಪದ್ಧತಿ ಮುಖಾಂತರ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.inನಲ್ಲಿ ಸಂಪರ್ಕಿಸುವುದು.

1) ಟೆಂಡರ್ ಅಂದಾಜು ಮೌಲ್ಯ 3072528/– 2) ಟೆಂಡರ್ ಇ.ಎಂ.ಡಿ ಮೌಲ್ಯ 76813/– 3) ಟೆಂಡರ್ ಸಲ್ಲಿಸಲು ಪ್ರಾರಂಭ ದಿ: 16.06.2025 ಬೆಳಿಗ್ಗೆ 10:00 ಗಂಟೆ. 4) ಟೆಂಡರ್ ಸಲ್ಲಿಸಲು ಕೊನೆಯ ದಿ: 15.07.2025 ಸಾಯಂಕಾಲ 04.00 ಗಂಟೆ. 5) ಟೆಕ್ನಿಕಲ್ ಬಿಡ್ ತೆರೆಯುವ ದಿ: 16.07.2025 ಬೆಳಿಗ್ಗೆ 11:00 ಗಂಟೆ. 6) ಹಣಕಾಸು ಬಿಡ್ ತೆರೆಯುವ ದಿ: 18.07.2025 ಮಧ್ಯಾಹ್ನ 03:00 ಗಂಟೆ. 7) ಟೆಂಡರ್ ತೆರೆಯುವ ಸ್ಥಳ ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ತಿ.ನರಸೀಪುರ, ಮೈಸೂರು ಜಿಲ್ಲೆ. 8) ಇ–ಮೇಲ್ ವಿಳಾಸ ghnarasipura@gmail.com 9) ದೂರವಾಣಿ ಸಂಖ್ಯೆ. 08227–295945

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ತಿ.ನರಸೀಪುರ

DIPR/DDMYS/468/KSMCA/288/2025-26

ಸಾರ್ವಜನಿಕರ ಗಮನಕ್ಕೆ ಪತ್ರಿಕಾ ಪ್ರಕಟಣೆ

ಮೈಸೂರು ಸಿಟಿ, ವಿಜಯನಗರ 4ನೇ ಹಂತ, ದೇವರಾಜ ಮೊಹಲ್ಲಾ, ಚೆನ್ನನ್‌ಡಬಲ್ ರೋಡ್ ಪಾರ್ಕ್, 2ನೇ ಫ್ಲಾಟ್ ಮನೆ ನಂ. ಎ/21 ಇಲ್ಲಿ ವಾಸವಾಗಿರುವ ಶ್ರೀ ವರದರಾಜುರವರ ಮಗನಾದ ರಿತೇಶ್‌ಗೌಡ ವಿ. (ಆಧಾರ್ ನಂ. 6479 9470 0981), ಮೊಬೈಲ್ ನಂ. 9741187858 ರವರು ನಮ್ಮ ಕಕ್ಷಿದಾರರಾಗಿದ್ದು. ಅವರು ದಿನಾಂಕ: 29–05–2025 ರಂದು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, "ಹಂಚ್ಯಾ" ಗ್ರಾಮಕ್ಕೆ ಸೇರಿದ ಷೆಡ್ಯೂಲ್ ಸ್ವತ್ತನ್ನು "ಶುದ್ಧಕ್ರಯಕ್ಕೆ ತೆಗೆದುಕೊಳ್ಳಲು ಅದರ ಮಾಲೀಕರಾದ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ನೆಲ್ಲೂರು ಪಾಲ ಅಂಚೆ, ಹಂಚ್ಯಾ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಪಿ. ಚಿಕ್ಕವೀರಪ್ಪಚಾರ್‌ರವರ ಮಗನಾದ ಶ್ರೀ ರಾಜು ಮತ್ತು ಅವರ ಧರ್ಮಪತ್ನಿಯಾದ ಶ್ರೀಮತಿ ಯಶೋಧಮ್ಮ ಮತ್ತು ಅವರ 1ನೇ ರವಿಕುಮಾರ್ ಆರ್, 2ನೇ ವಿಜಯ್‌ಕುಮಾರ್ ಹೆಚ್.ಆರ್. ರವರುಗಳು ದಿನಾಂಕ: 12–06–2025 ರಂದು ನೋಂದಾಯಿತ "ಶುದ್ಧ ಕ್ರಯದ ಒಪ್ಪಂದದ ಅಗ್ರಿಮೆಂಟ್ ಯಾ ಕರಾರು" ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಸದರಿ ಸ್ವತ್ತು ರಾಜು ಬಿನ್ ಲೇಟ್ ಚಿಕ್ಕವೀರಪ್ಪಚಾರ್ ರವರ ಹೆಸರಿಗೆ ಈ ಹಿಂದೆ ಹುಣಸೂರು ಉಪನೋಂದಣಾಧಿಕಾರಿಗಳ ಕಚೇರಿಯ 1ನೇ ಪುಸ್ತಕದ ದಸ್ತಾವೇಜು ಹೆಚ್‌ಯುಎನ್–1–00676–2007–08 ಆಗಿ ಸಿ.ಡಿ. ನಂಬರ್ ಹೆಚ್.ಯು.ಎನ್.ಡಿ 25 ನೇದ್ದರಲ್ಲಿ ದಿನಾಂಕ: 13–04–2007 ರಂದು ರಿಜಿಸ್ಟರ್ ಆಗಿರುವ ವಿಭಾಗ ಪತ್ರದ ಮುಖಾಂತರ ಬಂದು ಸದರಿ ಸ್ವತ್ತು ಅವರ ಸಂಪೂರ್ಣ ಹಕ್ಕು, ಅಧಿಕಾರ, ಹಿತಾಸಕ್ತಿ ಹಾಗೂ ಸ್ವಾಧೀನಾನುಭವ ವನ್ನು ಹೊಂದಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಾದರೂ ಯಾವುದೇ ರೀತಿಯಾದ ಕ್ರಯ, ಭೋಗ್ಯ, ಆಧಾರ, ನ್ಯಾಯಾಲಯದ ಪ್ರಕರಣಗಳು ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ತಕರಾರು ಸಲ್ಲಿಸುವುದಿದ್ದರೆ 7 ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನಮ್ಮ ವಿಳಾಸಕ್ಕೆ ಬರವಣಿಗೆ ಮೂಲಕ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶ ನೀಡಲಾಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, "ಹಂಚ್ಯಾ" ಗ್ರಾಮಕ್ಕೆ ಸೇರಿದ ಸ್ವತ್ತು, ನಮ್ಮ ಕಕ್ಷಿದಾರರು "ಶುದ್ಧ ಕ್ರಯಕ್ಕೆ ತೆಗೆದುಕೊಳ್ಳಲು" ದಿನಾಂಕ: 29–05–2025ರಂದು ಮಾಡಿಕೊಂಡಿರುವ ನೋಂದಾಯಿತವಲ್ಲದ ಶುದ್ಧ ಕ್ರಯ ಒಪ್ಪಂದದ ಅಗ್ರಿಮೆಂಟ್ ಯಾ ಕರಾರು ಪತ್ರದ ಸ್ವತ್ತಿಗೆ ಚಕ್ಕುಬಂಧಿ:

ಪೂರ್ವಕ್ಕೆ: ಹಂಚ್ಯಾ ಗ್ರಾಮ ಠಾಣಾ ; ಪಶ್ಚಿಮಕ್ಕೆ: ಸರ್ವೆ ನಂ. 35/5 ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 71, ಸರ್ವೆ ನಂ. 18 ರ ಜಮೀನುಗಳು ಮತ್ತು ಸರ್ಕಾರಿ ರಸ್ತೆ ; ದಕ್ಷಿಣಕ್ಕೆ: ಪುಟ್ಟಸೋಮಚಾರ್ ರವರ ಜಮೀನು. ಈ ಮಧ್ಯೆ ಇರುವ ಖುಷ್ಕಿ ಸರ್ವೆ ನಂ. (35/6) ಮೂವತ್ತೈದು ಹಿಸ್ಸಾ ನಂಬರ್ ಆರು ಉಳ್ಳದರ ಒಟ್ಟು ವಿಸ್ತೀರ್ಣ (00.20) ಎಕರೆ ಇಲ್ಲಾ ಗುಂಟೆ ಇಪ್ಪತ್ತು ಉಳ್ಳ ಖುಷ್ಕಿ ಜಮೀನು.

Sd/- Avinash. A, M.A., LL.B., Advocate
Off. No. 17, J.P. Trust Building, 1st Floor, Gokula Road, Hunsur-571105. Mob: 8050846315
Date: 17-6-2025